# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಫೆಬ್ರವರಿ 02, 2021

ಸಂಪುಟ : 47 ಸಂಚಿಕೆ : 274 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


# ಆರೋಗ್ಯ ಭಾಗ್ಯ, ಕೃಷಿಗೆ ಸೌಭಾಗ್ಯ

## ಕೇಂದ್ರ ಬಜೆಟ್ : ಆರ್ಥಿಕತೆ ಹಳಿಗೆ ತರಲು ತೆರಿಗೆ - ಸೆಸ್ ಹೊಂದಾಣಿಕೆ ಮಾಡಿದ ಸಚಿವೆ ನಿರ್ಮಲಾ

ನವದೆಹಲಿ, ಫೆ. 1 - ಆರೋಗ್ಯ ವಲಯದ ವೆಚ್ಚ ದುಪ್ಪಟ್ಟುಗೊಳಿಸುವ, ಮೂಲಭೂತ ಸೌಲಭ್ಯ ಹೂಡಿಕೆ ಹೆಚ್ಚಿಸುವ ಹಾಗೂ ಕೃಷಿ ವಲಯಕ್ಕೆ ಸೆಸ್ ಮೂಲಕ ನೆರವು ಕಲ್ಪಿಸುವ ಮೂಲಕ ಆರ್ಥಿಕತೆಯನ್ನು ಕಠಿಣ ಪರಿಸ್ಥಿತಿಯಿಂದ ಹೊರ ತರುವ ಪ್ರಯತ್ನದ ಬಜೆಟ್ ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ್ದಾರೆ.

ಮಂಗಳವಾರದಿಂದ ಜಾರಿಗೆ ಬರುವಂತೆ ಬಂಗಾರ - ಬೆಳ್ಳಿ, ಮದ್ಯ, ಕಲ್ಲಿದ್ದಲು ಹಾಗೂ ಕೃಷಿ ಉತ್ಪನ್ನಗಳ ಮೇಲೆ ನೂತನ ಕೃಷಿ ಮೂಲಭೂತ ಸೌಲಭ್ಯ ಹಾಗೂ ಅಭಿವೃದ್ಧಿ ಸೆಸ್ ಹೇರಿಕೆ ಮಾಡಲಾಗಿದೆ. ಆದರೆ, ಇದರಿಂದ ಗ್ರಾಹಕರ ಮೇಲೆ ಹೆಚ್ಚು ಹೊರೆಯಾಗದಂತಹ ಆಮದು ಸುಂಕಗಳನ್ನು ಕಡಿತಗೊಳಿಸಲಾಗಿದೆ.

ಪೆಟ್ರೋಲ್ ಮೇಲೆ ಲೀಟರ್‌ಗೆ 2.50 ರೂ. ಹಾಗೂ ಡೀಸೆಲ್ ಮೇಲೆ 4 ರೂ.ಗಳ ಸೆಸ್ ವಿಧಿಸಲಾಗಿದೆ. ಆದರೆ, ಇದೇ ಪ್ರಮಾಣದ ಅಬಕಾರಿ ತೆರಿಗೆಯನ್ನು ಕಡಿತಗೊಳಿಸಲಾಗಿದೆ. ಇದರಿಂದಾಗಿ ಗ್ರಾಹಕರ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ.

ಆರೋಗ್ಯ ವಲಯಕ್ಕೆ ಜಿಡಿಪಿಯ ಶೇ.1ರಷ್ಟು ವೆಚ್ಚ ಮಾಡಲು ಸೀತಾರಾಮನ್ ಪ್ರಸ್ತಾಪಿಸಿದ್ದಾರೆ. ಇದರಿಂದಾಗಿ ಆರೋಗ್ಯ ವಲಯ 2.2 ಲಕ್ಷ ಕೋಟಿ ರೂ. ಪಡೆಯಲಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಆರೋಗ್ಯದ ವೆಚ್ಚ 94,452 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಹೀಗಾಗಿ ಮುಂದಿನ ವರ್ಷ ಆರೋಗ್ಯ ವಲಯ ಎರಡು (4ನೇ ಪುಟಕ್ಕೆ)

## ಕೃಷಿಕರು ಬಜೆಟ್‌ನ ಹೃದಯ : ಮೋದಿ

**ನವದೆಹಲಿ, ಫೆ. 1 - ಕೇಂದ್ರ ಬಜೆಟ್ ಆತ್ಮನಿರ್ಭರ್ ದೃಷ್ಟಿಕೋನ ಹೊಂದಿದೆ ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ರೈತರು ಹಾಗೂ ಗ್ರಾಮೀಣರನ್ನು ಹೃದಯ ದಲ್ಲಿಟ್ಟುಕೊಳ್ಳಲಾಗಿದೆ ಎಂದಿದ್ದಾರೆ. ಬಜೆಟ್‌ನಲ್ಲಿ ಕೃಷಿ ವಲಯಕ್ಕೆ ಹೆಚ್ಚು ಒತ್ತು ನೀಡಲಾಗಿದೆ ಹಾಗೂ ರೈತರ ಆದಾಯ ಹೆಚ್ಚಿಸಲಾಗಿದೆ. ಗ್ರಾಮೀಣರು ಹಾಗೂ ಕೃಷಿಕರು ಬಜೆಟ್‌ನ ಹೃದಯ ಎಂದು ಮೋದಿ ತಿಳಿಸಿದ್ದಾರೆ. ಅಸಾಧಾರಣ ಪರಿಸ್ಥಿತಿಯಲ್ಲಿ ಬಜೆಟ್ ಮಂಡಿಸಲಾಗಿದೆ.** (2ನೇ ಪುಟಕ್ಕೆ)

## ವಿದ್ಯುತ್ ಪೂರೈಕೆದಾರರ ಆಯ್ಕೆಗಾಗಿ ಸ್ವಾತಂತ್ರ್ಯ

### ಹೊಸ ವಿದ್ಯುತ್ ವಿತರಣಾ ನೀತಿ ಪ್ರಕಟ

ನವದೆಹಲಿ, ಫೆ. 1 - ವಿದ್ಯುತ್ ಗ್ರಾಹಕರು ತಾವು ಇಚ್ಛೆ ಪಡುವ ಪೂರೈಕೆದಾರರು, ಇಲ್ಲವೇ ಡಿಸ್ಕಾಮ್‌ಗಳನ್ನು ಆಯ್ಕೆ ಮಾಡುವ ಅವಕಾಶ ಕೊಡುವ ನೀತಿ ರೂಪಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾ ರಾಮನ್ ಪ್ರಕಟಿಸಿದ್ದಾರೆ. ಪ್ರಸಕ್ತ ದೇಶಾದ್ಯಂತ ಇರುವ ಡಿಸ್ಕಾಮ್ (ವಿದ್ಯುತ್ ವಿತರಣಾ ಸಂಸ್ಥೆ)ಗಳು ಸರ್ಕಾರಿ (2ನೇ ಪುಟಕ್ಕೆ)



## ಟ್ಯಾಬ್ಲೆಟ್ ಮೂಲಕ ಬಜೆಟ್

### ಮೊದಲ ಬಾರಿಗೆ ಕಾಗದ ರಹಿತ ಆಯವ್ಯಯ ಮಂಡನೆ

ನವದೆಹಲಿ, ಫೆ. 1 - ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಅನ್ನು ಮೊದಲ ಬಾರಿಗೆ ಕಾಗದದ ಕಡತದ ಬದಲು ಟ್ಯಾಬ್ಲೆಟ್ ಮೂಲಕ ಓದಿದರು. 110 ನಿಮಿಷಗಳ ಕಾಲ 2021-22ರ ಬಜೆಟ್ ಮಂಡಿಸಿದ ಸಚಿವೆ ಹಲವು ಹೊಸತುಗಳಿಗೆ ಸಾಕ್ಷಿಯಾದರು.

ಮೊದಲ ಬಾರಿಗೆ ಬಜೆಟ್ ಅನ್ನು ಕಾಗದ ರಹಿತವಾಗಿ ಮಂಡಿಸಲಾಯಿತು. ಬಜೆಟ್ ಭಾಷಣ ಹಾಗೂ ಕಡತ ಗಳನ್ನು ಆನ್‌ಲೈನ್ ಮೂಲಕ ನೀಡಲಾಯಿತು. ಕೆಂಪು ಬಣ್ಣದ ಚೀಲವಾದ ಬಹಿ ಖಾತಾ (4ನೇ ಪುಟಕ್ಕೆ)

## 16.5 ಲಕ್ಷ ಕೋಟಿ ರೂ. ಕೃಷಿ ಸಾಲ

### ಶೇ.100ರವರೆಗೆ ಕೃಷಿ ಮೂಲಭೂತ ಸೌಲಭ್ಯ ಸೆಸ್

ನವದೆಹಲಿ, ಫೆ. 1 - ಸರ್ಕಾರ ರೈತರ ಕಲ್ಯಾಣಕ್ಕೆ ಬದ್ಧವಾಗಿದೆ ಎಂದಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೃಷಿ ಸಾಲ ವಿತರಣೆಯ ಗುರಿಯನ್ನು ಶೇ.10ರಷ್ಟು ಹೆಚ್ಚಿಸಿ 16.5 ಲಕ್ಷ ಕೋಟಿ ರೂ.ಗಳಿಗೆ ನಿಗದಿ ಪಡಿಸಿದ್ದಾರೆ.

ಬಜೆಟ್ ಮಂಡನೆ ವೇಳೆ ಈ ಘೋಷಣೆ ಮಾಡಿರುವ ಅವರು, ಕೃಷಿ ಮೂಲಭೂತ ಸೌಲಭ್ಯ ಹಾಗೂ ಅಭಿವೃದ್ಧಿ ಸೆಸ್ ಅನ್ನು ವಿಧಿಸುವುದಾಗಿ ತಿಳಿಸಿದ್ದಾರೆ. ಕಟಾವಿನ ನಂತರ ರೈತರ ಆದಾಯ ಹೆಚ್ಚಳ ಕ್ಕಾಗಿ ಕೆಲ ಸರಕುಗಳ ಮೇಲೆ ಶೇ.100 ರವರೆಗೆ ಸೆಸ್ ವಿಧಿಸಲು ಪ್ರಸ್ತಾಪಿಸಲಾಗಿದೆ.

ಗ್ರಾಮೀಣ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಧಿ ಹಾಗೂ ಕಿರು ನೀರಾವರಿ ನಿಧಿಗೆ ಹೆಚ್ಚಿನ ಅನುದಾನ ನೀಡಲಾಗುವು ದು ಹಾಗೂ ಎ.ಪಿ.ಎಂ.ಸಿ.ಗಳಿಗೆ ಕೃಷಿ ಮೂಲ ಸೌಲಭ್ಯ ನಿಧಿ ವಿಸ್ತರಿಸಲಾಗುವುದು ಎಂದು ಸೀತಾರಾಮನ್ (4ನೇ ಪುಟಕ್ಕೆ)

## ಆರೋಗ್ಯ ಅನುದಾನ ಶೇ.137ರಷ್ಟು ಹೆಚ್ಚಳ

### ಆತ್ಮನಿರ್ಭರ್ ಸ್ವಸ್ಥ ಭಾರತ ಯೋಜನೆಗೆ 64,180 ಕೋಟಿ ರೂ.

ನವದೆಹಲಿ, ಫೆ. 1 - ಬರುವ 2021-22ರ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಆರೋಗ್ಯ ವಲಯಕ್ಕೆ 2,23,846 ಕೋಟಿ ರೂ.ಗಳನ್ನು ಪ್ರಕಟಿಸಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.137ರಷ್ಟು ಹೆಚ್ಚಾಗಿದೆ. ಇದರಲ್ಲಿ 35 ಸಾವಿರ ಕೋಟಿ ರೂ.ಗಳನ್ನು ಕೊರೊನಾ ಲಸಿಕೆಗೆ ಮೀಸಲಿಡಲಾಗಿದೆ.

ಬಜೆಟ್ ಮಂಡಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಆರೋಗ್ಯವು ಆತ್ಮನಿರ್ಭರ್ ಭಾರತದ ಆರು ಸ್ತಂಭಗಳಲ್ಲಿ ಒಂದಾಗಿದೆ ಎಂದಿದ್ದಾರೆ. ಕೊರೊನಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಆರೋಗ್ಯಕ್ಕೆ ಅಧಿಕ ಒತ್ತು ನೀಡಲಾಗಿದೆ. ಕೊರೊನಾ ಲಸಿಕೆಗಾಗಿ (2ನೇ ಪುಟಕ್ಕೆ)

## ಕೃಷಿಗಾಗಿ ಬಂಗಾರದಿಂದ ಡೀಸೆಲ್, ಸೇಬಿನವರೆಗೆ ಸೆಸ್

ನವದೆಹಲಿ, ಫೆ. 1 - ಕೃಷಿ ಮೂಲಭೂತ ಸೌಲಭ್ಯಗಳಿಗೆ ಒತ್ತು ನೀಡುವ ಸಲುವಾಗಿ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್, ಬಂಗಾರ ಹಾಗೂ ಆಮದು ಕೃಷಿ ಉತ್ಪನ್ನಗಳ ಮೇಲೆ ಸೆಸ್ ಹೇರಿಕೆ ಮಾಡಿದೆ.

ಕೇಂದ್ರ ಕೃಷಿ ಸಚಿವೆ ನಿರ್ಮಲಾ ಸೀತಾ ರಾಮನ್ ಅವರು ಬಜೆಟ್ ಮಂಡಿಸುವಾಗ ಕೃಷಿ ಮೂಲಭೂತ ಸೌಲಭ್ಯ ಹಾಗೂ ಅಭಿವೃದ್ಧಿ ಸೆಸ್ (ಎ.ಐ.ಡಿ.ಸಿ.) ಹೇರಿಕೆ ಮಾಡುವ ಪ್ರಸ್ತಾಪವನ್ನು ಮುಂದಿಟ್ಟಿದ್ದಾರೆ. ಆದರೆ, ಸೆಸ್ ಹೇರಿಕೆ ಮಾಡಿದರೂ, ಬಹುತೇಕ ಸರಕುಗಳಿಗೆ ಜನರು ಹೆಚ್ಚು ಬೆಲೆ ತೆರುವ ಅಗತ್ಯ ಬಾರದು ಎಂದವರು ತಿಳಿಸಿದ್ದಾರೆ.

ಕೃಷಿ ಮೂಲಭೂತ ಸೌಲಭ್ಯವನ್ನು ಹೆಚ್ಚಿಸುವ ತುರ್ತು ಅಗತ್ಯವಿದೆ. ಇದರಿಂದಾಗಿ ನಾವು ಹೆಚ್ಚು ಇಳುವರಿ ಪಡೆಯಲು, ಹೆಚ್ಚು ದಕ್ಷವಾಗಿ ಆಹಾರ ವಸ್ತುಗಳನ್ನು ಸಂಗ್ರಹಿಸಲು ಮತ್ತು ಸಂಸ್ಕರಿಸಲು ಸಾಧ್ಯವಾಗಲಿದೆ ಎಂದು ಸಚಿವೆ (4ನೇ ಪುಟಕ್ಕೆ)



## ಶಾಲೆಗೆ ಬಂದ 9, 11ನೇ ತರಗತಿ ವಿದ್ಯಾರ್ಥಿಗಳು

ದಾವಣಗೆರೆ, ಫೆ.1- ಸರ್ಕಾರದ ಆದೇಶದಂತೆ ಜಿಲ್ಲೆಯಲ್ಲೂ ಸೋಮವಾರದಿಂದ 9 ಹಾಗೂ 11ನೇ ತರಗತಿಗಳ ವಿದ್ಯಾರ್ಥಿಗಳಿಗೂ ಭೌತಿಕ ತರಗತಿಗಳು ಆರಂಭವಾದವು. ನಗರದಲ್ಲಿ ವಿದ್ಯಾರ್ಥಿಗಳು ಹುರುಪಿನಿಂದಲೇ ಶಾಲೆಗಳಿಗೆ ಆಗಮಿಸಿದ್ದರು.

ಕಳೆದೊಂದು ತಿಂಗಳಿನಿಂದ ಶಾಲೆ, ಕಾಲೇಜು ಗಳಿಗೆ ಹಾಜರಾಗುತ್ತಿರುವ 10 ಮತ್ತು 12ನೇ ತರಗತಿ ವಿದ್ಯಾರ್ಥಿಗಳ ಜೊತೆಗೆ 9 ಹಾಗೂ 11ನೇ ತರಗತಿ ವಿದ್ಯಾರ್ಥಿಗಳೂ ಸಹ ಮಾಸ್ಕ್ ಧರಿಸಿ ತರಗತಿಗೆ ಹಾಜರಾಗಿದ್ದರು.

ಕೆಲವಷ್ಟೇ ಶಾಲಾ-ಕಾಲೇಜುಗಳನ್ನು ಹೊರತುಪಡಿಸಿ, ಉಳಿದೆಡೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿತ್ತು. ಶಿಕ್ಷಣ ಇಲಾಖೆಯ ಆದೇಶ ಶನಿವಾರ ಶಿಕ್ಷಕರ ಕೈ ಸೇರಿದ್ದು, ಭಾನುವಾರ ರಜಾ ದಿನವಾಗಿದೆ. ಶಾಲೆಗೆ ಆಗಮಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸಲು ಸಾಧ್ಯವಾಗಿಲ್ಲವಾದ್ದರಿಂದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಲು ಕಾರಣ ಎನ್ನಲಾಗಿದೆ.

9ರಿಂದ 12ನೇ ತರಗತಿಗಳವರೆಗಿನ ಮಕ್ಕಳಿಗೆ ನಿತ್ಯ ಬೆಳಿಗ್ಗೆ 10ರಿಂದ ಸಂಜೆ 4.30 ರವರೆಗೆ. ಶನಿವಾರ ಮಾತ್ರ ಬೆಳಿಗ್ಗೆ 10ರಿಂದ ಮಧ್ಯಾಹ್ನ 12.30ರವರೆಗೆ ಶಾಲಾ, ಕಾಲೇಜು ಗಳಲ್ಲಿ ತರಗತಿ ಬೋಧನೆ ನಡೆಯಲಿದೆ. (2ನೇ ಪುಟಕ್ಕೆ)

## ವಾಲ್ಮೀಕಿ ಜಾತ್ರೆಗೆ ಸರ್ಕಾರದಿಂದ 2 ಕೋಟಿ ರೂ. ಬಿಡುಗಡೆ

### ಅಗತ್ಯ ಸೌಲಭ್ಯಗಳಿಗೆ ಬಳಸಲು ಡಿಸಿ ಸೂಚನೆ

ಮಲೇಬೆನ್ನೂರು, ಫೆ.1 - ವಾಲ್ಮೀಕಿ ಜಾತ್ರೆಯ ತಾತ್ಕಾಲಿಕ ಮೂಲಭೂತ ಸೌಲಭ್ಯಕ್ಕಾಗಿ ಸರ್ಕಾರದಿಂದ 1.99 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ರಾಜನಹಳ್ಳಿಯ ಗುರುಪೀಠದಲ್ಲಿ 3ನೇ ವರ್ಷದ ವಾಲ್ಮೀಕಿ ಜಾತ್ರೆಯ ಅಂಗವಾಗಿ ಜಿಲ್ಲಾಡಳಿತ ಹಾಗೂ ಗುರುಪೀಠದ ಸಹಯೋಗದಲ್ಲಿ ಇಂದು ಹಮ್ಮಿಕೊಂಡಿದ್ದ ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

> **ವಾಲ್ಮೀಕಿ ಜಾತ್ರೆ ಭಾವನಾತ್ಮಕ ಸಂಬಂಧದ ಪ್ರತೀಕ - ರಾಜನಹಳ್ಳಿ ಶ್ರೀ**

ರಸ್ತೆ, ಕುಡಿಯುವ ನೀರು ಸೇರಿದಂತೆ ಇನ್ನಿತರೆ ಅಗತ್ಯ ಸೌಲಭ್ಯಗಳಿಗೆ ಈ ಅನುದಾನವನ್ನು ಬಳಸಿಕೊಳ್ಳಬಹುದೆಂದರು. ಕೋವಿಡ್ ಮಹಾಮಾರಿ ಇನ್ನೂ ಸಂಪೂರ್ಣವಾಗಿ ಹೋಗಿಲ್ಲ, ಹಾಗಾಗಿ ಬಹಳ ಮುಖ್ಯವಾಗಿ ಕೋವಿಡ್ ನಿಮಯಮವಳಿಗಳನ್ನು ಪಾಲಿಸಬೇಕು, ಇದರಲ್ಲಿ ಆರೋಗ್ಯ ಇಲಾಖೆಯ ಪಾತ್ರ ಬಹಳ ಮುಖ್ಯವಾಗಿದೆ ಎಂದರು.

ಜಾತ್ರೆಯಲ್ಲಿ ಈ ಬಾರಿ ರಾಷ್ಟ್ರಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರಿಂದ 10 ರಾಜ್ಯಗಳಿಂದ ಕಲಾವಿದರು ಇಲ್ಲಿಗೆ ಬರುತ್ತಿದ್ದಾರೆ. ಅವರನ್ನು ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡಿಸಿ, ಅವರು ವಾಪಸ್ ಹೋಗುವವರಿಗೂ ಅವರ ಆರೋಗ್ಯ ಮತ್ತು ಭದ್ರತೆ ಬಗ್ಗೆ ನಿಗಾವಹಿಸಬೇಕೆಂದು ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಿದರು.

ಜಾತ್ರೆಯಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಪಾರ್ಕಿಂಗ್ ವ್ಯವಸ್ಥೆ ಬಗ್ಗೆಯೂ ಹೆಚ್ಚು ಶ್ರಮ ವಹಿಸಬೇಕು, ಅಡುಗೆ ತಯಾರು ಮಾಡುವ (4ನೇ ಪುಟಕ್ಕೆ)


## ಗುರುರಾಜ ಬೆಣ್ಣೆದೋಸೆ ಹೋಟೆಲ್ ಮಾಲೀಕ ಮಂಜುನಾಥ್ ಅವರಿಗೆ ಮಾತೃ ವಿಯೋಗ



ದಾವಣಗೆರೆಯ ಹೆಸರಾಂತ ಗುರುರಾಜ ಬೆಣ್ಣೆದೋಸೆ ಹೋಟೆಲ್ ಮಾಲೀಕರೂ, ಕಲಾಕುಂಚ, ಯಕ್ಷರಂಗ ಮತ್ತು ಕನ್ನಡಪರ ಸಂಘಟನೆಗಳ ಮುಖ್ಯಸ್ಥರೂ ಆದ ಕೆ.ಹೆಚ್. ಮಂಜುನಾಥ್ ಅವರ ತಾಯಿಯವರಾದ **ಶ್ರೀಮತಿ ಅಬ್ಬಕ್ಕ ದೇವಾಡಿಗ** ಅವರು ದಿನಾಂಕ 1.2.2021ರ ಸೋಮವಾರ ಸಂಜೆ 4.30ಕ್ಕೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಟೇಶ್ವರದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 92 ವರ್ಷ ವಯಸ್ಸಾಗಿತ್ತು. ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 1.2.2021ರ ಸೋಮವಾರ ರಾತ್ರಿ ಕುಂದಾಪುರ ತಾಲ್ಲೂಕಿನ ಕೋಟೇಶ್ವರದಲ್ಲಿ ನೆರವೇರಿಸಲಾಯಿತು.

- ದುಃಖತಪ್ತ ಕುಟುಂಬ ವರ್ಗ

ಕೆ.ಹೆಚ್.ಮಂಜುನಾಥ್, ಶ್ರೀಮತಿ ವಸಂತಿ ಮಂಜುನಾಥ್
ಗುರುರಾಜ, ಶ್ರೀಮತಿ ರಾಜೇಶ್ವರಿ, ಶ್ರೀಮತಿ ಶಶಿರೇಖಾ ಶ್ರೀಕಾಂತ್
ಶ್ರೀಮತಿ ರಶ್ಮಿ ದೀಪಕ್ ಮತ್ತು ಮೊಮ್ಮಕ್ಕಳು ಮರಿ ಮೊಮ್ಮಕ್ಕಳು.
ಶ್ರೀ ಗುರುರಾಜ ಬೆಣ್ಣೆ ದೋಸೆ ಹೋಟೆಲ್ ದಾವಣಗೆರೆ.



## ಎನ್.ಪಿ.ಎ. ಮರು ಹೊಂದಾಣಿಕೆ, ನಿರ್ವಹಣೆಗೆ ಕಂಪನಿಗಳ ಸ್ಥಾಪನೆ

ನವದೆಹಲಿ, ಫೆ. 1 - ಬ್ಯಾಂಕಿಂಗ್ ವಲಯದಲ್ಲಿರುವ ನಿಷ್ಕ್ರಿಯ ಆಸ್ತಿಗಳನ್ನು ಇತ್ಯರ್ಥಪಡಿಸಲು ಆಸ್ತಿ ಮರು ಹೊಂದಾಣಿಕೆ ಕಂಪನಿ ಹಾಗೂ ಆಸ್ತಿ ನಿರ್ವಹಣೆ ಕಂಪನಿಗಳನ್ನು ಸ್ಥಾಪಿಸುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಪ್ರಕಟಿಸಿದ್ದಾರೆ.

ಬಜೆಟ್‌ನಲ್ಲಿ ಈ ಬಗ್ಗೆ ವಿವರ ನೀಡಿರುವ ಅವರು, ಪ್ರಸ್ತಾಪಿತ ಸಂಸ್ಥೆಗಳಿಂದಾಗಿ ಕೊರೊನಾ ನಂತರದಲ್ಲಿ ಹೆಚ್ಚಾಗಲಿರುವ ಎನ್.ಪಿ.ಎ. ನಿರ್ವಹಿಸಲು ಸಾಧ್ಯವಾಗಲಿದೆ ಎಂದಿದ್ದಾರೆ.

ಬಹುತೇಕ ಬ್ಯಾಂಕುಗಳಿಗೆ ಪ್ರಾವಿಷನ್ ಕವರೇಜ್ ರೇಷಿಯೋ ಶೇ.80ರಷ್ಟಾಗಲಿದೆ. ಹೀಗಾಗಿ ಬ್ಯಾಂಕುಗಳು ಎನ್.ಪಿ.ಎ.ಗೆ ಶೇ.80ರಷ್ಟು ಭಾಗ ನೀಡಬೇಕಾಗುತ್ತದೆ. ಸೆಪ್ಟೆಂಬರ್ 2020ರಲ್ಲಿ (2ನೇ ಪುಟಕ್ಕೆ)

## ಅಭಿವೃದ್ಧಿಗೆ ಪೂರಕ ಬಜೆಟ್



ದಾವಣಗೆರೆ,ಫೆ.1- ಕೊರೊನಾ ಸಾಂಕ್ರಾಮಿಕ ರೋಗದಿಂದ ಉಂಟಾಗಿರುವ ಆರ್ಥಿಕ ಸಂಕಷ್ಟದ ಹೊರತಾಗಿಯೂ ಅಭಿವೃದ್ದಿಗೆ ಪೂರಕವಾದ ಬಜೆಟ್ಟನ್ನು ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ನೀಡಿದ್ದಾರೆ ಎಂದು ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಪ್ರತಿಕ್ರಿಯಿಸಿದ್ದಾರೆ.

ಮೂಲಭೂತ ಸೌಲಭ್ಯ, ಕೃಷಿ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಸಾಕಷ್ಟು ಒತ್ತು ನೀಡಲಾಗಿದೆ. ಕೃಷಿ ಸಾಲವನ್ನು 16.50 ಲಕ್ಷ ಕೋಟಿಗೆ ಏರಿಕೆ ಮಾಡಲಾಗಿದೆ. ಈ ಮೂಲಕ ರೈತರ ಕಲ್ಯಾಣಕ್ಕೆ ಕೇಂದ್ರ ಸರ್ಕಾರ ಬದ್ದ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. ರೈಲ್ವೆ (4ನೇ ಪುಟಕ್ಕೆ)

## ಕೊಳಚೆ ವಾಸಿಗಳಿಗೆ ಆರು ತಿಂಗಳಲ್ಲಿ ಹಕ್ಕುಪತ್ರ

ಬೆಂಗಳೂರು, ಫೆ.1 - ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್ ವ್ಯಾಪ್ತಿಯ ಸರ್ಕಾರಿ ಮಾಲೀಕತ್ವದ ಘೋಷಿತ ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ಆರು ತಿಂಗಳಲ್ಲಿ ಖಾಯಂ ಹಕ್ಕುಪತ್ರ ವಿತರಿಸಲಾಗುವುದು ಎಂದು ವಸತಿ ಸಚಿವ ವಿ.ಸೋಮಣ್ಣ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.

ಸದಸ್ಯ ಜಮೀರ್ ಅಹಮ್ಮದ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ನಿಗಮದ ಮೂಲಕ ಈ ಪ್ರದೇಶ ಗಳನ್ನು ಅಭಿವೃದ್ಧಿಪಡಿಸಲಾಗಿದೆ, ಶೀಘ್ರದಲ್ಲೇ (4ನೇ ಪುಟಕ್ಕೆ)

## ಎಲ್ಲಾ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕ್ಯಾನ್ಸರ್ ಕೇಂದ್ರ

ಬೆಂಗಳೂರು, ಫೆ.1 - ರಾಜ್ಯದ ಎಲ್ಲಾ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕ್ಯಾನ್ಸರ್ ಕೇಂದ್ರ ತೆರೆಯಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ವಿಧಾನಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಅ.ದೇವೇಗೌಡ ಪ್ರಶ್ನೆಗೆ ಉತ್ತರಿಸಿದ ಸಚಿವರು ತುಮಕೂರು, ವಿಜಯಪುರ, ಹಾಸನ, ಮಂಡ್ಯ ವೈದ್ಯಕೀಯ ಕಾಲೇಜಿನಲ್ಲಿ ಕ್ಯಾನ್ಸರ್ ಕೇಂದ್ರ ಪ್ರಾರಂಭಿಸಲು ಉದ್ದೇಶಿಸಿದ್ದು, ಉಳಿದ ಕಾಲೇಜುಗಳಲ್ಲೂ ಹಂತ (3ನೇ ಪುಟಕ್ಕೆ)

## ಬಜೆಟ್ ಪುನಃಶ್ಚೇತನಕ್ಕೆ ಸಂಜೀವಿನಿ



ಬೆಂಗಳೂರು, ಫೆ.1 - ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿ ಇಂದು ಮಂಡಿಸಿದ 2021-22ನೇ ಸಾಲಿನ ಬಜೆಟ್ ಭಾರತದ ಅರ್ಥ ವ್ಯವಸ್ಥೆಯ ಪುನಃಶ್ಚೇತನಕ್ಕೆ ಸಂಜೀವಿನಿಯಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪ್ರತಿಕ್ರಿಯಿಸಿದ್ದಾರೆ.

ಕೊರೊನಾ ಸಾಂಕ್ರಾಮಿಕದಿಂದಾಗಿ ಸ್ಥಗಿತ ಗೊಂಡಿದ್ದ ಅರ್ಥ ವ್ಯವಸ್ಥೆ ಮತ್ತೆ ಚೇತರಿಸಿಕೊಳ್ಳಲು ಬಜೆಟ್ ವೇಗವರ್ಧಕವಾಗಿ ಕೆಲಸ ಮಾಡಲಿದೆ, ಸಾಂಕ್ರಾಮಿಕ ಸಂಕಷ್ಟದ ಈ ಸಂದರ್ಭದಲ್ಲಿ ಇದಕ್ಕಿಂತ ಉತ್ತಮ ಬಜೆಟ್ ನಿರೀಕ್ಷೆ ಅಸಾಧ್ಯ ಎಂದಿದ್ದಾರೆ. ಕೋವಿಡ್ (2ನೇ ಪುಟಕ್ಕೆ)

## ಕೇಂದ್ರದ್ದು ಆತ್ಮ ಬರ್ಬಾದ್ ಬಜೆಟ್



ಬೆಂಗಳೂರು, ಫೆ. 1- ಕೇಂದ್ರ ಬಜೆಟ್ ಕುರಿತು ಯಾವುದೇ ನಿರೀಕ್ಷೆ ಇಲ್ಲ ಎಂಬುದಾಗಿ ತಾವು ಹೇಳಿದ್ದು ನಿಜವಾಗಿದೆ, ಇದು ವಿನಾಶ ಮತ್ತು ದಿವಾಳಿಯ ಬಜೆಟ್ ಆಗಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆತ್ಮನಿರ್ಭರ್ ಯೋಜನೆಯಲ್ಲಿ ಹಣಕಾಸು ಸಚಿವರು ಮೂರು ಪ್ಯಾಕೇಜ್ ಘೋಷಣೆ ಮಾಡಿದ್ದರು, ಈ ಬಜೆಟ್ ಅದರ ಮುಂದುವರೆದ ಭಾಗವಾಗಿದೆ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಆತ್ಮ ಬರ್ಬರ ಬಜೆಟ್ ಕೊಟ್ಟಿದ್ದಾರೆ, ಇದು (2ನೇ ಪುಟಕ್ಕೆ)




# ಮಡಿವಾಳ ಸಮಾಜದ ಮೇಲೆ ಮಲತಾಯಿ ಧೋರಣೆ



**ಹರಪನಹಳ್ಳಿ ತಾಲ್ಲೂಕು ಸಮಾಜದ ಮುಖಂಡರಿಂದ ಅಸಮಾಧಾನ**

ಹರಪನಹಳ್ಳಿ, ಫೆ.1- ಪಟ್ಟಣದ ತಾಲ್ಲೂಕು ಮಿನಿ ವಿಧಾನಸೌಧದಲ್ಲಿ ರಾಷ್ಟ್ರೀಯ ಹಬ್ಬಗಳ ಸಮಿತಿಯಿಂದ ಸಾಂಕೇತಿಕವಾಗಿ, ಸರಳವಾಗಿ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು.

ತಹಶೀಲ್ದಾರ್ ಎಂ.ಎಲ್. ನಂದೀಶ್‌ರವರ ನೇತೃತ್ವದಲ್ಲಿ ಬೆರಳಣಿಕೆಯ ಸಿಬ್ಬಂದಿಯು ಕೇವಲ ಭಾವಚಿತ್ರವಿಟ್ಟು ಹೂವನ್ನು ಹಾಕಿ, ಊದುಬತ್ತಿ ಬೆಳಗಿದರು. ಇದರಿಂದ ಅಸಮಾಧಾನಗೊಂಡ ಸಮಾಜದ ಮುಖಂಡರು ಪೂಜೆಯ ತರುವಾಯ ತಹಶೀಲ್ದಾರ್ ಬಳಿ ಪ್ರಶ್ನಿಸಿದ್ದಾರೆ.

ಜಿಲ್ಲಾ ಮಡಿವಾಳ ಸಮಾಜದ ಅಧ್ಯಕ್ಷ ಯರಬಳ್ಳಿ ಉಮಾಪತಿ, ಪುರಸಭೆ ಸದಸ್ಯ ಅಶೋಕ್ ಹಾರಾಳು, ಮುಖಂಡರು ತಾಲ್ಲೂಕು ಆಡಳಿತ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಎಲ್ಲಾ ಜಯಂತಿಗಳನ್ನು ಉತ್ತಮವಾಗಿ ಆಚರಣೆ ಮಾಡಲಾಗುತ್ತಿದೆ, ಆದರೇ 12ನೇ ಶತಮಾನದ ಶರಣರಲ್ಲಿ ಮಾಚಿದೇವರು ಸಹ ಅಗ್ರಗಣ್ಯರು. ಶರಣರ ಜಯಂತಿ ಆಚರಣೆ ಹಿನ್ನೆಲೆಯಲ್ಲಿ ತಾಲ್ಲೂಕು ಆಡಳಿತ ಸಮಾಜದ ಮುಖಂಡರ ಜೊತೆ ಒಂದು ಪೂರ್ವಭಾವಿ ಸಭೆ ನಡೆಸಿಲ್ಲ. ಆಹ್ವಾನ ಪತ್ರಿಕೆ ಇಲ್ಲ, ಜೊತೆಗೆ ಇಂದು ಜಯಂತಿಗೆ ಯಾವ ಇಲಾಖೆಯ ಅಧಿಕಾರಿಗಳೂ ಬಂದಿಲ್ಲ. ಸಣ್ಣ ಸಮುದಾಯವೆಂದು ಕಡೆಗಣಿಸಿರುವುದು ಬೇಸರ ತರಿಸಿದೆ ಎಂದು ತಹಶೀಲ್ದಾರ್ ಎಲ್. ಆರ್.ನಂದೀಶ್ ಬಳಿ ತಮ್ಮ ಅಳಲನ್ನು ತೋಡಿಕೊಂಡರು.

ಕೋವಿಡ್-19 ಹಿನ್ನೆಲೆಯಲ್ಲಿ ಸರ್ಕಾರದಿಂದ ಯಾವುದೇ ಅನುದಾನ ಇಲ್ಲದೇ ರಾಷ್ಟ್ರೀಯ ಹಬ್ಬಗಳನ್ನು ಹಾಗೂ ಮಹನೀಯರ ಜಯಂತಿಗಳನ್ನು ಅದ್ದೂರಿಯಾಗಿ ಆಚರಿಸದೆ, ಸರಳವಾಗಿಯೇ ಆಚರಿಸಲಾಗುತ್ತಿದೆ. ಜಯಂತಿಗೆ ಗೈರಾಗಿರುವ ಅಧಿಕಾರಿಗಳಿಗೆ ನೋಟಿಸ್ ನೀಡುತ್ತೇನೆ. ಜೊತೆಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತರುತ್ತೇನೆ. ಮುಂಬರುವ ವರ್ಷದಲ್ಲಿ ಮಡಿವಾಳ ಮಾಚಿದೇವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸೋಣ. ಮುಂದೆ ಈ ರೀತಿ ಆಗದಂತೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು ಹಾಗೂ ಮುಖಂಡರ ಸಭೆ ಕರೆಯದಿರುವುದಕ್ಕೆ ವಿಷಾದ ವ್ಯಕ್ತ ಪಡಿಸಿದರು.

ಈ ಸಂದರ್ಭದಲ್ಲಿ ಮಡಿವಾಳ ಸಮುದಾಯದ ಮುಖಂಡರಾದ ಅಂಜಿನಪ್ಪ, ನಾಗರಾಜ್, ದುರುಗಪ್ಪ, ಬಸವರಾಜ್, ಜಿ. ಕೆ.ನಾಗರಾಜ್, ಭರ್ಮಪ್ಪ, ಎಂ.ಬಸವರಾಜ್ ಸೇರಿದಂತೆ ಇತರರು ಇದ್ದರು.

# ಕೇಂದ್ರದ್ದು ಆತ್ಮ ಬರ್ಬಾದ್ ಬಜೆಟ್

**(1ನೇ ಪುಟದಿಂದ)** ಆತ್ಮ ಬರ್ಬಾದ್ ಬಜೆಟ್ ಎಂದರು. ಸಾಮಾನ್ಯ ಜನರು ಬಜೆಟ್ ಕುರಿತು ಸಾಕಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದರು, ಕೊರೊನಾ ಹಿನ್ನೆಲೆಯಲ್ಲಿ ಉತ್ತಮ ಬಜೆಟ್ ನಿರೀಕ್ಷಿಸಿದ್ದರು, ಕೊರೊನಾದಿಂದ ಸಂಕಷ್ಟಕ್ಕೆ ಒಳಗಾದವರಿಗೆ ಯಾವುದೇ ಪರಿಹಾರ ಬಜೆಟ್‌ನಿಂದ ಸಿಕ್ಕಿಲ್ಲ, ದೇಶದ ಆರ್ಥಿಕ ಪರಿಸ್ಥಿತಿ ಅಧೋಗತಿಗೆ ಹೋಗಿರುವುದರಿಂದ ಕೇಂದ್ರ ಸರ್ಕಾರದಿಂದ ಚೇತರಿಕೆಯ ಹಾದಿ ನಿರೀಕ್ಷೆ ಮಾಡಲಾಗಿತ್ತು, ಅದು ಹುಸಿಯಾಗಿದೆ ಎಂದು ಹೇಳಿದ್ದಾರೆ.

ಲಾಕ್‌ಡೌನ್ ಪರಿಣಾಮ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮುಚ್ಚಿ, ಸಾಕಷ್ಟು ಮಂದಿ ಉದ್ಯೋಗ ಕಳೆದುಕೊಂಡಿದ್ದರು, ಕೈಗಾರಿಕೆಗಳ ಪುನಃಶ್ಚೇತನದ ನಿರೀಕ್ಷೆಯೂ ಹುಸಿಯಾಗಿದೆ, ಆರ್ಥಿಕ ತಜ್ಞರು ನೀಡಿದ್ದ ಸಲಹೆಗಳನ್ನೂ ಕೇಂದ್ರ ಸರ್ಕಾರ ಗಾಳಿಗೆ ತೂರಿದೆ.

ಹೊಸದಾಗಿ ಕೃಷಿ ಸೆಸ್ ಘೋಷಿಸಲಾಗಿದೆ, ಶೇಕಡ ಎರಡೂವರೆಯಿಂದ ಶೇಕಡ 100ರಷ್ಟು ಸೆಸ್ ವಿಧಿಸಲಾಗಿದೆ, ಒಂದೆಡೆ ದೇಶಕ್ಕೆ ಬರುವ ಕೃಷಿ ಉತ್ಪನ್ನಗಳ ಮೇಲಿನ ಆಮದು ಸುಂಕ ಕಡಿಮೆ ಮಾಡಿ, ಮತ್ತೊಂದೆಡೆ ಕೃಷಿ ಸೆಸ್ ವಿಧಿಸಲಾಗಿದೆ.

ಗೊಬ್ಬರ, ಸೇಬು, ಯಂತ್ರೋಪಕರಣಗಳು, ಕೃಷಿ ಉತ್ಪನ್ನಗಳ ಮೇಲೆ ಸೆಸ್ ವಿಧಿಸಿ ಆಮದು ಸುಂಕ ಕಡಿಮೆ ಮಾಡಿರುವುದು ಯಾವ ರೀತಿಯ ಆರ್ಥಿಕತೆ ಇದು ಎಂಬುದು ಅರ್ಥವಾಗುತ್ತಿಲ್ಲ, ಇದರ ಬದಲು ರೈತರಿಗೆ ಸಾಲ ವಿತರಣೆ ಕಾರ್ಯಕ್ರಮ ಘೋಷಿಸಬಹುದಾಗಿತ್ತು ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

ರೈತರಿಗೆ ಬಡ್ಡಿ ರಹಿತ ಸಾಲ ನೀಡುವುದು, ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಬಹುದೆಂಬ ನಿರೀಕ್ಷೆ ಇತ್ತು, ಇದು ಬಹುದಿನಗಳ ಬೇಡಿಕೆಯೂ ಆಗಿತ್ತು.

ಕೃಷಿ ಸಾಲದಲ್ಲಿ ಒಂದು ರೂಪಾಯಿಯನ್ನೂ ಮನ್ನಾ ಮಾಡಿಲ್ಲ, ಕೃಷಿ ಸೆಸ್ ಅನ್ನು ರೈತರ ಕಲ್ಯಾಣಕ್ಕೆ ಖರ್ಚು ಮಾಡುವ ಹೊಸ ಕಾರ್ಯಕ್ರಮಗಳ ಘೋಷಣೆ ಬಜೆಟ್‌ನಲ್ಲಿ ಇಲ್ಲ. ಕೃಷಿ ಉತ್ಪನ್ನಗಳ ಬೆಲೆ ಕುಸಿದಾಗ ಮಾರುಕಟ್ಟೆ ಮಧ್ಯೆ ಪ್ರವೇಶ ಮಾಡಿ ಬೆಂಬಲ ಬೆಲೆ ನೀಡುವ ಪ್ರಯತ್ನ ಆಗಿಲ್ಲ ಎಂದವರು ಹೇಳಿದ್ದಾರೆ.

ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ, ವಿದ್ಯುತ್ ಕ್ಷೇತ್ರ ಖಾಸಗೀಕರಣವಾದರೆ, ಕಡಿಮೆ ಬೆಲೆಗೆ ವಿದ್ಯುತ್ ನೀಡಲು ಸಾಧ್ಯವೇ? ವಿಮಾ ಕ್ಷೇತ್ರದಲ್ಲಿ ಶೇ. 74ರಷ್ಟು ಖಾಸಗಿ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಡಲಾಗಿದೆ ಎಂದರು.

ವಿಧಾನಸಭಾ ಚುನಾವಣೆ ನಡೆಯಲಿರುವ ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು ಮತ್ತು ಅಸ್ಸಾಂ ರಾಜ್ಯಗಳಿಗೆ ಹೆಚ್ಚು ಹಣ ನೀಡಲಾಗಿದೆ ಎಂದವರು ಆಕ್ಷೇಪಿಸಿದ್ದಾರೆ.

# ಅನುದಾನ ಶೇ.137ರಷ್ಟು ಹೆಚ್ಚಳ

**(1ನೇ ಪುಟದಿಂದ)** 35 ಸಾವಿರ ಕೋಟಿ ರೂ.ಗಳನ್ನು ನೀಡಲಾಗಿದೆ. ಅಗತ್ಯವಾದರೆ ಇನ್ನಷ್ಟು ಅನುದಾನ ನೀಡಲಾಗುವುದು ಎಂದು ಸೀತಾರಾಮನ್ ತಿಳಿಸಿದ್ದಾರೆ. ದೇಶದ ಅಭಿವೃದ್ಧಿಯಲ್ಲಿ ಆರೋಗ್ಯದ ಮಹ ತ್ವವನ್ನು ಒತ್ತಿ ಹೇಳಿರುವ ಸೀತಾರಾಮನ್, ಕಳೆದ ವರ್ಷ ಆರೋಗ್ಯ ವಲಯಕ್ಕೆ 94,452 ಕೋಟಿ ರೂ. ಅನುದಾನ ನೀಡಲಾಗಿತ್ತು. ಈ ವರ್ಷ 2,23,846 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ ಎಂದು ತಿಳಿಸಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ 71,268.77 ಕೋಟಿ ರೂ. ನೀಡಲಾಗಿದೆ. ಕಳೆದ ವರ್ಷ ಇಲಾಖೆಗೆ 65,011.8 ಕೋಟಿ ರೂ. ನೀಡಲಾಗಿತ್ತು. ನಂತರ ಕೊರೊನಾ ಹಿನ್ನೆಲೆಯಲ್ಲಿ ಅನುದಾನವನ್ನು 78,866 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿತ್ತು.

ಕೇಂದ್ರ ಸರ್ಕಾರ ಪ್ರಾಯೋಜಿತವಾದ ಪ್ರಧಾನ ಮಂತ್ರಿ ಆತ್ಮನಿರ್ಭರ್ ಸ್ವಸ್ಥ ಭಾರತ್ ಯೋಜನೆ ಆರಂಭಿಸುವುದಾಗಿಯೂ ಸೀತಾರಾಮನ್ ಪ್ರಕಟಿಸಿದ್ದಾರೆ. ಆರು ವರ್ಷಗಳಿಗೆ 64,180 ಕೋಟಿ ರೂ.ಗಳನ್ನು ಯೋಜನೆಗೆ ಒದಗಿಸಲಾಗಿದೆ.

ಈ ಯೋಜನೆ ಮೂಲಕ ಪ್ರಾಥಮಿಕ, ಮಾಧ್ಯಮ ಹಾಗೂ ತೃತೀಯ ಹಂತಗಳಲ್ಲಿ ಆರೋಗ್ಯ ವ್ಯವಸ್ಥೆಗಳನ್ನು ಬಲಗೊಳಿಸಲಾಗು ವುದು. ಈಗಿರುವ ರಾಷ್ಟ್ರೀಯ ಸಂಸ್ಥೆಗಳನ್ನು ಬಲಗೊಳಿಸಲಾಗುವುದು ಹಾಗೂ ಹೊಸ ಸಂಸ್ಥೆಗಳನ್ನು ಕಟ್ಟಲಾಗುವುದು. ಹೊಸದಾಗಿ ಕಂಡು ಬರುತ್ತಿರುವ ರೋಗಗಳನ್ನು ಎದುರಿಸಲೂ ಈ ನಿಧಿ ನೆರವಾಗಲಿದೆ. ರಾಷ್ಟ್ರೀಯ ಆರೋಗ್ಯ ಯೋಜನೆ (ಎನ್.ಹೆಚ್.ಎಂ.)ಗೆ ಹೆಚ್ಚುವರಿ ಯಾಗಿ ಈ ಅನುದಾನ ನೀಡಲಾಗುವುದು.

ಗ್ರಾಮೀಣ ಭಾಗಕ್ಕೆ 17,788 ಕೋಟಿ ರೂ. ಹಾಗೂ ನಗರ ಆರೋಗ್ಯ ಕೇಂದ್ರಗಳಿಗೆ 11,025 ಕೋಟಿ ರೂ.ಗಳನ್ನು ಈ ಯೋಜನೆಯಡಿ ನೀಡಲಾಗುವುದು. ಯೋಜನೆಯ ಅನ್ವಯ ಎಲ್ಲಾ ಜಿಲ್ಲೆಗಳಲ್ಲಿ ಆರೋಗ್ಯ ಲ್ಯಾಬ್‌ಗಳನ್ನು ಹಾಗೂ 11 ರಾಜ್ಯಗಳಲ್ಲಿ 3,382 ಬ್ಲಾಕ್ ಹಂತದ ಆರೋಗ್ಯ ಘಟಕಗಳನ್ನು ಸ್ಥಾಪಿಸಲಾಗುವುದು. 602 ಜಿಲ್ಲೆಗಳಲ್ಲಿ ತೀವ್ರ ನಿಗಾ ಘಟಕಗಳು ಹಾಗೂ 12 ಕೇಂದ್ರೀಯ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು.

2021-22ರ ಬಜೆಟ್‌ನಲ್ಲಿ ಆರೋಗ್ಯ ಸಂಶೋಧನಾ ಇಲಾಖೆಗೆ 2,663 ಕೋಟಿ ರೂ.ಗಳ ಅನುದಾನ ನೀಡಲಾಗಿದೆ. ಆಯುಷ್ ಇಲಾಖೆಗೆ 2,970.30 ಕೋಟಿ ರೂ.ಗಳ ಅನುದಾನ ನೀಡಲಾಗಿದೆ.

# ಎಲೆಬೇತೂರಿನಲ್ಲಿ ಪೋಲಿಯೋ ಕಾರ್ಯಕ್ರಮ



ದಾವಣಗೆರೆ, ಫೆ.1 - ತಾಲ್ಲೂಕಿನ ಎಲೆಬೇತೂರು ಗ್ರಾಮದ ಉಪಕೇಂದ್ರದಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ನಡೆಯಿತು.

ಕಕ್ಕರಗೊಳ್ಳ ಜಿ.ಪಂ. ಸದಸ್ಯರಾದ ಶ್ರೀಮತಿ ರೇಣುಕಾ ಕರಿಬಸಪ್ಪ ಮಗುವಿಗೆ ಪೋಲಿಯೋ ಹನಿ ಹಾಕಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ|| ಆಶಾ ಭಾನುಪ್ರಕಾಶ್ ಮಾತನಾಡಿದರು.

ತಾ.ಪಂ. ಸದಸ್ಯರಾದ ಬಿ.ಜಿ. ಸಂಗನಗೌಡ್ರು, ಗ್ರಾ.ಪಂ. ಶ್ರೀಮತಿ ಜಯಮ್ಮ ಬಸವರಾಜಯ್ಯ, ತಾಲ್ಲೂಕು ಕಸಾಪ ನಿರ್ದೇಶಕ ಎಂ. ಷಡಕ್ಷರಪ್ಪ, ಬೇತೂರು ಉಪಕೇಂದ್ರದ ಕಿರಿಯ ಆರೋಗ್ಯ ಸಹಾಯಕಿ ಮಿಲ್ಕಾ ಡಿ, ಪಲ್ಸ್ ಪೋಲಿಯೋ ಮೇಲ್ವಿಚಾರಕರಾದ ಶಿವಶಂಕರ್, ಕಿರಣ್‌ಕುಮಾರ್, ಆಶಾ ಕಾರ್ಯಕರ್ತೆಯರಾದ ಸಿದ್ದಮ್ಮ, ರೂಪಾ, ಸುಜಾತಾ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ವಿದ್ಯುತ್ ಪೂರೈಕೆದಾರರ ಆಯ್ಕೆಗಾಗಿ ಸ್ವಾತಂತ್ರ್ಯ

**(1ನೇ ಪುಟದಿಂದ)** ಮಾಲೀಕತ್ವದವುಗಳಾಗಿವೆ. ಈ ಸಂಸ್ಥೆಗಳು ನಿರಂತರ 24 ಗಂಟೆ ವಿದ್ಯುತ್ ಪೂರೈಸಲು ಸಾಧ್ಯವಾಗುತ್ತಿಲ್ಲ. ಹಣಕಾಸು ಸಮಸ್ಯೆಯನ್ನೂ ಎದುರಿಸುತ್ತಿವೆ.

ಡಿಸ್ಕಾಮ್‌ಗಳು ಏಕಸ್ವಾಮ್ಯದವು. ಗ್ರಾಹಕರು ಸೇವಾದಾರರನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಬೇಕಿದೆ. ಈ ಬಗ್ಗೆ ಪರ್ಯಾಯ ವ್ಯವಸ್ಥೆಯನ್ನು ರೂಪಿಸಬೇಕಿದೆ ಎಂದು ಬಜೆಟ್ ಮಂಡನೆ ವೇಳೆ ಸೀತಾರಾಮನ್ ಹೇಳಿದ್ದಾರೆ.

ಡಿಸ್ಕಾಮ್‌ಗಳ ಹಣಕಾಸು ಒತ್ತಡದ ಬಗ್ಗೆ ಪ್ರಸ್ತಾಪಿಸಿದ ಅವರು, ಡಿಸೆಂಬರ್ 2020ರವರೆಗೆ ಈ ಕಂಪನಿಗಳ ಬಾಕಿ 1.35 ಲಕ್ಷ ಕೋಟಿ ರೂ.ಗಳಾಗಿದೆ ಎಂದರು. ಮುಂದಿನ ಆರು ವರ್ಷಗಳಲ್ಲಿ 139 ಜಿಡಬ್ಲ್ಯೂ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಸೇರ್ಪಡೆಯಾಗಲಿದೆ. 2.8 ಕೋಟಿ ಮನೆಗಳು ವಿದ್ಯುತ್ ಸಂಪರ್ಕಕ್ಕೆ ಬರಲಿವೆ. 1.41 ಲಕ್ಷ ಸರ್ಕಿಟ್ ಕಿಲೋಮೀಟರ್‌ಗಳ ವಿದ್ಯುತ್ ಜಾಲವನ್ನು ಅಳವಡಿಕೆ ಮಾಡಲಾಗುವುದು ಎಂದು ಸಚಿವೆ ತಿಳಿಸಿದ್ದಾರೆ.

# ಬಜೆಟ್ ಪುನಃಶ್ಚೇತನಕ್ಕೆ ಸಂಜೀವಿನಿ

**(1ನೇ ಪುಟದಿಂದ)** ಲಸಿಕೆ ಅಭಿಯಾನಕ್ಕೆ 35,000 ಕೋಟಿ ರೂ. ಒದಗಿಸಿದ್ದು, ಇನ್ನೂ ಹೆಚ್ಚಿನ ಹಣದ ಅಗತ್ಯ ಬಿದ್ದಲ್ಲಿ ಒದಗಿಸುವುದಾಗಿ ಕೇಂದ್ರ ಸಚಿವೆ ತಿಳಿಸಿರುವುದು ಸ್ವಾಗತಾರ್ಹ ಎಂದವರು ತಿಳಿಸಿದ್ದಾರೆ.

ಕೃಷಿ ಕ್ಷೇತ್ರದ ಬಲವರ್ಧನೆ, ಅನ್ನದಾತ ರೈತರ ಅಭಿವೃದ್ಧಿಗೆ ಪ್ರಾಮುಖ್ಯತೆ, ಕೌಶಲ್ಯ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಕೈಗಾರಿಕಾ ಬೆಳವಣಿಗೆಗೆ ಈ ಬಜೆಟ್‌ನಲ್ಲಿ ವಿಶೇಷ ಗಮನ ನೀಡಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನಂತೆ 2022 ರೊಳಗೆ ರೈತರ ಆದಾಯ ದ್ವಿಗುಣಗೊಳಿಸುವ ಉದ್ದೇಶಕ್ಕೆ ಬಜೆಟ್ ಭೂಮಿಕೆ ಒದಗಿಸಿದೆ.

ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿಗೆ 16.50 ಲಕ್ಷ ಕೋಟಿ ರೂ. ನಿಗದಿ ಮಾಡಲಾಗಿದೆ, ಎ.ಪಿ.ಎಂ.ಸಿ ವ್ಯವಸ್ಥೆ ಮುಂದುವರಿಕೆ ಮತ್ತು ಬಲವರ್ಧನೆಗೆ ಒತ್ತು ನೀಡಲಾಗಿದೆ.

ಕೃಷಿ ಮಾರುಕಟ್ಟೆಗಳಿಗೆ ಮೂಲಭೂತ ಸೌಕರ್ಯಗಳಿಗಾಗಿ ನಿಧಿ, ಅತಿಸಣ್ಣ ನೀರಾವರಿ ಯೋಜನೆ ಅನುದಾನವನ್ನು 2 ಪಟ್ಟು ಹೆಚ್ಚಿಸಿರುವುದು ಮತ್ತು 22 ಬೆಳೆಗಳಿಗೆ ಮೌಲ್ಯವರ್ಧನೆ ಯೋಜನೆ ಘೋಷಿಸಿರುವುದು ರೈತರಿಗೆ ನೆರವಾಗಲಿದೆ, ಮಿತ ವೆಚ್ಚದ ಮನೆ ನಿರ್ಮಾಣ ಮಾಡುವವರಿಗೆ ತೆರಿಗೆ ರಜೆ ನೀಡಿರುವುದು ಸ್ವಾಗತಾರ್ಹ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ವಿದ್ಯುತ್ ವಲಯಕ್ಕೆ 3 ಲಕ್ಷ ಕೋಟಿ ರೂ., ಸಾರ್ವಜನಿಕ ಬಸ್ ಸಾರಿಗೆ ವ್ಯವಸ್ಥೆಗೆ 18 ಸಾವಿರ ಕೋಟಿ ರೂ. ಮೀಸಲಿಟ್ಟಿರುವುದು ನಗರ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ಕಡಿತಗೊಳಿಸಲು ಸಹಕಾರಿಯಾಗಿದೆ.

ಆರೋಗ್ಯ ಕ್ಷೇಮ ಕೇಂದ್ರಗಳಿಗೆ 64,180 ಕೋಟಿ ರೂ. ಸೇರಿದಂತೆ, ಆರೋಗ್ಯ ವಲಯಕ್ಕೆ 2.23 ಲಕ್ಷ ಕೋಟಿ ರೂ. ಮತ್ತು ಸ್ವಚ್ಛ ನಗರ ಅಭಿಯಾನಕ್ಕೆ 1.41 ಲಕ್ಷ ಕೋಟಿ ರೂ. ಅನುದಾನ ಒದಗಿಸಿರುವುದು ಸ್ವಾಗತಾರ್ಹ ಕ್ರಮವಾಗಿದೆ.

ನಗರ ಪ್ರದೇಶಗಳ ಕುಡಿಯುವ ನೀರು ಸೌಲಭ್ಯಕ್ಕೆ 87 ಸಾವಿರ ಕೋಟಿ ರೂ. ವೆಚ್ಚದ ನಗರ ಜಲ ಜೀವನ್ ಮಿಷನ್, ಕೌಶಲ್ಯಾಭಿವೃದ್ಧಿಗೆ 3 ಸಾವಿರ ಕೋಟಿ ರೂ, ಸಂಶೋಧನಾ ಕ್ಷೇತ್ರಕ್ಕೆ 5 ವರ್ಷಗಳಲ್ಲಿ 50 ಸಾವಿರ ರೂ. ವೆಚ್ಚ.

ಶಿಕ್ಷಣ ಕ್ಷೇತ್ರದಲ್ಲಿ ಪರಿಶಿಷ್ಟ ವಿದ್ಯಾರ್ಥಿಗಳ ಶಿಷ್ಯವೇತನ ಮೊತ್ತ 32 ಸಾವಿರ ಕೋಟಿ ರೂ.ಗಳಿಗೆ ಹೆಚ್ಚಳ ಇತ್ಯಾದಿ ಯೋಜನೆಗಳು ದೇಶದ ಬೆಳವಣಿಗೆಗೆ ನೀಡಿರುವ ಆದ್ಯತೆಯ ದ್ಯೋತಕಗಳಾಗಿವೆ.

ಅಪೌಷ್ಠಿಕತೆ ವಿರುದ್ಧ ಹೋರಾಡಲು ಮಿಷನ್ ಪೋಷಣ್-2.0 ಯೋಜನೆ ರೂಪಿಸಿರುವುದು ಸಕಾಲಿಕವಾಗಿದೆ, 75 ವರ್ಷ ಮೀರಿದ ಹಿರಿಯ ನಾಗರಿಕರಿಗೆ ಆದಾಯ ತೆರಿಗೆ ರಿಟರ್ನ್ ಸಲ್ಲಿಕೆಯಿಂದ ವಿನಾಯಿತಿ ನೀಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ನಿರ್ವಹಣೆಗೆ ಕಂಪನಿಗಳ ಸ್ಥಾಪನೆ

**ಕೊರೊನಾ ನಂತರದಲ್ಲಿ ಎನ್.ಪಿ.ಎ. ಗಣನೀಯವಾಗಿ ಹೆಚ್ಚಾಗುವ ಹಿನ್ನೆಲೆಯಲ್ಲಿ ಕ್ರಮ**

**(1ನೇ ಪುಟದಿಂದ)** ಎನ್‌ಪಿಎ ಪ್ರಮಾಣ ಶೇ.7.5ರಷ್ಟಿದೆ. ಇದು ಸೆಪ್ಟೆಂಬರ್ 2021ರ ವೇಳೆಗೆ ಶೇ.13.5ಕ್ಕೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ರಿಸರ್ವ್ ಬ್ಯಾಂಕ್ ಕಳೆದ ವರ್ಷ ಬಿಡುಗಡೆ ಮಾಡಿದ್ದ ಹಣಕಾಸು ಸ್ಥಿರತೆ ವರದಿ (ಎಫ್.ಎಸ್.ಆರ್.)ಯಲ್ಲಿ ತಿಳಿಸಿತ್ತು.

ಸಮಗ್ರ ಆರ್ಥಿಕ ವ್ಯವಸ್ಥೆ ತೀವ್ರ ಒತ್ತಡಕ್ಕೆ ಸಿಲುಕಿದರೆ ನಿಷ್ಕ್ರಿಯ ಆಸ್ತಿಗಳ ಪ್ರಮಾಣ ಶೇ.14.8ರವರೆಗೂ ತಲುಪಬಹುದು ಎಂದು ಅಂದಾಜಿಸಲಾಗಿದೆ.

ಎನ್.ಪಿ.ಎ. ನಿರ್ವಹಿಸುವ ಸಲುವಾಗಿ ಕೆಟ್ಟ ಬ್ಯಾಂಕ್ ಒಂದನ್ನು ಸ್ಥಾಪಿಸುವ ಪ್ರಸ್ತಾವನೆ ಪರಿಶೀಲಿಸಬಹುದು ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತದಾಸ್ ಕಳೆದ ತಿಂಗಳು ಹೇಳಿದ್ದರು.

# ಹರಿಹರದ ತಹಶೀಲ್ದಾರ್ ಕಚೇರಿಯಲ್ಲಿ ಮಡಿವಾಳ ಮಾಚಿದೇವ ಜಯಂತಿ



ಹರಿಹರ, ಫೆ.1- ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಮಡಿವಾಳ ಮಾಚಿದೇವ ಜಯಂತಿಯನ್ನು ಸರಳವಾಗಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಾಸಕ ಎಸ್. ರಾಮಪ್ಪ ಮಡಿವಾಳ ಮಾಚಿದೇವ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ಮಡಿವಾಳ ಸಮಾಜದ ಎಂ.ಹೆಚ್. ಭೀಮಪ್ಪ, ಮಲ್ಲೇಶಪ್ಪ, ಸಂಗೀತ ಜೋಷಿ ಇನ್ನಿತರರಿದ್ದರು.

# ಹೊನ್ನಾಳಿಯಲ್ಲಿ ವೀರಶೈವ ಪುರೋಹಿತ ಮಹಾಸಭಾದಿಂದ ವಿಚಾರ ಸಂಕಿರಣ

> **"ಇಂದಿನಿಂದ ಮೂರು ದಿನ ನಡೆಯುವ ಕಾರ್ಯಕ್ರಮದಲ್ಲಿ ವೀರಶೈವ ಷೋಡಶ ಸಂಸ್ಕಾರಗಳ ಬಗ್ಗೆ ವಿಚಾರ ಸಂಕಿರಣ, ಧರ್ಮ ಸಭೆ, ಜಾತಕ ಕರ್ಮ, ನಾಮಕರಣ ಮತ್ತು ಡೋಲಾರೋಹಣ, ಷೋಡಶ ಸಂಸ್ಕಾರಗಳಿಗೆ ಮೂಹೂರ್ತಗಳು ಎಂಬ ವಿಷಯಗಳ ಮೇಲೆ ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು ಏರ್ಪಾಡಾಗಿವೆ.**

ಹೊನ್ನಾಳಿ, ಫೆ.1- ಅಖಿಲ ಕರ್ನಾಟಕ ವೀರಶೈವ ಪುರೋಹಿತ ಮಹಾಸಭಾ ವತಿಯಿಂದ ಹೊನ್ನಾಳಿ ಹಿರೇಕಲ್ಮಠದಲ್ಲಿ ಪ್ರಥಮ ಅಧಿವೇಶನ ಹಾಗೂ ವೀರಶೈವ ಷೋಡಶ ಸಂಸ್ಕಾರಗಳ ಬಗ್ಗೆ ವಿಚಾರ ಸಂಕಿರಣ ಭಾಗ-1 ಕಾರ್ಯಕ್ರಮವನ್ನು ನಾಳೆ ದಿನಾಂಕ 2ರಿಂದ ಮೂರು ದಿನ ಹಮ್ಮಿಕೊಳ್ಳಲಾಗಿದೆ ಎಂದು ಮಹಾಸಭಾದ ರಾಜ್ಯ ನಿರ್ದೇಶಕ ಬೆನಕಯ್ಯ ಶಾಸ್ತ್ರಿ ಹೇಳಿದರು.

ಹಿರೇಕಲ್ಮಠದಲ್ಲಿ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖದಲ್ಲಿ ಇಂದು ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಾಳೆ ಮಂಗಳವಾರ ಬೆಳಿಗ್ಗೆ 8 ಕ್ಕೆ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಹಿರೇಕಲ್ಮಠದವರೆಗೆ ಪ್ರಥಮ ಅಧಿವೇಶನದ ಮೆರವಣಿಗೆ ನಡೆಯುವುದು. ಬೆಳಿಗ್ಗೆ 10 ಗಂಟೆಗೆ ನಡೆಯುವ ಉದ್ಘಾಟನಾ ಸಮಾರಂಭದ ಸಾನಿಧ್ಯವನ್ನು ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ವಹಿಸುವರು. ಹೊಟ್ಯಾಪುರ ಮಠದ ಗಿರಿಸಿದ್ದೇಶ್ವರ ಸ್ವಾಮೀಜಿ, ರಾಂಪುರ ಮಠದ ಸದ್ಗುರು ಶಿವಕುಮಾರ ಹಾಲಸ್ವಾಮಿಗಳು ನೇತೃತ್ವ ವಹಿಸುವರು. ಅಖಿಲ ಕರ್ನಾಟಕ ವೀರಶೈವ ಪುರೋಹಿತ ಮಹಾಸಭಾ ರಾಜ್ಯಾಧ್ಯಕ್ಷ ಚನ್ನೇಶ ಶಾಸ್ತ್ರಿ ಮಠದ ಅಧ್ಯಕ್ಷತೆ ವಹಿಸುವರು.

ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಸಮಾರಂಭ ಉದ್ಘಾಟಿಸಲಿದ್ದು, ಮಾಜಿ ಶಾಸಕ ಡಿ.ಜಿ. ಶಾಂತನಗೌಡ, ರಾಜ್ಯ ಸರ್ಕಾರದ ಕೊಳಗೇರಿ ಅಭಿವೃದ್ಧಿ ಮಂಡಳಿ ನಿರ್ದೇಶಕಿ ಗೀತಾ ರವೀಂದ್ರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಚ್.ಬಿ. ಮಂಜಪ್ಪ, ಜೆಡಿಎಸ್ ಜಿಲ್ಲಾಧ್ಯಕ್ಷ ಚಿದಾನಂದಪ್ಪ, ಹಿರಿಯ ಚಲನಚಿತ್ರ ನಟ ದೊಡ್ಡಣ್ಣ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಮಧ್ಯಾಹ್ನ 2.30 ರಿಂದ ಸಂಜೆ 5.30ರವರೆಗೆ ವೀರಶೈವ ಷೋಡಶ ಸಂಸ್ಕಾರಗಳ ಬಗ್ಗೆ ವಿಚಾರ ಸಂಕಿರಣ ಭಾಗ-1 ಕಾರ್ಯಕ್ರಮದಲ್ಲಿ 'ಗರ್ಭದಾನ' ವಿಷಯ ಕುರಿತು ತುಮಕೂರಿನ ಕೆ.ಎಸ್. ವೀರಪ್ಪದೇವರು, 'ಪುಂಸವನ' ವಿಷಯ ಕುರಿತು ಹಿರೇಕೆರೂರು ಚನ್ನೇಶ ಶಾಸ್ತ್ರಿ ಮಠದ ಹಾಗು 'ಸೀಮಂತೋನ್ನಯನ' (ಗರ್ಭಲಿಂಗಧಾರಣೆ) ವಿಷಯದ ಮೇಲೆ ಕಡೂರು ತಾಲ್ಲೂಕು ಯಗಟಿ ಶಿವಲಿಂಗಸ್ವಾಮಿ ವಿಚಾರ ಮಂಡಿಸಲಿದ್ದಾರೆ. ಸಂಜೆ 6 ಗಂಟೆಗೆ ಹೊನ್ನಾಳಿ ಅಭಿನೇತ್ರಿ ನಾಟ್ಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದೆ.

ಫೆ.3 ರ ಬುಧವಾರ ಬೆಳಿಗ್ಗೆ 9.30 ಕ್ಕೆ ಧರ್ಮಸಭೆ ನಡೆದು, ಜಾತಕ ಕರ್ಮ, ನಾಮಕರಣ ಮತ್ತು ಡೋಲಾರೋಹಣ ಹಾಗೂ ಷೋಡಶ ಸಂಸ್ಕಾರಗಳಿಗೆ ಮೂಹೂರ್ತಗಳು ಎಂಬ ವಿಷಯಗಳ ಮೇಲೆ ಕ್ರಮವಾಗಿ ಶಿವಲಿಂಗಸ್ವಾಮಿ, ದೇವರಾಜಶಾಸ್ತ್ರಿ, ಚಂದ್ರಶೇಖರ ಶಾಸ್ತ್ರಿ ವಿಚಾರ ಮಂಡಿಸಲಿದ್ದಾರೆ. ಮಧ್ಯಾಹ್ನ 2 ಗಂಟೆಗೆ ಉಪನಿಷ್ಕ್ರಮಣ, ಅನ್ನಪ್ರಾಶನ, ಚೌಲ ಪ್ರಯೋಗದ ಬಗ್ಗೆ ಕ್ರಮವಾಗಿ ಚನ್ನೇಶ ಶಾಸ್ತ್ರಿ ಮಠದ, ಪುಟ್ಟಯ್ಯ ಶಾಸ್ತ್ರಿ, ಬಸವರಾಜ ಶಾಸ್ತ್ರಿ ಮಾತನಾಡಲಿದ್ದಾರೆ.

ದಿನಾಂಕ 4ರ ಗುರುವಾರ ಬೆಳಿಗ್ಗೆ 9ಕ್ಕೆ ಸಮಾರೋಪ ಸಮಾರಂಭ ಜರುಗುವುದು. ಈ ಸಂದರ್ಭದಲ್ಲಿ ಎಂ.ಎಸ್. ಶಾಸ್ತ್ರಿ ಹೊಳೆಮಠ, ಅನ್ನದಾನಯ್ಯ ಶಾಸ್ತ್ರಿ, ಕಳಕಯ್ಯ ಶಾಸ್ತ್ರಿ, ಎಚ್.ಎಂ. ಉಮೇಶ್ ಉಪಸ್ಥಿತರಿದ್ದರು.

## ಕೃಷಿಕರ ಬಜೆಟ್‌ನ ಹೃದಯ : ಮೋದಿ

**(1ನೇ ಪುಟದಿಂದ)** ಬಜೆಟ್‌ನಲ್ಲಿ ವಾಸ್ತವಿಕತೆ ಹಾಗೂ ಅಭಿವೃದ್ಧಿಯ ವಿಶ್ವಾಸವಿ ದೆ. ಇದು ಸಮಾಜದ ಎಲ್ಲ ವರ್ಗಗಳಿಗೆ ಸ್ಪಂದಿಸಿದೆ ಹಾಗೂ ಆತ್ಮನಿರ್ಭರತೆಯ ದೃಷ್ಟಿಕೋನ ಹೊಂದಿದೆ ಎಂದು ಪ್ರಧಾನಿ ಹೇಳಿದ್ದಾರೆ. ಬೆಳವಣಿಗೆ ಅವಕಾಶ ಹೆಚ್ಚಿಸುವ, ಯುವಕರಿಗೆ ಹೊಸ ಉದ್ಯೋಗಾವಕಾಶ ಸೃಷ್ಟಿಸುವ, ಮಾನವ ಸಂಪನ್ಮೂಲಕ್ಕೆ ಹೆಚ್ಚು ಒತ್ತು ಕೊಡುವ, ಹೊಸ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಒತ್ತು ನೀಡುವ ಹಾಗೂ ಹೊಸ ಸುಧಾರಣೆಗಳನ್ನು ತರುವ ದಿಸೆಯಲ್ಲಿ ಸಾಗಿದ್ದೇವೆ ಎಂದು ಮೋದಿ ಹೇಳಿದ್ದಾರೆ. ಇದು ಸಕಾರಾತ್ಮಕವಾದ ಬಜೆಟ್ ಆಗಿದೆ. ಆರೋಗ್ಯ ಹಾಗೂ ಆಸ್ತಿ ಎರಡಕ್ಕೂ ಒತ್ತು ನೀಡುತ್ತಿದೆ ಎಂದವರು ವಿಶ್ಲೇಷಿಸಿದ್ದಾರೆ.

## ಶಾಲೆಗೆ ಬಂದ 9, 11ನೇ ತರಗತಿ ವಿದ್ಯಾರ್ಥಿಗಳು

**(1ನೇ ಪುಟದಿಂದ)** ಕೊರೊನಾ ಹಿನ್ನೆಲೆಯಲ್ಲಿ ಕಳೆದ ಮಾರ್ಚ್‌ನಿಂದ ಶಾಲಾ-ಕಾಲೇಜುಗಳು ಬಂದ್ ಆಗಿದ್ದವು. ಬಹು ಜನರ ಒತ್ತಾಯದ ಮೇರೆಗೆ ಜನ ವರಿ 1 ರಿಂದ 10 ಮತ್ತು 12ನೇ ತರಗತಿ ಮಕ್ಕಳಿಗೆ ಭೌತಿಕ ತರಗತಿ ನಡೆಸಲು ಅನುವು ಮಾಡಿಕೊಡಲಾ ಗಿತ್ತು. ಈ ಹಿಂದೆ ಶಾಲೆಗಳ ಆರಂಭದ ವೇಳೆ ಹೊರಡಿಸಲಾಗಿದ್ದ ಕೋವಿಡ್ ಮಾರ್ಗಸೂಚಿಗಳನ್ನು ವಿದ್ಯಾರ್ಥಿಗಳು, ಬೋಧಕರು ಹಾಗೂ ಇನ್ನಿತರೆ ಸಿಬ್ಬಂದಿಗಳು ಕಡ್ಡಾಯವಾಗಿ ಪಾಲನೆ ಮಾಡಬೇಕು. ಬಿಸಿಯೂಟ ಯೋಜನೆ ಇನ್ನೂ ಆರಂಭವಾಗದ ಕಾರಣ, ವಿದ್ಯಾರ್ಥಿಗಳು ಮನೆಯಿಂದಲೇ ಮಧ್ಯಾಹ್ನದ ಊಟ ತರಬೇಕೆಂದು ಸೂಚಿಸಲಾಗಿದೆ.


## 16ನೇ ವರ್ಷದ ಸವಿನೆನಪು



**ಹುಲಿಕಟ್ಟೆ ಕೆ.ಹೆಚ್. ರುದ್ರಪ್ಪನವರು**

(ಲ್ಯಾಂಡ್ ಡೆವಲೆಪರ್)

ನೀವು ನಮ್ಮನ್ನಗಲಿ ಇಂದಿಗೆ ಹದಿನ್ನರು ವರ್ಷಗಳು ಕಳೆದರೂ,
ಸದಾ ನಿಮ್ಮ ಸವಿನೆನಪಿನಲ್ಲಿರುವ,


ಪ್ರೀತಿಯ ತಾಯಿ-ತಂದೆ : ದಿ.ಗಿರಿಜಮ್ಮ ಲೇ|| ಹುಲಿಕಟ್ಟೆ ಕೆ. ಹಾಲಪ್ಪ, ಪತ್ನಿ : ಗಂಗಮ್ಮ
ಅಣ್ಣ-ತಮ್ಮಂದಿರು : ಶ್ರೀಮತಿ ಗೌರಮ್ಮ, ಶ್ರೀ ಹುಲಿಕಟ್ಟೆ ಕೆ.ಹೆಚ್. ಚನ್ನಬಸಪ್ಪ
ಶ್ರೀಮತಿ ಭಾಗ್ಯಮ್ಮ, ಶ್ರೀ ಹುಲಿಕಟ್ಟೆ ಕೆ.ಹೆಚ್. ಮಲ್ಲಿಕಾರ್ಜುನ್
ಶ್ರೀಮತಿ ಶೈಲಜಾ, ಹುಲಿಕಟ್ಟೆ ಕೆ.ಹೆಚ್. ಹಾಲೇಶ್
ಮಕ್ಕಳು : ಶ್ರೀಮತಿ ಶೃತಿ, ಶ್ರೀ ಹುಲಿಕಟ್ಟೆ ರಾಜೇಶ್
ಶ್ರೀಮತಿ ಪೂಜಾ, ಶ್ರೀ ಹುಲಿಕಟ್ಟೆ ಕಾರ್ತಿಕ್,
ಶ್ರೀಮತಿ ಅನಿತಾ, ಶ್ರೀಮಂತ್, ಶಶಿಕುಮಾರ್, ಯದುಕುಮಾರ್,
ಅಮಿತ್, ಚಂದನ್, ಮೊಮ್ಮಕ್ಕಳು : ರಿತಿಕಾ, ಗುಣವ್, ಪ್ರಹನ್
ಹಾಗೂ ಹುಲಿಕಟ್ಟೆ ವಂಶಸ್ಥರು, ಬಂಧು-ಮಿತ್ರರು.


## ದಿನದ ಚುಟುಕು

ಭಾವನೆ ಮೀಟಿದ ಅಂತರಂಗ
ಹೊಮ್ಮಿದ ಅಕ್ಷರಗಳು ಬಹಿರಂಗ
ನಮ್ಮದೇನೂ ಇಲ್ಲಿ ಇಲ್ಲವೇ ಇಲ್ಲ
ಇರುವುದದು ಪ್ರಕೃತಿಯ ತುಂಬೆಲ್ಲಾ


- ವೀಕೆಎಂ

### ಡಿ.ಹೆಚ್. ದದ್ದಪ್ಪರ ಶಿವರುದ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು ಮಳಲಕೆರೆ ಗ್ರಾಮದ ವಾಸಿ, ಡಿ.ಹೆಚ್. ದದ್ದಪ್ಪರ ಶಿವರುದ್ರಪ್ಪ (73) ಇವರು ದಿನಾಂಕ 1.02.2021ರ ಸೋಮವಾರ ಬೆಳಿಗ್ಗೆ 11.15ಕ್ಕೆ ನಿಧನರಾದರು. ಪತ್ನಿ, ನಾಲ್ವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.02.2021ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮ ಮಳಲಕೆರೆಯಲ್ಲಿ ನೆರವೇರಲಿದೆ.

## ಅಪರಿಚಿತ ವ್ಯಕ್ತಿಯ ಗುರುತು ಪತ್ತೆಗೆ ಕರೆ




ದಾವಣಗೆರೆ, ಫೆ.1- ತಾಲ್ಲೂಕಿನ ಆವರಗೊಳ್ಳ ಗ್ರಾಮದ ಕೇಂದ್ರೀಯ ವಿದ್ಯಾಲಯದ ಹತ್ತಿರ ಆವರಗೊಳ್ಳ ರಸ್ತೆಯ ಬದಿಯಲ್ಲಿ ಜನವರಿ 29 ರಂದು ಬೆಳಿಗ್ಗೆ ಅನಾರೋಗ್ಯದಿಂದ ಮಲಗಿದ್ದ ವ್ಯಕ್ತಿಯನ್ನು ಆಂಬ್ಯುಲೆನ್ಸ್‌ನಲ್ಲಿ ಕರೆತಂದು ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಆತ ಜನವರಿ 30 ರಂದು ರಾತ್ರಿ ಮೃತಪಟ್ಟಿದ್ದಾನೆ. ಈತನು ಸುಮಾರು 35 ರಿಂದ 45 ವರ್ಷ ವಯಸ್ಸಿನವನಾಗಿದ್ದು, ಕೆಂಪು ಅಂಗಿ ತೊಟ್ಟಿದ್ದಾನೆ.

ಈತನಿಗೆ ಸಂಬಂಧಪಟ್ಟವರು ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಗೆ ಸಂಪರ್ಕಿಸಬಹುದು. ವಿವರಗಳಿಗೆ ಸಂಪರ್ಕಿಸುವ ದೂರವಾಣಿ : 08192-262555, ಮೊ: 94808 03256.

# ಯುವಕರು ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಆದರ್ಶ ವ್ಯಕ್ತಿಗಳಾಗಬೇಕು

## ಜಗಳೂರಿನ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಜಿ.ತಿಮ್ಮಯ್ಯ ಆಶಯ



ಜಗಳೂರು, ಫೆ.1 - ಯುವಕರು ದುಶ್ಚಟಗಳಿಂದ ದೂರವಾಗಿ ಉತ್ತಮ ಅಭ್ಯಾಸ ನಿರತರಾಗಿ ಸಮಾಜದ ಅಂಕು-ಡೊಂಕುಗಳನ್ನು ತಿದ್ದುವ ಆದರ್ಶ ವ್ಯಕ್ತಿಗಳಾಗ ಬೇಕು ಎಂದು ಜೆಎಂಎಫ್‌ಸಿ ಮತ್ತು ಸಿವಿಲ್ ನ್ಯಾಯಾಧೀಶ ಜಿ.ತಿಮ್ಮಯ್ಯ ಕರೆ ನೀಡಿದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ತಾಲೂಕು ಕಾನೂನು ಸಮಿತಿ ಹಾಗೂ ವಕೀಲರ ಸಂಘ, ಸರ್ಕಾರಿ ಪದವಿ ಪೂರ್ವ ಕಾಲೇಜು ಇವರುಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಮತದಾರರ ದಿನಾಚರಣೆ ಪ್ರಯುಕ್ತ ಕಾನೂನು ಅರಿವು-ನೆರವು ಕಾರ್ಯಕ್ರಮವನ್ನು ಸಸಿ ನೆಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾಮಿ ವಿವೇಕಾನಂದರ ಹಾಗೂ ಬುದ್ದನ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ನಿರಂತರ ಕಠಿಣ ಪರಿಶ್ರಮದಿಂದ ಸಾಧನೆ ಸಾಧ್ಯವೇ ವಿನಃ ಅಡ್ಡ ದಾರಿಗಳಿಂದಲ್ಲ. ಕಾನೂನು ಅಜ್ಞಾನಕ್ಕೆ ಕ್ಷಮಾಪಣೆಯಿಲ್ಲ. ವಿದ್ಯಾವಂತರಿಂದಲೇ ಹೆಚ್ಚಾಗಿ ಕಾನೂನು ಅಪಕೃತ್ಯಗಳು ನಡೆಯುತ್ತಿರುವುದು ಆತಂಕಕಾರಿಯಾಗಿದೆ ಎಂದರು.

ಅಭಿವ್ಯಕ್ತಿ ಮತ್ತು ಮತದಾನದ ಹಕ್ಕುಗಳ ಸ್ವಾತಂತ್ರ್ಯ ಕಲ್ಪಿಸಿದ ಶ್ರೇಷ್ಠ ಪುಸ್ತಕ ಸಂವಿಧಾನ. ಮತದಾರರಿಂದ ಭ್ರಷ್ಟಾಚಾರ ಆರಂಭವಾಗುತ್ತದೆ. ಆಡಳಿತ ವ್ಯವಸ್ಥೆಗೆ ಮತದಾರರೇ ನೇರ ಕಾರಣ. ಚುನಾವಣೆ ಸಂದರ್ಭದಲ್ಲಿ ಕ್ಷಣಿಕ ಆಮಿಷಗಾಗಿ ಅಮೂಲ್ಯ ಮತವನ್ನು ಮಾರಾಟ ಮಾಡಿಕೊಳ್ಳುವುದು ಸರಿಯಲ್ಲ ಎಂದರು.

ವಕೀಲರ ಸಂಘದ ಕಾರ್ಯದರ್ಶಿ ವಿ.ತಿಪ್ಪೇಸ್ವಾಮಿ ಪ್ರಾಸ್ತಾವಿಕ ವಾಗಿ ಮಾತನಾಡಿ, ಕಾನೂನು ಪ್ರತಿಯೊಬ್ಬ ವ್ಯಕ್ತಿಗೆ ಪ್ರತಿ ಕ್ಷಣದಲ್ಲಿಯೂ ನೆರವಾಗುತ್ತದೆ, ಗ್ರಾಮೀಣ ಭಾಗಕ್ಕೆ ಕಾನೂನಿನ ಅರಿವು ಪಸರಿಸಲು ಕಾಲೇಜು ವಿದ್ಯಾರ್ಥಿಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ವಿದ್ಯಾರ್ಥಿನಿಯರು ಅಭಿಪ್ರಾಯ ವ್ಯಕ್ತಪಡಿಸಿ, ಉನ್ನತ ವ್ಯಕ್ತಿಯಿಂದ, ಕಟ್ಟಕಡೆಯ ವ್ಯಕ್ತಿಗೂ ಒಂದೇ ಕಾನೂನು ಅನ್ವಯವಿರುವ ಭಾರತ ದೇಶದ ಸಂವಿಧಾನ ಶ್ರೇಷ್ಠವಾದದ್ದು, ಅನಕ್ಷರಸ್ಥರಷ್ಟೇ ಅಲ್ಲದೆ ಅಕ್ಷರಸ್ಥರೂ ಕೂಡ ಮೋಸ, ವಂಚನೆ, ಅತ್ಯಾಚಾರದಂತಹ ಪ್ರಕರಣಗಳಲ್ಲಿ ಭಾಗಿಯಾಗುವುದು ನಿಲ್ಲಬೇಕಿದೆ ಎಂದರು.

ಸಮಾರಂಭದಲ್ಲಿ ಪ್ರಾಂಶುಪಾಲ ಜಗದೀಶ್, ಹಿರಿಯ ವಕೀಲ ವೈ. ಹನುಮಂತಪ್ಪ ವಕೀಲರಾದ ರುದ್ರೇಶ್, ನಾಗರತ್ನಮ್ಮ, ಉಮೇಶ್, ಕರಿಬಸಪ್ಪ, ಅರುಣ್ ಕುಮಾರ್, ಮಹಾಂತೇಶ್, ಉಪನ್ಯಾಸಕರಾದ ಸಿ.ಬಿ.ರವಿ, ರಮೇಶ್, ಸೇರಿದಂತೆ, ಇತರರಿದ್ದರು.

# ಕೇಂದ್ರ ಮುಂಗಡ ಪತ್ರ : ಗಣ್ಯರ, ತಜ್ಞರ ಪ್ರತಿಕ್ರಿಯೆ

## ರಾಜ್ಯಕ್ಕೆ ಯಾವುದೇ ಕೊಡುಗೆ ಇಲ್ಲ

ಕೇಂದ್ರದ ಮುಂಗಡ ಪತ್ರ ನಿರಾಶಾದಾಯಕ. ಕಾರಣ ನಮ್ಮ ರಾಜ್ಯಕ್ಕೆ ಯಾವುದೇ ಕೊಡುಗೆ ಇಲ್ಲ. ಎಲ್ಲಾ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ರಾಜ್ಯಗಳಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಲಾಗಿದೆ.

ಆದಾಯ ತೆರಿಗೆಯಲ್ಲಿ ಯಾವುದೇ ರೀತಿಯ ಬದಲಾವಣೆ ಇಲ್ಲ. ಮತ್ತು 2021-22ನೇ ಸಾಲಿಗೆ 75 ವರ್ಷದ ಮೇಲ್ಪಟ್ಟವರಿಗೆ ಆದಾಯ ತೆರಿಗೆಯ ವಿವರಗಳನ್ನು ಸಲ್ಲಿಸಲು ವಿನಾಯಿತಿ ನೀಡಲಾಗಿದ್ದು (ಷರತ್ತು ಬದ್ದವಾಗಿ) ಇದೊಂದು ಆಶಾದಾಯಕ ಬೆಳವಣಿಗೆಯಾಗಿದೆ. ಜಿ.ಎಸ್.ಟಿ ಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಬದಲಾವಣೆ ಇರುವುದಿಲ್ಲ. ವಿತ್ತೀಯ ಮಂತ್ರಿ ನಿರ್ಮಲ ಸೀತಾರಾಮನ್ ಅವರು ನಮ್ಮ ಕರ್ನಾಟಕ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದು, ಕರ್ನಾಟಕ ರಾಜ್ಯಕ್ಕೆ ಉತ್ತಮವಾದ ಕೊಡುಗೆಯನ್ನು ಇದುವರೆಗೂ ಕೊಟ್ಟಿಲ್ಲ.



**- ಜಂಬಗಿ ರಾಧೇಶ್**, ಅಧ್ಯಕ್ಷರು, ಜಿಲ್ಲಾ ತೆರಿಗೆ ಸಲಹೆಗಾರರ ಸಂಘ, ದಾವಣಗೆರೆ.

## ಬಜೆಟ್ ಭಾರತದ ಅಭೂತಪೂರ್ವ ಯಶಸ್ಸಿಗೆ ಅಡಿಗಲ್ಲಾಗಲಿದೆ

ಕೋವಿಡ್ ಹಿನ್ನೆಲೆಯಲ್ಲಿ ಇದೇ ಮೊದಲ ಬಾರಿಗೆ ಕೇಂದ್ರ ಸರ್ಕಾರದಲ್ಲಿ ಕಾಗದ ರಹಿತ ಬಜೆಟ್ ಮಂಡನೆ ವಿಶೇಷವಾಗಿತ್ತು.

ಸಾಮಾಜಿಕ ಭದ್ರತೆಯನ್ನು ಸರ್ವರಿಗೂ ಕಲ್ಪಿಸುವ ನಿಟ್ಟಿನಲ್ಲಿ, ಕನಿಷ್ಟ ಸಂಬಳವನ್ನು ಎಲ್ಲಾ ವಿಧದ ಕಾರ್ಮಿಕರಿಗೆ ನೀಡಲು ಪ್ರಸ್ತಾಪ, ಚಿನ್ನ ಮತ್ತು ಬೆಳ್ಳಿ ಮೇಲಿನ ಸುಂಕ ಕಡಿತಗೊಳಿಸಲು ನಿರ್ಧರಿಸಲಾಗಿದೆ. ಇದರೊಂದಿಗೆ ಚಿನ್ನ ಮತ್ತು ಬೆಳ್ಳಿ ಬೆಲೆ ಕಡಿತಗೊಳ್ಳುವ ನಿರೀಕ್ಷೆ ಇದೆ. ಉಕ್ಕು ಬೆಲೆ ಕಡಿಮೆಯಾಗುವ ನಿರೀಕ್ಷೆ ಇದೆ. ಅಗ್ಗದ ಗೃಹ ಸಾಲ ಯೋಜನೆಯನ್ನು ಮುಂದುವರೆಸಲು ಮತ್ತು 1.5 ಲಕ್ಷ ರೂ. ವರೆಗಿನ ಬಡ್ಡಿ ಮೇಲಿನ ತೆರಿಗೆ ವಿನಾಯಿತಿಯನ್ನು ಮತ್ತೊಂದು ವರ್ಷ ಅಂದರೆ ಮಾರ್ಚ್ 2022ರವರೆಗೆ ವಿಸ್ತರಿಸಲು ಕೇಂದ್ರ ಸರಕಾರದ ನಿರ್ಧರಿಸಿರುವುದು, ಕೃಷಿಕರ ಆದಾಯ ದ್ವಿಗುಣಗೊಳಿಸಲು ಕೇಂದ್ರ ಸರಕಾರದ ಆದ್ಯತೆ, ಭತ್ತ ಬೆಳೆಗಾರರಿಗೆ 1.72 ಲಕ್ಷ ಕೋಟಿ ರೂ ಅನುದಾನ, ಕೃಷಿಕರಿಗೆ ಸಾಲ ಸೌಲಭ್ಯ ನೀಡಲು ಹೆಚ್ಚಿನ ಮೊತ್ತ ನಿಗದಿ ಹಾಗೂ ಧಾನ್ಯಗಳ ಖರೀದಿಗೆ 10,500 ಕೋಟಿ ರೂಪಾಯಿ ಒದಗಿಸಿರುವುದು ಸ್ವಾಗತಾರ್ಹ. ನಿರ್ಮಲಾ ಸೀತಾರಾಮನ್ ತಮ್ಮ ಬಜೆಟ್ ಪ್ರಸ್ತುತಿಯ ಸಂದರ್ಭದಲ್ಲಿ ರೈಲ್ವೆಗಾಗಿ ಹಲವಾರು ಪ್ರಮುಖ ಘೋಷಣೆಗಳನ್ನು ಮಾಡಿದ್ದಾರೆ. ಬ್ರಾಡ್-ಗೇಜ್ ಮಾರ್ಗಗಳ 100% ವಿದ್ಯುದೀಕರಣವನ್ನು ಡಿಸೆಂಬರ್ 2023 ರೊಳಗೆ ಪೂರ್ಣಗೊಳಿಸಲಾಗುವುದು ಎಂದು ಹೇಳಿದ್ದು ಸ್ವಾಗತಾರ್ಹ.

ಪೆಟ್ರೋಲ್ ಲೀಟರ್‌ಗೆ 2.5 ರೂ. ಮತ್ತು ಡೀಸೆಲ್‌ಗೆ 4 ರೂ. ಕೃಷಿ ಅಭಿವೃದ್ಧಿಗೆ ಹೊಸ ಸೆಸ್ ಘೋಷಿಸಿ ನಿರಾಶೆ ಉಂಟು ಮಾಡಿದೆ. ಆದಾಯ ತೆರಿಗೆ ವಿನಾಯಿತಿ ಮಿತಿಯಲ್ಲಿ ಬದಲಾವಣೆ ಇಲ್ಲದಿರುವುದು ಸ್ವಲ್ಪ ನಿರಾಸೆ ಉಂಟು ಮಾಡಿದೆ.



**- ರೋಹಿತ್ ಎಸ್. ಜೈನ್**, ನೈರುತ್ಯ ರೈಲ್ವೆ ವಲಯ ಪ್ರಯಾಣಿಕರ ಸಂಘ ಕಾರ್ಯದರ್ಶಿ

## ತೋಟಗಾರಿಕೆ, ಪಶು ಸಂಗೋಪನೆ, ಮೀನುಗಾರಿಕೆ ಕ್ಷೇತ್ರಗಳಿಗೆ ಉತ್ತೇಜನ

ರೈತರ ಆದಾಯ ದ್ವಿಗುಣ ಗೊಳಿಸುವ ನಿಟ್ಟಿನಲ್ಲಿ ತೋಟಗಾರಿಕೆ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಕ್ಷೇತ್ರಗಳಿಗೆ ಉತ್ತೇಜನ ನೀಡಿರುವುದು ಸ್ವಾಗತಾರ್ಹ. ಇನ್ಯಾಮ್ಸ್ ನಲ್ಲಿ ಸಾವಿರಕ್ಕೂ ಹೆಚ್ಚಿನ ಕೃಷಿ ಮಂಡಿಗಳನ್ನು ಸೇರಿಸಿರುವುದರಿಂದ ರೈತರಿಗೆ ಬೆಳೆಯನ್ನು ಉತ್ತಮ ಬೆಲೆಗೆ ಮಾರಲು ಸಹಕಾರಿಯಾಗುವುದು. ಕೃಷಿ ಸಿಂಚಾಯಿ ಯೋಜನೆಯಡಿ ಹತ್ತು ಸಾವಿರ ಕೋಟಿ ರೂ. ಮೀಸಲಿಟ್ಟಿರುವುದರಿಂದ ನೀರಿನ ಸದ್ಬಳಕೆಗೆ ಅನುಕೂಲವಾಗುವುದು. ಕೃಷಿ ಸಂಸ್ಕರಣೆ, ರಾಷ್ಟ್ರೀಯ ಕೃಷಿ ನೀತಿ, ಕೃಷಿ ಯಂತ್ರೋಪಕರಣಗಳ ಬಳಕೆಯ ಬಗ್ಗೆ ಹೊಸ ಯೋಜನೆಗಳನ್ನು ಘೋಷಿಸಿದ್ದರೆ ಉತ್ತಮವಾಗುತ್ತಿತ್ತು.



**- ಎಂ. ಜಿ. ಬಸವನಗೌಡ**, ತೋಟಗಾರಿಕೆ ವಿಜ್ಞಾನಿ, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ.

## ಸಂಬಳದಾರರಿಗೆ ಕೇಂದ್ರದಿಂದ ಯಾವುದೇ ರಿಲೀಫ್ ನೀಡಿಲ್ಲ

ಕೊರೊನಾ ವೈರಸ್‌ನಿಂದ ಉದ್ಯೋಗ ನಷ್ಟ, ಸಂಬಳ ಕಡಿತ, ವೇತನ ಏರಿಕೆಗೆ ಕತ್ತರಿ.... ಹೀಗೆ ಹಲವು ಸಂಕಷ್ಟಗಳನ್ನು ಎದುರಿಸಿದ್ದ ಸಂಬಳದಾರರಿಗೆ ಕೇಂದ್ರ ಸರ್ಕಾರ ಕೂಡಾ ಯಾವುದೇ ರಿಲೀಫ್ ನೀಡಿಲ್ಲ. ಆದಾಯ ತೆರಿಗೆ ಸ್ಲ್ಯಾಬ್‌ಗಳಲ್ಲಿ ಯಾವುದೇ ಏರಿಳಿತ ಆಗಿಲ್ಲ. 2020-21ರ ಅವಧಿಯಲ್ಲಿ ಹೇಗಿತ್ತೋ ಹಾಗೆಯೇ ಆದಾಯ ತೆರಿಗೆ ನಿಯಮಗಳು ಮುಂದುವರೆಯಲಿವೆ. 75 ವರ್ಷ ಮೇಲ್ಪಟ್ಟವರು ಆದಾಯ ತೆರಿಗೆ ವ್ಯಾಪ್ತಿಗೆ ಬರೋದಿಲ್ಲ ಎಂದಿರುವ ಕೇಂದ್ರ ಸರ್ಕಾರ, ಪಿಂಚಣಿದಾರರನ್ನು ಆದಾಯ ತೆರಿಗೆಯ ವ್ಯಾಪ್ತಿಯಿಂದ ಹೊರಗಿಡಲು ನಿರ್ಧರಿಸಿದೆ. ಸಂಬಳದಾರರು ಕೋವಿಡ್ ಸೆಸ್‌ನ ಭಯದಿಂದ ಮುಕ್ತರಾಗಿದ್ದಾರೆ.

ಕೇಂದ್ರ ಬಜೆಟ್‌ನಲ್ಲಿ ಚಿನ್ನ ಮತ್ತು ಬೆಳ್ಳಿ ಮೇಲಿನ ಕಸ್ಟಮ್ಸ್ ಸುಂಕವನ್ನು ಇಳಿಕೆ ಮಾಡಲಾಗಿದೆ. ಇದರಿಂದ ಚಿನ್ನ ಮತ್ತು ಬೆಳ್ಳಿ ದರಗಳು ಇಳಿಕೆಯಾಗುವ ಸಾಧ್ಯತೆ ಇದೆ.

ಪೆಟ್ರೋಲ್, ಡೀಸೆಲ್ ಬೆಲೆ ಮತ್ತಷ್ಟು ಏರಿಕೆಯಾಗಲಿದೆ. ಪೆಟ್ರೋಲ್ ಮೇಲೆ 2.5 ರೂಪಾಯಿ ಕೃಷಿ ಸೆಸ್, ಡೀಸೆಲ್ ಮೇಲೆ 4 ರೂಪಾಯಿ ಕೃಷಿ ಸೆಸ್ ವಿಧಿಸಲು ಸರ್ಕಾರ ಮುಂದಾಗಿದೆ. ಇದರಿಂದ ಎರಡೂ ತೈಲಗಳ ದರ ಏರಲಿದೆ.

ಏರ್‌ಪೋರ್ಟ್, ವೇರ್‌ಹೌಸ್‌ಗಳು, ರಸ್ತೆ ನಿರ್ಮಾಣ, ವಿದ್ಯುತ್ ಕ್ಷೇತ್ರವನ್ನು ಖಾಸಗಿಯವರಿಗೆ ಮಾರಾಟ ಮಾಡಲು ನಿರ್ಧರಿಸಿರುವ ಕೇಂದ್ರದ ನಿರ್ಣಯವು ಟೀಕಿಗೆ ಗುರಿಯಾಗಿದೆ

ಕೊರೊನಾ ಸಂಕಷ್ಟದ ನಡುವೆ ಬಹುನಿರೀಕ್ಷಿತ ಕೇಂದ್ರ ಬಜೆಟ್ ಮಂಡನೆಯಾಗಿದ್ದು, ಸಾಕಷ್ಟು ನಿರೀಕ್ಷೆಗಳನ್ನಿಟ್ಟುಕೊಂಡಿದ್ದ ಮಧ್ಯಮ ವರ್ಗದ ಜನರಿಗೆ ಭಾರೀ ನಿರಾಸೆಯಾಗಿದೆ. ಕೆಲವು ವಸ್ತುಗಳ ಬೆಲೆಗಳು ಏರಿಕೆಯಾಗಿದ್ದರೆ, ಮತ್ತೆ ಕೆಲವೇ ಕೆಲವು ವಸ್ತುಗಳ ಬೆಲೆ ಇಳಿಕೆಯಾಗಿದೆ.




**- ಎಸ್. ವೆಂಕಟೇಶ್ ಬಾಬು**, ದಾವಣಗೆರೆ.

## ರೈತ ಪರ ಕೇಂದ್ರ ಬಜೆಟ್ ಸ್ವಾಗತಾರ್ಹ

ಬಜೆಟ್‌ನಲ್ಲಿ ಕೃಷಿ ರಂಗಕ್ಕೆ ಬಂಪರ್ ಕೊಡುಗೆ ನೀಡಿರುವುದು ಸಂತೋಷದಾಯಕವಾಗಿದೆ.

ಕೋವಿಡ್‌ನಿಂದಾಗಿ ಕೃಷಿ ವಲಯದಲ್ಲಿ ಭಾರೀ ಪ್ರಮಾಣದ ನಷ್ಟ ಅನುಭವಿಸುತ್ತಿದ್ದ ರೈತರಿಗೆ ಈ ಸಾಲಿನ ಬಜೆಟ್‌ನಲ್ಲಿ ಬೆಂಬಲ ಬೆಲೆ ಯೋಜನೆಯನ್ನು ಮುಂದುವರೆಸಿದ್ದು, ರೈತರಿಂದ ಕೃಷಿ ಉತ್ಪನ್ನ ಖರೀದಿಗಾಗಿ ರೂ.1.72 ಲಕ್ಷ ಕೋಟಿ ಮೀಸಲಿರಿಸುವುದು ಕನಿಷ್ಠ ಬೆಂಬಲ ಬೆಲೆಯಲ್ಲಿ ಹೆಚ್ಚಳ. ಬೇಳೆಕಾಳು ಖರೀದಿಗೆಂದು ರೂ. 10530 ಕೋಟಿ, ಗೋಧಿ ಖರೀದಿಗಾಗಿ ರೂ. 33,000 ಕೋಟಿ, ಪಶುಸಂಗೋಪನೆ, ಮೀನುಗಾರಿಕೆ ರೂ. 40 ಸಾವಿರ ಕೋಟಿ. ಕೃಷಿ ಕಾರ್ಮಿಕರ ಆರ್ಥಿಕ ಸಬಲೀಕರಣಕ್ಕೆ ಒತ್ತು, ಕೃಷಿ ನೀರಾವರಿಗೆ ಹೆಚ್ಚುವರಿ ರೂ 5 ಸಾವಿರ ಕೋಟಿ. ಕೃಷಿ ಬೆಳೆಗಳಿಗೆ ವಿಮೆ ವಿಸ್ತರಣೆ. ಕೃಷಿ ಸಾಲದ ಮೊತ್ತವನ್ನು ರೂ. 16.5 ಲಕ್ಷ ಕೋಟಿ ರೂಪಾಯಿ ವಿಸ್ತರಣೆ. ಬೆಳೆ ನಷ್ಟ ಪ್ರವಾಹ ಪರಿಸ್ಥಿತಿ ನಿರ್ವಹಣೆಗೆ ಒತ್ತು ನೀಡಿ ಮಂಡಿಸಿರುವ ಬಜೆಟ್ ರೈತರ ಪರವಾಗಿದೆ. ಇದೊಂದು ಐತಿಹಾಸಿಕ ಬಜೆಟ್ ಆಗಿದೆ.



**- ಎಸ್.ಮರುಳಸಿದ್ಧೇಶ್ವರ**, ಶಿವಪುರ, ಹೊಳಲ್ಕೆರೆ.


## ಕೃಷಿ ಸೆಸ್ ಹೆಸರಲ್ಲಿ ಜನರ ಜೇಬಿಗೆ ಕತ್ತರಿ

ಕೊರೊನಾ ಸಂಕಷ್ಟದ ಮಧ್ಯೆ ಬಹುನಿರೀಕ್ಷಿತ ಕೇಂದ್ರ ಬಜೆಟ್ಟನ್ನು ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಮಂಡನೆ ಮಾಡಿದ್ದು, ದೇಶದ ಜನರಿಗೆ ಭಾರೀ ನಿರಾಶೆಯಾಗಿದೆ. ಕೃಷಿ ಸೆಸ್‌ನ ಹೆಸರಿನಲ್ಲಿ ಜನರ ಬದುಕನ್ನು ಬರ್ಬಾದ್ ಮಾಡಲಾಗಿದೆ.

ಪ್ರಧಾನಿ ಮೋದಿ ಸರ್ಕಾರದ 9ನೇ ಕೇಂದ್ರ ಬಜೆಟ್ ದೇಶದ ಅಭಿವೃದ್ಧಿಗೆ ಪೂರಕವಾಗಿಲ್ಲ, ಹಳಿ ತಪ್ಪಿದ ಮೋದಿ ಲೆಕ್ಕವಾಗಿದ್ದು, ಇದೊಂದು ಜನ ವಿರೋಧಿ ಬಜೆಟ್ ಆಗಿದ್ದು ಕೃಷಿ ಸೆಸ್ ಹೆಸರಲ್ಲಿ ದೇಶದ ಜನರ ಜೇಬಿಗೆ ಕತ್ತರಿ ಹಾಕಲಾಗಿದೆ.

ಪೆಟ್ರೋಲ್ ಡೀಸೆಲ್ ಬೆಲೆ ಈಗಾಗಲೇ ಗಗನಕ್ಕೆ ಏರಿದ್ದು, ಇದೀಗ ಕೃಷಿ ಸೆಸ್ ಹೆಸರಿನಲ್ಲಿ ಪೆಟ್ರೋಲ್ ರೂ. 2.50, ಡೀಸೆಲ್ ರೂ. 4.00 ಏರಿಕೆ ಮಾಡಿದ್ದು ಅತ್ಯಂತ ಖಂಡನೀಯವಾಗಿದೆ. ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಿಂದ ಜನ ಸಾಮಾನ್ಯರು ಉಪಯೋಗಿಸುವ ಎಲ್ಲಾ ವಸ್ತುಗಳ ಬೆಲೆಗಳು ಪರೋಕ್ಷವಾಗಿ ಏರಿಕೆ ಆಗಲಿವೆ ಎಂದಿರುವ ಅವರು ಬೇಳೆ ಕಾಳುಗಳು, ಬಟಾಣಿ, ಹುರಿಗಡಲೆ, ಅಡುಗೆ ಎಣ್ಣೆ, ಎಲ್.ಇ.ಡಿ. ಬಲ್ಬ್, ಸೋಲಾರ್ ಬಲ್ಬ್, ಎಸಿ, ಟಿವಿ, ಫ್ರಿಡ್ಜ್ ಇತ್ಯಾದಿ ವಸ್ತುಗಳ ಮೇಲೆ ತೆರಿಗೆ ಏರಿಕೆ ಮಾಡಿ ಕೋವಿಡ್ ಸಂಕಷ್ಟದಲ್ಲಿರುವ ಭಾರತೀಯರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಮೋದಿ ಸರ್ಕಾರ ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳನ್ನು ಜಾರಿಗೆ ತರಲು ಹೊರಟಿದ್ದು, ಇದನ್ನು ವಿರೋಧಿಸಿ ರಾಷ್ಟ್ರದ ರೈತರು ಕಳೆದ ಎರಡು ತಿಂಗಳಿಂದ ಚಳಿ, ಗಾಳಿ, ಮಳೆ ಎನ್ನದೇ ದೆಹಲಿಯಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಪ್ರತಿಭಟನೆಯಲ್ಲಿ 60ಕ್ಕೂ ಹೆಚ್ಚು ರೈತರು ಜೀವ ತೆತ್ತಿದ್ದಾರೆ. ಈ ಬಗ್ಗೆ ಸೌಜನ್ಯಕ್ಕೂ ರೈತರನ್ನು ಭೇಟಿ ಮಾಡದ ಪ್ರಧಾನಿ ನರೇಂದ್ರ ಮೋದಿ, ಇದೀಗ ರೈತರಿಗಾಗಿ ಕೃಷಿ ಸೆಸ್ ಹೆಸರಲ್ಲಿ ತೆರಿಗೆ ಹೆಚ್ಚಳ ಮಾಡಿರುವುದು ಹಾಸ್ಯಾಸ್ಪದ.



**- ಡಿ. ಬಸವರಾಜ್**, ಕೆಪಿಸಿಸಿ ವಕ್ತಾರ

## ತೆರಿಗೆ ಭಾರ ಜನರ ಮೇಲೆ ಬೇಡ

ಕೋವಿಡ್ ಸಮಯದಲ್ಲಿ ಕೇಂದ್ರ ಸರ್ಕಾರ ಮಂಡಿಸಿರುವ ಬಜೆಟ್ ನಿರಾಶದಾಯಕವಾಗಿದೆ. ಈಗಾಗಲೇ ದೇಶದಲ್ಲಿನ ಜನರು ಬೆಲೆ ಏರಿಕೆಯಿಂದ ತತ್ತರಿಸಿದ್ದು, ಮತ್ತೆ ತೆರಿಗೆ ಭಾರವನ್ನು ತಪ್ಪಿಸಬಹುದಿತ್ತು. ತೀವ್ರ ವಿತ್ತೀಯ ಕೊರತೆ ಎದುರಿಸುತ್ತಿರುವುದು ಆತಂಕದ ವಿಚಾರವಾಗಿದೆ. ಇದರಿಂದ ಬ್ಯಾಂಕಿಂಗ್ ಕ್ಷೇತ್ರದ ಮೇಲೆ ಆಗುವ ಪ್ರಭಾವದಿಂದ ಶ್ರೀ ಸಾಮಾನ್ಯರ ಮೇಲೆ ಉಂಟಾಗುವ ಪರಿಣಾಮ ಗಂಭೀರವಾಗುತ್ತದೆ.

12 ಲಕ್ಷ ಕೋಟಿ ಸಾಲಕ್ಕೆ ಸಿದ್ದವಾಗಿರುವುದು ಸರಿಯಲ್ಲ. ಈ ದೇಶದ ಶ್ರೀಮಂತರು ಮತ್ತು ಭ್ರಷ್ಟಾಚಾರದ ಕಪ್ಪು ಹಣವನ್ನು ಹೊರಗೆ ತಂದರೆ ಅದೇ ಸಾಕಾಗುತ್ತದೆ. ಕೃಷಿ ಸೆಸ್ ಉತ್ತಮ ನಿರ್ಧಾರ. ಆದರೆ, ಇದು ಗ್ರಾಹಕರಿಗೆ ಹೊರೆಯಾಗದಂತೆ ಸರಿಯಾಗಿ ಅನುಷ್ಠಾನವಾಗಬೇಕು.



**ಎಲ್.ಎಚ್. ಅರುಣಕುಮಾರ್**, ವಕೀಲರು, ದಾವಣಗೆರೆ

## ಆರ್ಥಿಕ ಪುನಶ್ಚೇತನಕ್ಕೆ ಒತ್ತು

ಕೃಷಿಗೆ ವಿಶೇಷ ಆದ್ಯತೆ ನೀಡಲಾಗಿದೆ. ಕನಿಷ್ಠ ಬೆಂಬಲ ಬೆಲೆಗೆ ಹೆಚ್ಚು ಹಣ ಮೀಸಲಿಡಲಾಗಿದೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸೇರಿಸಿದರೆ 2,65,000 ಕೋಟಿ ಹಣ ಕೊಡಲಾಗುತ್ತಿದೆ.

ಬೇರೆ ದೇಶಗಳಿಗೆ ಹೋಲಿಸಿದರೆ ಕೋವಿಡ್ ನಂತರ ಆರ್ಥಿಕ ಪುನಶ್ಚೇತನ ಹೊಂದುತ್ತಿರುವ ಪ್ರಮುಖ ದೇಶವಾಗಿ ಭಾರತ ಹೊರಹೊಮ್ಮಿದೆ. 500 ಅಮೃತ ನಗರ ಘೋಷಣೆ ಮೂಲಕ ಎಲ್ಲಾ ರೀತಿಯ ಮೂಲಸೌಕರ್ಯ ನೀಡಲಾಗುತ್ತಿದೆ. ಶಿಕ್ಷಣ, ಆರೋಗ್ಯ, ಕೃಷಿ ಸೇರಿ ಎಲ್ಲಾ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗಿದೆ.



**- ಪ್ರಸನ್ನ ಕುಮಾರ್**, ಅಧ್ಯಕ್ಷರು, ಆರ್ಥಿಕ ಹಾಗೂ ತೆರಿಗೆ ಸ್ಥಾಯಿ ಸಮಿತಿ, ಮಹಾನಗರ ಪಾಲಿಕೆ.

# ಬಜೆಟ್‌ನ ಮುಖ್ಯಾಂಶಗಳು

***ಬಜೆಟ್‌ನ ಆರು ಸ್ತಂಭಗಳು : 1. ಆರೋಗ್ಯ ಮತ್ತು ಸ್ವಾಸ್ಥ್ಯ, 2. ಭೌತಿಕ ಹಾಗೂ ಹಣಕಾಸು ಬಂಡವಾಳ ಮತ್ತು ಮೂಲಭೂತ ಸೌಲಭ್ಯ, 3. ಆಶಯದ ಭಾರತಕ್ಕಾಗಿ ಒಳಗೊಳ್ಳುವಿಕೆಯ ಅಭಿವೃದ್ಧಿ, 4. ಮಾನವ ಬಂಡವಾಳದ ಪುನರುಜ್ಜೀವನ, 5. ಅನ್ವೇಷಣೆ, ಸಂಶೋಧನೆ ಮತ್ತು ಅಭಿವೃದ್ಧಿ, 6. ಕನಿಷ್ಠ ಸರ್ಕಾರ ಹಾಗೂ ಗರಿಷ್ಠ ಆಡಳಿತ.***

- ✦ ಆರೋಗ್ಯಕ್ಕಾಗಿ 2,23,846 ಕೋಟಿ ರೂ., ಕೊರೊನಾ ಲಸಿಕೆಗೆ 35 ಸಾವಿರ ಕೋಟಿ ರೂ.
- ✦ ಭಾರತದಲ್ಲಿ ರೂಪಿಸಲಾದ ನ್ಯುಮೋನಿಯಾ ಲಸಿಕೆ ದೇಶಾದ್ಯಂತ ವಿಸ್ತರಣೆ
- ✦ ಪ್ರಧಾನ ಮಂತ್ರಿ ಆತ್ಮನಿರ್ಭರ ಸ್ವಸ್ಥ ಭಾರತ ಯೋಜನೆಗೆ 64,180 ಕೋಟಿ ರೂ.
- ✦ ಪೌಷ್ಠಿಕಾಂಶ ಹೆಚ್ಚಿಸಲು ಮಿಷನ್ ಪೋಷಣ್ 2.0ಗೆ ಚಾಲನೆ
- ✦ ಜಲ ಜೀವನ್ ಮಿಷನ್ (ನಗರ)ಕ್ಕಾಗಿ ಐದು ವರ್ಷಗಳಿಗೆ 2.87 ಲಕ್ಷ ಕೋಟಿ ರೂ.
- ✦ ನಗರ ಸ್ವಚ್ಛ ಭಾರತ ಮಿಷನ್ 2.0ಗೆ ಐದು ವರ್ಷಗಳಿಗೆ 1,41,678 ಕೋಟಿ ರೂ.
- ✦ ಹಳೆಯ ವಾಹನಗಳ ವಿಲೇವಾರಿಗೆ ಸ್ಕ್ರ್ಯಾಪ್ ನೀತಿ. ವೈಯಕ್ತಿಕ ವಾಹನಗಳಿಗೆ 20 ಹಾಗೂ ವಾಣಿಜ್ಯ ವಾಹನಗಳಿಗೆ 15 ವರ್ಷಗಳ ನಂತರ ತಪಾಸಣೆ
- ✦ ಉತ್ಪಾದನೆ ಆಧರಿತ ಉತ್ತೇಜನ ಯೋಜನೆಗಾಗಿ 13 ವಲಯಗಳಿಗೆ ಐದು ವರ್ಷಗಳಿಗೆ 1.97 ಲಕ್ಷ ಕೋಟಿ ರೂ.
- ✦ ಮೂರು ವರ್ಷಗಳಲ್ಲಿ 7 ಜವಳಿ ಪಾರ್ಕ್ ರೂಪಿಸಲು ಮೆಗಾ ಜವಳಿ ಪಾರ್ಕ್ ಹೂಡಿಕೆ ಯೋಜನೆ
- ✦ ಮೂಲಭೂತ ಸೌಲಭ್ಯಗಳಿಗೆ ಹಣಕಾಸು ಒದಗಿಸಲು ಅಭಿವೃದ್ಧಿ ಬಂಡವಾಳ ಸಂಸ್ಥೆಗೆ 20 ಸಾವಿರ ಕೋಟಿ ರೂ.
- ✦ 2021-22ರಲ್ಲಿ ಬಂಡವಾಳ ವೆಚ್ಚಕ್ಕೆ 5.54 ಲಕ್ಷ ಕೋಟಿ ರೂ.
- ✦ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಇಲಾಖೆಗೆ 1.81 ಲಕ್ಷ ಕೋಟಿ ರೂ.
- ✦ ಬೆಂಗಳೂರು - ಚೆನ್ನೈ ನಡುವೆ 278 ಕಿ.ಮೀ.ಗಳ ಎಕ್ಸ್‌ಪ್ರೆಸ್‌ವೇ ನಿರ್ಮಾಣ
- ✦ ವಿದ್ಯುತ್ ವಿತರಣಾ ವಲಯ ಯೋಜನೆಗೆ ಐದು ವರ್ಷಗಳಿಗೆ 3.05 ಲಕ್ಷ ಕೋಟಿ ರೂ.
- ✦ ಉಜ್ವಲ ಯೋಜನೆ ಇನ್ನೂ ಒಂದು ಕೋಟಿ ಫಲಾನುಭವಿಗಳಿಗೆ ವಿಸ್ತರಣೆ
- ✦ ವಿಮಾ ವಲಯದ ವಿದೇಶಿ ನೇರ ಹೂಡಿಕೆ ಮಿತಿ ಈಗಿರುವ ಶೇ.49ರಿಂದ ಶೇ.74ಕ್ಕೆ ಹೆಚ್ಚಳ
- ✦ ಸರ್ಕಾರಿ ವಲಯದ ಕಂಪನಿಗಳ ಬಂಡವಾಳಕ್ಕೆ 20 ಸಾವಿರ ಕೋಟಿ ರೂ.
- ✦ ಬಂಡವಾಳ ಹಿಂತೆಗೆತದ ಮೂಲಕ 1.75 ಲಕ್ಷ ಕೋಟಿ ರೂ.
- ✦ ಸ್ವಾಮಿತ್ವ ಯೋಜನೆ ಇಡೀ ದೇಶಕ್ಕೆ ವಿಸ್ತರಣೆ
- ✦ 2021-22ರಲ್ಲಿ ಕೃಷಿ ವಲಯಕ್ಕೆ 16.5 ಲಕ್ಷ ಕೋಟಿ ರೂ. ಸಾಲ
- ✦ ನೂತನ ಶಿಕ್ಷಣ ಯೋಜನೆಯಡಿ 15 ಸಾವಿರ ಶಾಲೆಗಳ ಸಬಲೀಕರಣ
- ✦ ಬುಡಕಟ್ಟು ಪ್ರದೇಶಗಳಲ್ಲಿ 750 ಏಕಲವ್ಯ ಶಾಲೆಗಳ ಸ್ಥಾಪನೆ
- ✦ ಡಿಜಿಟಲ್ ಜನಗಣತಿಗಾಗಿ 3,768 ಕೋಟಿ ರೂ.
- ✦ 12 ಲಕ್ಷ ಕೋಟಿ ರೂ.ಗಳ ಸಾಲ
- ✦ 75 ವರ್ಷಕ್ಕೂ ಹಿರಿಯರು ಪಿಂಚಣಿ ಹಾಗೂ ಬಡ್ಡಿಯನ್ನಷ್ಟೇ ಆದಾಯವಾಗಿ ಹೊಂದಿದ್ದರೆ ಆದಾಯ ತೆರಿಗೆ ರಿಟರ್ನ್ ದಾಖಲಿಸುವ ಅಗತ್ಯವಿಲ್ಲ
- ✦ ಸೋಲಾರ್ ಇನ್ವರ್ಟರ್‌ಗಳ ಮೇಲಿನ ಆಮದು ತೆರಿಗೆ ಶೇ.5ರಿಂದ 20ಕ್ಕೆ ಏರಿಕೆ. ಸೌರ ದೀಪಗಳ ಆಮದು ತೆರಿಗೆ ಶೇ.5 ರಿಂದ 15ಕ್ಕೆ ಏರಿಕೆ

# ರಸ್ತೆ ಅಪಘಾತದಲ್ಲಿ ಮಡಿದ ಮಹಿಳೆಯರ ಕುಟುಂಬಗಳಿಗೆ ಪರಿಹಾರಕ್ಕೆ ಒತ್ತಾಯ

ದಾವಣಗೆರೆ,ಫೆ.1- ಧಾರವಾಡದ ಬಳಿ ಈಚೆಗೆ ನಡೆದ ರಸ್ತೆ ಅಪಘಾತದಲ್ಲಿ ಮಡಿದ ನಗರದ 10 ಜನ ಮಹಿಳೆಯರೂ ಸೇರಿದಂತೆ, ಎಲ್ಲಾ 12 ಜನರಿಗೆ ನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಎ.ನಾಗರಾಜ್ ಅವರು ಶೋಕ ವ್ಯಕ್ತಪಡಿಸಿದ್ದಾರೆ. ಈ ಆಕಸ್ಮಿಕ ಅಪಘಾತದಲ್ಲಿ ಮಡಿದ ಪ್ರತಿಯೊಬ್ಬರ ಕುಟುಂಬಕ್ಕೆ ರಾಜ್ಯ, ಕೇಂದ್ರ ಸರ್ಕಾರದಿಂದ ಒಟ್ಟಾಗಿ ತಲಾ 50 ಲಕ್ಷ ರೂ. ಪರಿಹಾರ ಮತ್ತು ಗಾಯಾಳುಗಳಿಗೆ ತಲಾ 10 ಲಕ್ಷ ರೂ. ಪರಿಹಾರ ನೀಡಬೇಕೆಂದು ನಾಗರಾಜ್ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಜೊತೆಗೆ, ಇದೇ ರೀತಿ ಹಲವು ಬಾರಿ ಈ ಸ್ಥಳದಲ್ಲಿ ರಸ್ತೆ ಅಪಘಾತಗಳು ನಡೆದಿದ್ದು, ನೂರಾರು ಜೀವಗಳನ್ನು ಬಲಿ ಪಡೆದಿವೆ. ಸ್ಥಳೀಯ ಸಹೋದರಿಯರು ಅಪಘಾತದಲ್ಲಿ ಮರಣ ಹೊಂದಿದ ಬಗ್ಗೆ ಸುಪ್ರೀಂ ಕೋರ್ಟ್, ಕರ್ನಾಟಕ ಸಾರಿಗೆ ವಿಭಾಗದ ಪ್ರಧಾನ ಕಾರ್ಯದರ್ಶಿಗಳಿಗೆ ನೋಟೀಸ್ ಜಾರಿ ಮಾಡಿದೆ. ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು ಕೂಡಲೇ ರಸ್ತೆಯನ್ನು ಸುಗಮ ಸಂಚಾರಕ್ಕೆ ಅನುವಾಗುವಂತೆ ಅಭಿವೃದ್ಧಿ ಪಡಿಸಬೇಕು ಎಂದು ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

# ಕುಮಾರ ಪಟ್ಟಣಂನಲ್ಲಿ ಎರಡನೇ ತುಂಗಾರತಿ



ರಾಣೇಬೆನ್ನೂರು, ಫೆ.1- ಭೂ ಮಾತೆ, ಗೋ ಮಾತೆ, ಗಂಗಾ ಮಾತೆ ಹಾಗೂ ನಿಸರ್ಗ ಮಾತೆ ಯನ್ನು ಪೂಜಿಸುವ ಪುಣ್ಯ ಭೂಮಿ ಭಾರತ. ಉತ್ತರ ಭಾರತದ ಹರಿದ್ವಾರ, ಋಶಿಕೇಶ, ಕಾಶಿಯಲ್ಲಿ ನಡೆಸುವ ಗಂಗಾರತಿಯಂತೆ ಪುಣ್ಯಕೋಟಿ ಮಠದಿಂದ ತುಂಗಭದ್ರಾ ತೀರದಲ್ಲಿ ತುಂಗಾರತಿ ಸಮಾರಂಭವನ್ನು ಫೆಬ್ರವರಿ ತಿಂಗಳಲ್ಲಿ ನಡೆಸಲಾಗುತ್ತಿದೆ ಎಂದು ಪೀಠಾಧಿಪತಿ ಬಾಲಯೋಗಿ ಶ್ರೀ ಜಗದೀಶ್ವರ ಸ್ವಾಮೀಜಿ ತಿಳಿಸಿದರು.

ರಂಭಾಪುರಿ ಜಗದ್ಗುರು ಲಿಂ. ವೀರಗಂಗಾಧರ ಮಹಾಸ್ವಾಮಿಗಳ ಪುಣ್ಯಾರಾಧನೆ ನಿಮಿತ್ಯ ನಡೆಸಲಾಗುವ ಈ ಸಮಾರಂಭದ ಸಾನಿಧ್ಯವನ್ನು ಶ್ರೀಶೈಲ ಜಗದ್ಗುರು ಶ್ರೀ ವೀರ ಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸುವರು. ರಾಜನಹಳ್ಳಿ ವಾಲ್ಮೀಕಿ ಪೀಠದ ಜಗದ್ಗುರುಗಳು ಹಾಗೂ ಆದಿಚುಂಚನಗಿರಿ ಸಂಸ್ಥಾನದ ಜಗದ್ಗುರುಗಳು ಪಾಲ್ಗೊಳ್ಳುವರು.


ವೃಷಭರೂಪಿಗಳಾದ ರಾಮನಗರ ಜಿಲ್ಲೆಯ ಕವಣಾಪುರದ ಶ್ರೀ ಬಸವೇಶ್ವರ ಸ್ವಾಮಿಗಳು ದಿನಾಂಕ 27 ರಂದು ಆಗಮಿಸಿ ಎರಡು ದಿನ ಇಲ್ಲಿಯೇ ವಾಸ್ತವ್ಯ ಮಾಡಿ ನಂಬಿದ ಭಕ್ತರನ್ನು ಆಶೀರ್ವದಿಸಲಿದ್ದಾರೆ.

ಸಮಾರಂಭದಲ್ಲಿ ಶಾಸಕ ಅರುಣಕುಮಾರ ಪೂಜಾರ್, ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಬಿ. ಕೋಳಿವಾಡ ಭಾಗವಹಿಸುವರು ಎಂದು ಬಾಲಯೋಗಿ ಶ್ರೀ ಜಗದೀಶ್ವರ ಸ್ವಾಮೀಜಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಸಂಧ್ಯಾವಂದನೆ ಶಿಬಿರ

ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ (ಬೆಂಗಳೂರು) ಮತ್ತು ಅಖಿಲ ಕರ್ನಾಟಕ ಅರ್ಚಕರು ಮತ್ತು ಪುರೋಹಿತರ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ಬಂಧುಗಳಿಗೆ ಸಂಧ್ಯಾವಂದನೆ ಮತ್ತು ನಿತ್ಯ ದೇವತಾರ್ಚನೆ ಶಿಬಿರವನ್ನು ಇಂದಿನಿಂದ ಫೆಬ್ರವರಿ 15 ರವರೆಗೆ ಪ್ರತಿದಿನ ಸಂಜೆ 5.30 ರಿಂದ 6.30 ರವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಕೂಡಲಿ ಶಂಕರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು ವಯಸ್ಸಿನ ಮಿತಿ ಇರುವುದಿಲ್ಲ ಎಂದು ಪುರೋಹಿತರ ಸಂಘದ ಅಧ್ಯಕ್ಷ ಪವನ್ ಕುಮಾರ್ ಭಟ್ (9886212889, 9611165426) ತಿಳಿಸಿದ್ದಾರೆ.

# ರಾಜೇಂದ್ರ ಬಡಾವಣೆಯಲ್ಲಿ ಬನಶಂಕರಿ ದೇವಿ ಅದ್ಧೂರಿ ಜಾತ್ರೆ



ದಾವಣಗೆರೆ, ಫೆ.1- ಮೂರು ದೇವತೆಗಳ ಸಂಗಮವಾಗಿರುವ ಡಿಸಿಎಂ ಲೇಔಟ್ ಹಿಂಭಾಗದ ರಾಜೇಂದ್ರ ಬಡಾವಣೆಯಲ್ಲಿನ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಬನದ ಹುಣ್ಣಿಮೆ ಪ್ರಯುಕ್ತ ಶ್ರೀ ಬನಶಂಕರಿ ದೇವಿಯ 7ನೇ ವರ್ಷದ ಜಾತ್ರಾ ಮಹೋತ್ಸವವು ಅದ್ಧೂರಿಯಾಗಿ ನೆರವೇರಿತು.

ದೇವಾಂಗ ಜಗದ್ಗುರು ದಯಾನಂದಪುರಿ ಶ್ರೀಗಳ ಕೃಪಾಶೀರ್ವಾದ ದೊಂದಿಗೆ ಬನಶಂಕರಿ ದೇವಸ್ಥಾನ ಸಮಿತಿ ಮತ್ತು ಬನಶಂಕರಿ ಯುವಕರ ಸಂಘದ ವತಿಯಿಂದ ನಡೆದ ಮೂರು ದಿನಗಳ ದೇವಿಯ ಜಾತ್ರಾ ಮಹೋತ್ಸವದ ಪ್ರಯುಕ್ತ ಮೊದಲ ದಿನ ನಂದಿ ಧ್ವಜಾ ರೋಹಣ, ಮಹಾಮಂಗಳಾರತಿ, 2ನೇ ದಿನ ಗಂಗಾ ಪೂಜೆ, ಶಾಖಾಂ ಬರಿ ವ್ರತ, ವಿಶೇಷ ತರಕಾರಿ ಅಲಂಕಾರ ಮಾಡಲಾಯಿತು. ದೇವಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸ ಲಾಗಿರುವ ಗಾಯತ್ರಿ ದೇವಿ ಮತ್ತು ಲಕ್ಷ್ಮಿ ದೇವಿಗೂ ಸಹ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು.

ಮೂರನೇ ದಿನದಂದು ಬನಶಂಕರಿ ದೇವಿಗೆ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ, ಮಹಾಮಂಗಳಾರತಿ ನೆರವೇರಿತು. ಮಧ್ಯಾಹ್ನ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಸಂಜೆ ದೇವಸ್ಥಾನದ ಆವರಣದಿಂದ ನಿಟ್ಟುವಳ್ಳಿಯ ರಾಜ ಬೀದಿಗಳಲ್ಲಿ ಬೆಳ್ಳಿ ರಥದಲ್ಲಿ ಬನಶಂಕರಿ ದೇವಿಯ ಬೃಹತ್ ಮೆರವಣಿಗೆ ನಡೆಯಿತು.

# ವೈದ್ಯಕೀಯ ಕಾಲೇಜುಗಳಲ್ಲಿ ಕ್ಯಾನ್ಸರ್ ಕೇಂದ್ರ

**(1ನೇ ಪುಟದಿಂದ)** ಹಂತವಾಗಿ ಕ್ಯಾನ್ಸರ್ ಕೇಂದ್ರ ಆರಂಭಿಸಲಾಗುವುದು ಎಂದರು.

ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು ವಿಭಾಗವಾರು ಕ್ಯಾನ್ಸರ್ ಆಸ್ಪತ್ರೆ ಆರಂಭಿಸುವ ಉದ್ದೇಶವಿದೆ, ರಾಜ್ಯದಲ್ಲಿ ಪ್ರತಿ ವರ್ಷ 65 ಸಾವಿರ ಜನರು ವಿವಿಧ ಕ್ಯಾನ್ಸರ್ ರೋಗಕ್ಕೆ ಒಳಗಾಗುತ್ತಿದ್ದಾರೆ, ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ಉತ್ತಮ ಚಿಕಿತ್ಸೆ ನೀಡಲಾಗುತ್ತಿದೆ. ಕಲಬುರಗಿಯಲ್ಲಿ ಕಿದ್ವಾಯಿ ಸಂಸ್ಥೆಯ ಅಂಗಸಂಸ್ಥೆಯಾಗಿ ಪೆರಿಫೆರಲ್ ಕ್ಯಾನ್ಸರ್ ಸಂಸ್ಥೆ ಸ್ಥಾಪಿಸಲಾಗಿದೆ, ತುಮಕೂರಿನಲ್ಲಿ ಇಂತಹ ಕೇಂದ್ರ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆ ಎಂದರು.

# ಜಗಳೂರು ತಾ।। ಗ್ರಾ.ಪಂ.ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಿಗದಿ

ಜಗಳೂರು, ಫೆ.1- ತಾಲ್ಲೂಕಿನ 22 ಗ್ರಾಮ ಪಂಚಾಯಿತಿಗಳ ಅಧ್ಯಕ್ಷ - ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ದಿನಾಂಕ ನಿಗದಿ ಪಡಿಸಿ, ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ದೇವಿಕೆರೆ ಗ್ರಾ.ಪಂ ಫೆ.6, ಅಣಬೂರು, ತೋರಣಗಟ್ಟೆ, ಕೆಚ್ಚೇನಹಳ್ಳಿ, ಹಿರೇಮಲ್ಲನಹೊಳೆ, ಬಸವನಕೋಟೆ, ಪಲ್ಲಾಗಟ್ಟೆ, ಫೆ.8 ಹಾಲೇಕಲ್ಲು, ಕ್ಯಾಸನಹಳ್ಳಿ, ಬಿದರಕೆರೆ, ದಿದ್ದಿಗೆ, ಹೊಸಕೆರೆ, ಮುಸ್ಟೂರು, ಕಲ್ಲೇದೇವರಪುರ, ಸೊಕ್ಕೆ, ಬಿಳಿಚೋಡು, ಫೆ.9 ಬಿಸ್ತುವಳ್ಳಿ, ಹನುಮಂತಾಪುರ, ಅಸಗೋಡು, ಗುರುಸಿದ್ದಾಪುರ, ದೊಣ್ಣೆಹಳ್ಳಿ, ಫೆ.10 ಗುತ್ತಿದುರ್ಗ ಗ್ರಾಮ ಪಂಚಾಯಿತಿಗಳಲ್ಲಿ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ನಿಗದಿತ ದಿನಾಂಕಗಳಂದು ಚುನಾವಣೆ ನಡೆಯಲಿವೆ.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸಲು, ಪಲ್ಲಾಗಟ್ಟೆ, ಬಿಳಿಚೋಡು, ತೋಟಗಾರಿಕೆ ಸಹಾಯಕ ನಿರ್ದೇಶಕ ವೆಂಕಟೇಶ್ ಮೂರ್ತಿ, ಸೊಕ್ಕೆ, ಬಸವನಕೋಟೆ, ತಾ.ಪಂ ಇಒ ಮಲ್ಲಾನಾಯ್ಕ, ದೊಣ್ಣೆಹಳ್ಳಿ, ಕಲ್ಲದೇವರಪುರ, ಬಿಇಒ ವೆಂಕಟೇಶ್, ಮುಸ್ಟೂರು, ಹಿರೇಮಲ್ಲನಹೊಳೆ, ಪಂಚಾಯತ್ ರಾಜ್ ಇಲಾಖೆ ಉಪವಿಭಾಗ ಸಹಾಯಕ ಕಾರ್ಯಪಾಲಕ ಅಭಿಯಂತರ ಶಿವಕುಮಾರ್, ಹೊಸಕೆರೆ, ಗುರುಸಿದ್ದಾಪುರ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ಕಾರ್ಯಪಾಲಕ ಅಭಿಯಂತರರು ರುದ್ರಪ್ಪ, ದಿದ್ದಿಗೆ, ಅಸಗೋಡು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆ ಇಲಾಖೆ ಸಹಾಯಕ ನಿರ್ದೇಶಕ ಲಿಂಗರಾಜ್, ದೇವಿಕೆರೆ, ಗುತ್ತಿದುರ್ಗ ತಹಶೀಲ್ದಾರ್ ಡಾ.ನಾಗವೇಣಿ, ಬಿಸ್ತುವಳ್ಳಿ, ಬಿದರಕೆರೆ, ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಮಂಜುನಾಥ್, ಕೆಚ್ಚೇನಹಳ್ಳಿ, ಕ್ಯಾಸೇನಹಳ್ಳಿ ಎಪಿಎಂಸಿ ಕಾರ್ಯದರ್ಶಿ ಯೋಗೇಶ್, ಹಾಲೇಕಲ್ಲು, ತೋರಣಗಟ್ಟೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೀರೇಂದ್ರ, ಅಣಬೂರು, ಹನುಮಂತಾಪುರ ಗ್ರಾಮ ಪಂಚಾಯಿತಿಗಳಿಗೆ ಗೊತ್ತುಪಡಿಸಿದ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

# ಉತ್ತಮ ಇಳುವರಿ ನಿರೀಕ್ಷೆಯಲ್ಲಿ ಎಲೆಕೋಸು ಬೆಳೆದ ರೈತ

## ಬೆಲೆ ಪಾತಾಳಕ್ಕಿಳಿದು ಕೇಳುವವರಿಲ್ಲದೆ, ರಂಟೆ ಹೊಡೆದು ನೆಲದಲ್ಲಿ ಮುಚ್ಚುವ ಕೆಲಸ ಮಾಡುತ್ತಿರುವ ರೈತರು

**ಕೆ. ಉಚ್ಚಂಗೆಪ್ಪ**

ಹರಪನಹಳ್ಳಿ, ಫೆ.1- ಮಹಾಮರಿ ಕೊರೊನಾ ವೈರಸ್‌ನಿಂದ ಇಡೀ ವಿಶ್ವವೇ ಕಂಗಾಲಾಗಿದ್ದು ರೈತರು, ಬಡವರು, ನಿರ್ಗತಿಕರು, ಅಲೆಮಾರಿಗಳು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಇವರ ನಿತ್ಯ ಬದುಕಿಗಾಗಿ ಬವಣೆಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು ಒಂದಡೆಯಾದರೆ, ರೈತ ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಸಿಗದೆ ರೈತನ ಬದುಕು ಶೋಚನೀಯವಾಗಿದೆ.



ತಾಲ್ಲೂಕಿನಲ್ಲಿ ಈ ಬಾರಿ ಉತ್ತಮ ಮಳೆಯಾಗಿದ್ದು, ತಾಲ್ಲೂಕಿನ ಪ್ರಮುಖ ಬೆಳೆಯಾದ ಮೆಕ್ಕೆ ಜೋಳಕ್ಕೆ ಬೆಂಬಲ ಬೆಲೆ ಸಿಗದೆ ರೈತ ಪರದಾಡುತ್ತಿದ್ದಾನೆ. ಅದರಲ್ಲೂ ತರಕಾರಿ ಬೆಳೆಗಳಾದ ಟೊಮ್ಯಾಟೋ, ಎಲೆ ಕೋಸು ಬೆಳೆದ ರೈತರಿಗೆ ಸರಿಯಾದ ಬೆಲೆ ಸಿಗದೇ, ಇತ್ತ ಕೈಗೆ ಬಂದ ಫಸಲು ಕೀಳದೆ ಹೊಲದಲ್ಲೇ ಕೊಳೆಯುತ್ತಿದೆ. ತಾಲ್ಲೂಕಿನ ಜಂಗಮ ತುಂಬಿಗೆರೆ ಪ್ರಗತಿಪರ ರೈತ ಕೆ.ಜಿ. ಅಜ್ಜನಗೌಡ ಮಾತನಾಡಿ, ತಮ್ಮ 1.5 ಎಕರೆ ಹೊಲದಲ್ಲಿ 40 ಸಾವಿರ ಖರ್ಚು ಮಾಡಿ ಎಲೆಕೋಸು ಬೆಳೆದಿ ದ್ದು, ಈಗ ಕಟಾವಿಗೆ ಬಂದಿದ್ದು ಭರಮಸಾಗರ, ಹರಪನಹಳ್ಳಿ, ದಾವಣಗೆರೆ ಮಧ್ಯವರ್ತಿಗಳು ರೈತರ ಹೊಲಗಳಿಗೆ ಬಂದು ಖರೀದಿ ಮಾಡುತ್ತಿದ್ದರು. ಈ ವರ್ಷ ನಾವು ಫೋನ್ ಮಾಡಿದರೂ ಸರಿಯಾದ ಉತ್ತರವಿಲ್ಲ. ನಮಗೆ 1 ರೂ. ಕೇಜಿಗೆ ಖರೀದಿ ಮಾಡಿ ಎಂದು ಅಂಗಲಾಚಿದರೂ ಕೇಳುವವರಿಲ್ಲ. ತಾಲ್ಲೂಕಿನ ರಾಮಘಟ್ಟ, ಹೊಸಕೋಟೆ, ಮಾದಿಹಳ್ಳಿ ರಾಮಘಟ್ಟ ತಾಂಡಾ, ಬೂದಿಹಾಳ್ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಎಲೆಕೋಸು ಬೆಳೆದು ಸರಿಯಾದ ಬೆಲೆ ಸಿಗದೆ ರಂಟೆ ಹೊಡೆದು ನೆಲದಲ್ಲಿ ಮುಚ್ಚುವ ಕೆಲಸ ಮಾಡುತ್ತಿದ್ದಾರೆ. ದಿನದಿಂದ ದಿನಕ್ಕೆ ಪೆಟ್ರೋಲ್, ಡೀಸೆಲ್, ಗ್ಯಾಸ್ ಸೇರಿದಂತೆ ಇತರೆ ವಸ್ತುಗಳ ಬೆಲೆ ಗಗನಕ್ಕೇರಿದ್ದು, ರೈತರು ಬೆಳೆದ ಬೆಳೆಗಳು ನೆಲಕಚ್ಚಿದ್ದು ರೈತರು ಕೊಳ್ಳುವ ಎಲ್ಲಾ ವಸ್ತುಗಳು ಗಗನಕ್ಕೇರಿದ್ದು, ಈಗಿನ ಯುವ ಜನತೆ ವ್ಯವಸಾಯದಿಂದ ದೂರ ಉಳಿಯುತ್ತಿದ್ದು, ಮುಂದಿನ ದಿನಗಳಲ್ಲಿ ಆಹಾರ ಧಾನ್ಯಗಳು ಕೊರತೆಯಾಗುವುದು ನಿಶ್ಚಿತ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ವ್ಯವಸಾಯ ಅಳಿವಿನ ಅಂಚಿನಲ್ಲಿ ಸರಿದುಹೋಗುತ್ತದೆ ಎಂದರು.

ಒಟ್ಟಾರೆ ರೈತ ಸಾಲದ ಸುಳಿಯಲ್ಲಿ ಸಿಕ್ಕು ದಿನನಿತ್ಯ ನರಕಯಾತನೆ ಅನುಭವಿಸುತ್ತಿದ್ದು, ಹತ್ಮಹತ್ಯೆ ಪ್ರಕರಣಗಳು ಕೂಡ ಜಾಸ್ತಿಯಾಗುತ್ತಿವೆ ಎಂದರೆ ತಪ್ಪಾಗಲಾರದು.

# ಅಭಿವೃದ್ಧಿಗೆ ಪೂರಕ ಬಜೆಟ್

**(1ನೇ ಪುಟದಿಂದ)** ಇಲಾಖೆಯ ಸರ್ವತೋಮುಖ ಅಭಿವೃದ್ಧಿಗೆ ದಾಖಲೆ ಮೊತ್ತದ ಅನುದಾನವನ್ನು ಮಾನ್ಯ ಹಣಕಾಸು ಸಚಿವರು ನೀಡಿದ್ದಾರೆ. ವಿಮಾ ವಲಯದಲ್ಲಿ ವಿದೇಶಿ ನೇರ ಬಂಡವಾಳವನ್ನು ಶೇಕಡ 49 ರಿಂದ 74 ಕ್ಕೆ ಏರಿಕೆ ಮಾಡಲಾಗಿದೆ. ಆರೋಗ್ಯ ಕ್ಷೇತ್ರವನ್ನು ಪ್ರಮುಖ ಆಧಾರ ಸ್ಥಂಭಗಳಲ್ಲಿ ಒಂದಾಗಿರಿಸಿಕೊಂಡಿರುವ ಆರ್ಥಿಕ ಸಚಿವರು ಕೋವಿಡ್ ಮುಕ್ತ ಭಾರತ ಮಾಡುವ ಸಲುವಾಗಿ 35000 ಕೋಟಿ ರೂ. ಅನುದಾನವನ್ನು ಕೋವಿಡ್ ಲಸಿಕೆಗಾಗಿ ಮೀಸಲಿಟ್ಟಿದ್ದಾರೆ.

ಉಜ್ವಲ ಯೋಜನೆಯಡಿ ಉಚಿತ ಗ್ಯಾಸ್ ಸಿಲಿಂಡರ್ ವಿತರಣೆ ಯೋಜನೆಯನ್ನು ಪುನಃ 1 ಕೋಟಿ ಜನರಿಗೆ ವಿಸ್ತರಣೆ ಮಾಡಿದ್ದಾರೆ. ಒಟ್ಟಾರೆಯಾಗಿ ಎಲ್ಲಾ ವರ್ಗವನ್ನು ಗಮನದಲ್ಲಿಟ್ಟು ಕೊಂಡು ಆರ್ಥಿಕತೆಯನ್ನು ಸರಿದಾರಿಗೆ ತಂದು ನಿಲ್ಲಿಸುವಲ್ಲಿ ಅಗತ್ಯ ವಾಗಿರುವ ಎಲ್ಲಾ ಪ್ರಯತ್ನ ಗಳನ್ನು ನಿರ್ಮಲಾ ಸೀತಾರಾಮನ್ ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ.

# ಡೀಸೆಲ್, ಸೇಬಿನವರೆಗೆ ಸೆಸ್

**(1ನೇ ಪುಟದಿಂದ)** ತಿಳಿಸಿದ್ದಾರೆ. ಇದರಿಂದಾಗಿ ರೈತರಿಗೆ ಹೆಚ್ಚಿನ ಆದಾಯ ಸಿಗಲಿದೆ. ಇದಕ್ಕಾಗಿ ಸಣ್ಣ ಸಂಖ್ಯೆಯ ಸರಕುಗಳ ಮೇಲೆ ಎ.ಐ.ಡಿ.ಸಿ. ಸೆಸ್ ವಿಧಿಸಲಾಗುವುದು. ಆದರೆ, ಬಹುತೇಕ ಸರಕುಗಳಿಗೆ ಗ್ರಾಹಕರು ಹೆಚ್ಚು ಬೆಲೆ ತೆರುವ ಅಗತ್ಯ ಬಾರದು ಎಂದವರು ಹೇಳಿದ್ದಾರೆ.

ಪೆಟ್ರೋಲ್ ಮೇಲೆ ಲೀಟರ್‌ಗೆ 2.50 ರೂ.ಗಳ ಹಾಗೂ ಡೀಸೆಲ್ ಮೇಲೆ ಲೀಟರ್‌ಗೆ 4 ರೂ.ಗಳ ಸೆಸ್ ಹೇರುವ ಸಂದರ್ಭದಲ್ಲಿ ಅವುಗಳ ಮೇಲಿರುವ ಇತರೆ ತೆರಿಗೆಗಳನ್ನು ಇಳಿಕೆ ಮಾಡಲಾಗಿದೆ. ಇದರಿಂದಾಗಿ ಗ್ರಾಹಕರು ಇಂಧನಕ್ಕೆ ಹೆಚ್ಚು ಬೆಲೆ ತೆರುವ ಅಗತ್ಯ ಬರುವುದಿಲ್ಲ.

ಬಂಗಾರ ಹಾಗೂ ಬೆಳ್ಳಿಗಳ ಮೇಲೆ ಶೇ.2.5ರ ಆಮದು ಸೆಸ್ ಹೇರಲಾಗಿದೆ. ಮದ್ಯದ ಮೇಲೆ ಶೇ.100, ಕಚ್ಚಾ ತಾಳೆ ಎಣ್ಣೆ ಮೇಲೆ ಶೇ.17.5, ಸೇಬಿನ ಮೇಲೆ ಶೇ.35, ಕಲ್ಲಿದ್ದಲು, ಇಗ್ನೈಟ್ ಹಾಗೂ ಪೀಟ್ ಮೇಲೆ ಶೇ.1.5, ಯುರಿಯಾ ಸೇರಿದಂತೆ, ರಸಗೊಬ್ಬರದ ಮೇಲೆ ಶೇ.5 ಹಾಗೂ ಹತ್ತಿಯ ಮೇಲೆ ಶೇ.5ರ ಸೆಸ್ ವಿಧಿಸಲಾಗಿದೆ.

# ಆರೋಗ್ಯ ಭಾಗ್ಯ, ಕೃಷಿಗೆ ಸೌಭಾಗ್ಯ

**(1ನೇ ಪುಟದಿಂದ)** ಪಟ್ಟಿಗೂ ಹೆಚ್ಚು ಹಣ ಪಡೆಯಲಿದೆ. ಬಜೆಟ್ ಮಂಡನೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ನಿರ್ಮಲ ರಸ್ತೆ, ಸೇತುವೆ, ಬಂದರು, ವಿದ್ಯುತ್ ಉತ್ಪಾದನೆ ಸೇರಿದಂತೆ, ಹಲವಾರು ಮೂಲಭೂತ ಸೌಲಭ್ಯಗಳ ಮೇಲೆ ಬೃಹತ್ ಹೂಡಿಕೆ ಮಾಡಲಿದ್ದೇವೆ. ಆರೋಗ್ಯ ವಲಯಕ್ಕೆ ಹೆಚ್ಚಿನ ಗಮನ ಹರಿಸಿದ್ದೇವೆ ಎಂದು ತಿಳಿಸಿದ್ದಾರೆ.

ಏಪ್ರಿಲ್ 1ರಿಂದ ಜಾರಿಗೆ ಬರಲಿರುವ ಹಣಕಾಸು ವರ್ಷಕ್ಕೆ ಅನ್ವಯವಾಗುವ ಬಜೆಟ್ ಮಂಡಿಸಿರುವ ಸೀತಾರಾಮನ್, ನಿವೃತ್ತಿ ನಿಧಿಗೆ ನೀಡಲಾಗುವ ತೆರಿಗೆ ವಿನಾಯಿತಿಯನ್ನು ವರ್ಷಕ್ಕೆ 2.5 ಲಕ್ಷ ರೂ.ಗಳಿಗೆ ಸೀಮಿತಗೊಳಿಸಿದ್ದಾರೆ. ಎಲ್.ಟಿ.ಸಿ.ಗೆ ತೆರಿಗೆ ವಿನಾಯಿತಿ ಕಲ್ಪಿಸಿದ್ದಾರೆ. ಇದರ ಜೊತೆಗೆ 50 ಲಕ್ಷ ರೂ.ಗಳಿಗೂ ಹೆಚ್ಚಿನ ಸರಕು ಖರೀದಿಸುವವರಿಗೆ ಶೇ.0.1ರ ಟಿ.ಡಿ.ಎಸ್. ವಿಧಿಸಲಾಗುವುದು. 10 ಕೋಟಿ ರೂ.ಗಳಿಗೂ ಹೆಚ್ಚು ವಹಿವಾಟು ನಡೆಸುವವರಿಗೆ ಮಾತ್ರ ಟಿಡಿಎಸ್ ಪಡೆಯುವ ಹೊಣೆ ನೀಡಲಾಗುವುದು.

75 ವರ್ಷಕ್ಕೂ ಹೆಚ್ಚಿನವರು ಪಿಂಚಣಿ ಹಾಗೂ ಬಡ್ಡಿ ಆದಾಯ ಮಾತ್ರ ಪಡೆಯುತ್ತಿದ್ದರೆ ಅವರು ಆದಾಯ ತೆರಿಗೆ ರಿಟರ್ನ್ ಸಲ್ಲಿಸುವುದರಿಂದ ವಿನಾಯಿತಿ ನೀಡಲಾಗಿದೆ.

ಮನೆ ಕಟ್ಟಿಕೊಳ್ಳುವವರಿಗೆ ನೆರವಾಗುವ ಸಲುವಾಗಿ ಗೃಹ ಸಾಲಕ್ಕೆ ಪಾವತಿಸುವ ಬಡ್ಡಿಗೆ 1.5 ಲಕ್ಷ ರೂ.ಗಳ ಹೆಚ್ಚುವರಿ ವಿನಾಯಿತಿ ನೀಡುವ ಅವಧಿಯನ್ನು ಮಾರ್ಚ್ 31, 2022ರವರೆಗೆ ವಿಸ್ತರಿಸಲಾಗಿದೆ.

ವಿಮಾ ವಲಯದ ವಿದೇಶಿ ನೇರ ಹೂಡಿಕೆಯ ಮಿತಿಯನ್ನು ಈಗಿರುವ ಶೇ.40ರಿಂದ ಶೇ.74ಕ್ಕೆ ಏರಿಕೆ ಮಾಡಲಾಗಿದೆ.

ಡೆವಿಡೆಂಡ್ ಘೋಷಣೆ, ಇಲ್ಲವೇ ಪಾವತಿಯ ನಂತರವೇ ತೆರಿಗೆದಾರರು ಆ ಕುರಿತ ತೆರಿಗೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ರಿಯಲ್ ಎಸ್ಟೇಟ್ ಇನ್‌ಫ್ರಾಸ್ಟ್ರಕ್ಚರ್ ಟ್ರಸ್ಟ್ ಹಾಗೂ ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳ ಡಿವಿಡೆಂಡ್ ಪಾವತಿಗೆ ಟಿ.ಡಿ.ಎಸ್. ವಿನಾಯಿತಿ ನೀಡಲಾಗಿದೆ.

ನವೋದ್ಯಮಗಳಿಗೆ ನೀಡಲಾಗುವ ತೆರಿಗೆ ವಿನಾಯಿತಿ ಅವಧಿಯನ್ನು ಮಾರ್ಚ್ 31, 2022ರವರೆಗೆ ವಿಸ್ತರಿಸಲಾಗಿದೆ.

ಆದಾಯ ತೆರಿಗೆ ಅಸೆಸ್‌ಮೆಂಟ್ ಅನ್ನು ಮರು ಪರಿಶೀಲಿಸಲು ಇರುವ ಗಡುವನ್ನು ಈಗಿರುವ ಆರು ವರ್ಷಗಳಿಂದ ಮೂರು ವರ್ಷಕ್ಕೆ ಇಳಿಸಲಾಗಿದೆ. ವರ್ಷವೊಂದರಲ್ಲಿ 50 ಲಕ್ಷ ರೂ.ಗಳಿಗೂ ಹೆಚ್ಚು ಮೊತ್ತದ ಅಘೋಷಿತ ಆದಾಯಕ್ಕೆ ಸಾಕ್ಷಿ ಇದ್ದರೆ ಮಾತ್ರ ಹತ್ತು ವರ್ಷಗಳವರೆಗಿನ ಹಳೆಯ ಪ್ರಕರಣಗಳನ್ನು ಮತ್ತೆ ಪರಿಶೀಲಿಸಲು ಅವಕಾಶ ನೀಡಲಾಗುವುದು.

2021-22ರ ಸಾಲಿನ ವಿತ್ತೀಯ ಕೊರತೆ ಶೇ.6.8ರಷ್ಟಿರಲಿದೆ ಎಂದು ಸೀತಾರಾಮನ್ ತಿಳಿಸಿದ್ದಾರೆ. ಪ್ರಸಕ್ತ ಹಣಕಾಸು ವರ್ಷದ ವಿತ್ತೀಯ ಕೊರತೆಯ ಪ್ರಮಾಣ ಶೇ.9.5ರಷ್ಟಿರಲಿದೆ ಎಂದು ಅಂದಾಜಿಸಲಾಗಿದೆ. ಹತ್ತಿ, ರೇಷ್ಮೆ, ಮೆಕ್ಕೆಜೋಳ, ಕೆಲವು ಹರಳು ಹಾಗೂ ಆಭರಣ, ವಾಹನಗಳ ಬಿಡಿ ಭಾಗ, ಸ್ಕ್ರೂ ಹಾಗೂ ನಟ್ಟುಗಳ ಆಮದು ಸುಂಕವನ್ನು ಹೆಚ್ಚಿಸಲಾಗಿದೆ.

ಪ್ರಿಂಟೆಡ್ ಸರ್ಕಿಟ್ ಬೋರ್ಡ್ ಜೋಡಣೆ, ವೈರ್ ಹಾಗೂ ಕೇಬಲ್, ಸೋಲಾರ್ ಇನ್ವರ್ಟರ್ ಹಾಗೂ ಸೌರ ದೀಪಗಳ ಮೇಲಿನ ಆಮದು ಸುಂಕವನ್ನೂ ಹೆಚ್ಚಿಸಲಾಗಿದೆ.

ನಾಫ್ತಾ, ಕಬ್ಬಿಣ ಹಾಗೂ ಗುಜರಿ ಉಕ್ಕು, ವಿಮಾನಗಳ ಬಿಡಿ ಭಾಗ, ಬಂಗಾರ ಮತ್ತು ಬೆಳ್ಳಿಯ ಆಮದು ಸುಂಕವನ್ನು ಇಳಿಕೆ ಮಾಡಲಾಗಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳ ಮರು ಬಂಡವಾಳಕ್ಕಾಗಿ 20 ಸಾವಿರ ಕೋಟಿ ರೂ.ಗಳನ್ನು ಪ್ರಕಟಿಸಲಾಗಿದೆ.

ಸರ್ಕಾರಿ ಸ್ವಾಮ್ಯದ ಉದ್ಯಮಗಳ ಖಾಸಗೀಕರಣದ ಮೂಲಕ 1.75 ಲಕ್ಷ ಕೋಟಿ ರೂ.ಗಳನ್ನು ಗಳಿಸುವ ಗುರಿ ಹೊಂದಲಾಗಿದೆ. ಎಲ್.ಐ.ಸಿ. ಸೇರಿದಂತೆ ಹಲವು ಸರ್ಕಾರಿ ಕಂಪನಿಗಳ ಐ.ಪಿ.ಒ.ಗೆ ಯೋಜಿಸಲಾಗಿದೆ.

## ಮಂಡನೆಯಾಯಿತು ಮುಂಗಡ ಪತ್ರ

ಮಂಡನೆಯಾಯಿತು ಮುಂಗಡ ಪತ್ರ
ಮಂಡೆಯ ಬಿಸಿ ಮಾಡುವ ಪತ್ರ
ಮುಂಗಡ ಮಾಡುವ ಖರ್ಚಿನ ಪತ್ರ
ಮುಂದಿನ ಯೋಜನೆಗಳ ಪತ್ರ

ಕಾದು ಕುಳಿತ ಸಾಮಾನ್ಯ ಜನರಿಗೆ
ಮುದ ನೀಡಲು ಪ್ರಯತ್ನಿಸುತ
ಆದಾಯಗಳ ಹೆಚ್ಚು ಮಾಡಲು
ಸದಾ ಶ್ರಮಿಸೋ ಚೆಂದದ ಪತ್ರ

ಎಲ್ಲರ ಮೆಚ್ಚಿಸಲಾಗದು ಜಗದಲಿ
ಬಲ್ಲರು ಇದನು ಮಂಡಿಸುವವರು
ಬೆಲ್ಲದ ಜೊತೆಗೆ ಬೇವನು ಬೆರೆಸಿ
ಎಲ್ಲರ ಬಾಯಿಗೆ ಹಾಕುವರು

ಏಳು ಬೀಳುಗಳ ಈ ಸಮಯದಲಿ
ತಾಳೆ ನೋಡಬೇಕು ಎಲ್ಲವನು
ಹಾಳು ಮಾಡದೆ ಆರ್ಥಿಕತೆಯನು
ಎಳೆಯ ಬೇಕು ಈ ರಾಷ್ಟ್ರವನು

ಮುಂಗಡಪತ್ರವು ಸಂತಸತರಲಿ
ಸಂಗಡ ಎಲ್ಲರ ಸೇರಿಸುತಿರಲಿ
ಸಂಕಟ ಕಷ್ಟಕೆ ಸ್ಪಂದಿಸುತಿರಲಿ
ಅಂದದ ಬಾಳಿಗೆ ನಾಂದಿಯಾಗಲಿ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಇಂದು ತ್ಯಾಗರಾಜರ ಆರಾಧನೆ ಶ್ರೀ ತ್ಯಾಗರಾಜ ಜೀವನ ಚರಿತ್ರೆ

ಸಂಗೀತ ವಾಗ್ಗೇಯಕಾರ ಕೀರ್ತಿ ಶಿಖರ
ಸೀತಮ್ಮ ರಾಮಬ್ರಹ್ಮರ ಪುತ್ರ
ಕರ್ನಾಟಕ ಸಂಗೀತ ಶ್ರೇಷ್ಠ
ರಾಮಭಕ್ತ ಶ್ರೀ ತ್ಯಾಗರಾಜರು

1767 ತಿರುವಾಯೂರಿನಲ್ಲಿ ಜನನ
ಪ್ರತಿದಿನ ಜಯದೇವ ಅಷ್ಟಪದಿ ಪಠಣ
ನಿರಂತರ ಪುರಂದರದಾಸರ ಕೀರ್ತನ
ಅಣ್ಣಾಮಚಾರ್ಯರ ಸಂಕೀರ್ತನ

ನಿತ್ಯ ಪೋತನ ಭಾಗವತ ಸ್ತುತಿ
ವೆಂಕಟರಮಣಯ್ಯರ ಬಳಿ ಶಿಷ್ಯವೃತ್ತಿ
ರಾಮಕೃಷ್ಣಆನಂದರಿಂದ ನಾದೋಪಾಸ್ತಿ
ನಾರದರಿಂದ ಪುಸ್ತಕದಾ ಆಸ್ತಿ

96 ಕೋಟಿ ಬಾರಿ ರಾಮತಾರಕ ಜಪ
ಸಹಸ್ರಾರು ಕೃತಿ ಸಂಕೀರ್ತನೆಗಳ ಕಲ್ಪ
ರಾಜಾನಆಹ್ವಾನ ತಿರಸ್ಕರಿಸಿದ ವಿರಾಗಿ
ಆಭರಣಕ್ಕಿಂತ ರಾಮ ಪೂಜೆ ಶ್ರೇಷ್ಠ ವೆಂದ ಭಕ್ತ

ಕೀರ್ತನೆಯಿಂದ ರಾಮನನು ಒಲಿಸಿಕೊಂಡ
ಮಹಾತ್ಮ
ತಿರುಪತಿಯಲ್ಲಿ ತೆರೆ ಸರಿಸಿ ದರ್ಶನ ಪಡೆದ
ಮಹಾಮಹಿಮ
ಕನಸಿನಲ್ಲಿ ರಾಮನ ನುಡಿ
ಕಾವೇರಿಯಲ್ಲಿದ್ದ ರಾಮವಿಗ್ರಹ ಪಡೆದ ಧನ್ಯ

ತೆಲುಗು ಸಂಸ್ಕೃತದಲ್ಲಿ ಘನರಾಗ ರಚನಾ
ಎಂದರೋ ಮಹಾನುಭಾವುಲು
ಜಗದಾನಂದಕಾರಕ ಕೀರ್ತನ
ಪಂಚರತ್ನ ಕೀರ್ತನೆಗಳ ಜಗಕ್ಕಿತ್ತರು
ತ್ಯಾಗಬ್ರಹ್ಮದಂತ ಅನೇಕ ಪ್ರಶಸ್ತಿ ಪಡೆದರು

1847ರಲ್ಲಿ ಸನ್ಯಾಸ
ದೊರಕುನ ಇಟುವಂಟಿ ಸೇವಾ ಎಂಬ ಕೀರ್ತನ
ಸಂಗೀತಕೆ ಕಳಶಪ್ರಾಯರು
ರಾಮನಲ್ಲೇ ಲೀನರಾದರು

- ಕೋಮಲ ವಿ. ಕುಮಾರ್, ದಾವಣಗೆರೆ.

# 16.5 ಲಕ್ಷ ಕೋಟಿ ರೂ. ಕೃಷಿ ಸಾಲ

**(1ನೇ ಪುಟದಿಂದ)** ಹೇಳಿದ್ದಾರೆ.

ರೈತರ ಆದಾಯ ದುಪ್ಪಟ್ಟುಗೊಳಿಸುವ ಸಂಕಲ್ಪ ಹಾಗೂ ಕೃಷಿಗೆ ಬಲಿಷ್ಠ ಮೂಲಭೂತ ಸೌಲಭ್ಯವನ್ನು ಒದಗಿಸುವ ಬದ್ಧತೆಯನ್ನು ಈ ಬಜೆಟ್ ಬಲಗೊಳಿಸಲಿದೆ ಎಂದು ಸಚಿವೆ ತಿಳಿಸಿದ್ದಾರೆ.

ನಮ್ಮ ರೈತರಿಗೆ ಸಮರ್ಪಕ ಸಾಲ ಒದಗಿಸಲು ಕೃಷಿ ಸಾಲದ ಗುರಿಯನ್ನು 16.5 ಲಕ್ಷ ಕೋಟಿ ರೂ.ಗಳಿಗೆ ವಿಸ್ತರಿಸಲಾಗಿದೆ. ಪಶು ಸಂಗೋಪನೆ, ಹೈನುಗಾರಿಕೆ ಹಾಗೂ ಮೀನುಗಾರಿಕೆಗೆ ಹೆಚ್ಚಿನ ಸಾಲ ಒದಗಿಸಲಾಗುವುದು ಎಂದವರು ಹೇಳಿದ್ದಾರೆ.

ಕೃಷಿ ಮೂಲಭೂತ ಸೌಲಭ್ಯ ಸುಧಾರಿಸುವ ಮೂಲಕ ರೈತರ ಆದಾಯ ಹೆಚ್ಚಿಸುವ ಗುರಿ ಹೊಂದಿರುವುದಾಗಿ ಹೇಳಿರುವ ಸಚಿವೆ ಸೀತಾರಾಮನ್, ಶೇ.2.5ರಿಂದ ಶೇ.100ರವರೆಗೆ ಕೆಲ ಸರಕುಗಳ ಮೇಲೆ ಕೃಷಿ ಮೂಲಭೂತ ಸೌಲಭ್ಯ ಹಾಗೂ ಅಭಿವೃದ್ಧಿ ಸೆಸ್ (ಎ.ಐ.ಡಿ.ಸಿ.) ವಿಧಿಸುವುದಾಗಿ ತಿಳಿಸಿದ್ದಾರೆ. ಸರ್ಕಾರ ಕಳೆದ ವರ್ಷ ಕಟಾವಿನ ನಂತರದ ಮೂಲಭೂತ ಸೌಲಭ್ಯಗಳಿಗಾಗಿ 1 ಲಕ್ಷ ಕೋಟಿ ರೂ.ಗಳ ಕೃಷಿ ಮೂಲಭೂತ ಸೌಲಭ್ಯ ನಿಧಿ ಸ್ಥಾಪಿಸುವುದಾಗಿ ತಿಳಿಸಿತ್ತು.

ಈ ವರ್ಷ ಸೆಸ್ ವಿಧಿಸುವ ಜೊತೆಗೆ ಎ.ಪಿ.ಎಂ.ಸಿ.ಗಳಿಗೆ ಸೌಲಭ್ಯ ಹೆಚ್ಚಿಸಲು ಕೃಷಿ ಮೂಲಭೂತ ಸೌಲಭ್ಯ ನಿಧಿ ಮೂಲಕ ನೆರವು ನೀಡಲಾಗುವುದು ಎಂದು ಸೀತಾರಾಮನ್ ಹೇಳಿದ್ದಾರೆ.

ಗ್ರಾಮೀಣ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಧಿಯನ್ನು ಈಗಿರುವ 30 ಸಾವಿರ ಕೋಟಿ ರೂ.ಗಳಿಂದ 40 ಸಾವಿರ ಕೋಟಿ ರೂ.ಗಳಿಗೆ ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ. ಸಣ್ಣ ನೀರಾವರಿ ನಿಧಿಯನ್ನು ಈಗಿರುವ 5 ಸಾವಿರ ಕೋಟಿ ರೂ.ಗಳಿಂದ 10 ಸಾವಿರ ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು. ನಬಾರ್ಡ್ ಮೂಲಕ ಈ ನಿಧಿ ನೀಡಲಾಗುವುದು.

ಕೃಷಿಯಲ್ಲಿ ಮೌಲ್ಯವರ್ಧನೆ ಹಾಗೂ ಕೃಷಿ ಉತ್ಪನ್ನಗಳ ರಫ್ತಿಗಾಗಿ ಆಪರೇಷನ್ ಗ್ರೀನ್ ಸ್ಕೀಮ್ ರೂಪಿಸಲಾಗಿದೆ. ಪ್ರಸಕ್ತ ಇದು ಟೊಮ್ಯಾಟೋ, ಈರುಳ್ಳಿ ಹಾಗೂ ಆಲೂಗಡ್ಡೆಗಳಿಗೆ ಅನ್ವಯವಾಗುತ್ತಿದೆ. ಇದನ್ನು 22 ಹಣ್ಣು - ತರಕಾರಿಗಳಿಗೆ ವಿಸ್ತರಿಸಲು ಪ್ರಸ್ತಾಪಿಸಲಾಗಿದೆ.ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆ ಅಗಾಧ ಬದಲಾವಣೆ ಕಂಡಿದೆ. ಇದರಿಂದಾಗಿ ಎಲ್ಲಾ ಇಳುವರಿಗಳಿಗೆ ವೆಚ್ಚದ ಕನಿಷ್ಠ 1.5 ಪಟ್ಟು ಆದಾಯ ಸಿಗುತ್ತಿದೆ ಎಂದವರು ತಿಳಿಸಿದ್ದಾರೆ.

ಕೃಷಿ ಇಳುವರಿ ಖರೀದಿ ಸಹ ವೇಗವಾಗಿ ಸಾಗಿದೆ. ಇದರಿಂದ ರೈತರಿಗೆ ಮಾಡುವ ಪಾವತಿ 2013-14ರ ನಂತರ ಗಣನೀಯವಾಗಿ ಹೆಚ್ಚಾಗಿದೆ ಎಂದು ಸಚಿವೆ ತಿಳಿಸಿದರು.

2013-14ರಲ್ಲಿ ಕನಿಷ್ಠ ಬೆಂಬಲ ಬೆಲೆಯಲ್ಲಿ ಮಾಡಲಾದ ಖರೀದಿ 33,874 ಕೋಟಿ ರೂ. ಆಗಿತ್ತು. ಇದು 2019-20ರಲ್ಲಿ 62,802 ಕೋಟಿ ರೂ.ಗಳಿಗೆ ಹೆಚ್ಚಾಗಿದೆ ಎಂದವರು ತಿಳಿಸಿದ್ದಾರೆ.

# ನಗರದಲ್ಲಿ ದಾಳಿ : ನಾಲ್ವರು ಬಾಲಕಾರ್ಮಿಕರ ಪತ್ತೆ

ದಾವಣಗೆರೆ, ಫೆ.1- ನಗರದಲ್ಲಿ ದುಡಿಯುವ ಮಕ್ಕಳನ್ನು ಪತ್ತೆ ಹಚ್ಚಲು ಕಾರ್ಮಿಕ ಇಲಾಖೆ ಸಹಯೋಗದ ತಂಡಗಳು ಮೊನ್ನೆ ನಗರದ ವಿವಿಧ ಅಂಗಡಿ, ಹೋಟೆಲ್ ಗಳ ಮೇಲೆ ದಾಳಿ ಮಾಡಿ ದುಡಿಯುವ 4 ಗಂಡು ಮಕ್ಕಳನ್ನು ಪತ್ತೆ ಹಚ್ಚಿ ಕೆಲಸದಿಂದ ಬಿಡುಗಡೆ ಮಾಡಿವೆ.

ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ ಮತ್ತು ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಸ್ಥೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ 2 ತಂಡಗಳು ಕಾರ್ಯ ಕೈಗೊಂಡು, ಮಕ್ಕಳನ್ನು ಮುಂದಿನ ಕ್ರಮಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ನೀಡಲಾಯಿತು.

ಕಾರ್ಮಿಕ ಅಧಿಕಾರಿ ಇಬ್ರಾಹಿಂ ಸಾಬ್, ಕಾರ್ಮಿಕ ನಿರೀಕ್ಷಕರು, 123 ನೇ ವೃತ್ತ ರಾಜಶೇಖರ್ ಹಿರೇಮಠ, ಆರ್. ನಾಗೇಶ್, ಟಿ. ರಾಜಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಕವಿತಾಕುಮಾರಿ, ಎಸ್‌ಸಿಎಲ್‌ಪಿ ಯೋಜನಾ ನಿರ್ದೇಶಕ ಇ.ಎನ್. ಪ್ರಸನ್ನ ಹಾಗೂ ಪೊಲೀಸ್ ಸಿಬ್ಬಂದಿ ತಂಡದಲ್ಲಿದ್ದರು.

ಮಕ್ಕಳನ್ನು ಮುಂದಿನ ಕ್ರಮಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ನೀಡಲಾಯಿತು. 14 ರಿಂದ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಅಪಾಯಕಾರಿ ಉದ್ಯೋಗಗಳಲ್ಲಿ ನೇಮಕ ಮಾಡಿಕೊಂಡಿದ್ದು ಕಂಡುಬಂದಿಲ್ಲ, ಮಕ್ಕಳ ಸಹಾಯವಾಣಿ-1098, ಇಲಾಖೆ ದೂರವಾಣಿ ಸಂಖ್ಯೆ: 08192-237332, 230094 ಸಂಪರ್ಕಿಸುವುದು.

# ಜಾತ್ರೆಗೆ ಸರ್ಕಾರದಿಂದ 2 ಕೋಟಿ ರೂ.ಬಿಡುಗಡೆ



**(1ನೇ ಪುಟದಿಂದ)** ಜಾಗ ಹಾಗೂ ಅಡುಗೆ ಪದಾರ್ಥಗಳನ್ನು ಪರೀಕ್ಷೆ ಮಾಡಿಸಿ ಜನರಿಗೆ ಊಟ ನೀಡಬೇಕೆಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೂಚಿಸಿದರು.

ಜಾತ್ರೆಯ 8-10 ಸ್ಥಳಗಳಲ್ಲಿ ಎರಡು ದಿನವೂ ಥರ್ಮಲ್ ಸ್ಕ್ಯಾನಿಂಗ್ ಮತ್ತು 5 ಕಡೆ ಸ್ಯಾನಿಟೈಸರ್ ಇಡುವ ವ್ಯವಸ್ಥೆ ಆಗಬೇಕು ಜಾತ್ರೆಗೆ ಬರುವವರು ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ನೋಡಿಕೊಳ್ಳಬೇಕು. ಎಲ್ಲಿಯೂ ನೂಕು ನುಗ್ಗಲು ಆಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಿ ಎಂದು ಪೊಲೀಸ್ ಇಲಾಖೆಗೆ ಸೂಚಿಸಿದರು.

ಎಸ್ಪಿ ಹನುಮಂತರಾಯ ಮಾತನಾಡಿ, ಜಾತ್ರೆಯಲ್ಲಿ ಬಹಳ ಮುಖ್ಯವಾಗಿ ಪಾರ್ಕಿಂಗ್ ಮತ್ತು ಜನರಿಗೆ ತೊಂದರೆ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ. ವೇದಿಕೆಯಲ್ಲಿ ಶಿಸ್ತು ಕಾಪಾಡಬೇಕು, ಅನಾವಶ್ಯಕ ವಾಹನಗಳನ್ನು ಒಳಗಡೆ ಬಿಡುವುದಿಲ್ಲ, ಊಟದ ಸ್ಥಳಗಳಲ್ಲಿ ನೂಕು ನುಗ್ಗಲು ಆಗದಂತೆ ಎಚ್ಚರ ವಹಿಸುತ್ತೇವೆ ಜಾತ್ರಾ ಸಮಿತಿಯವರು ನಮ್ಮ ಜೊತೆ ಕೈ ಜೋಡಿಸ ಬೇಕೆಂದರು.

ಜಿ.ಪ ಸಿಇಓ ಪದ್ಮ ಬಸವಂತಪ್ಪ ಮಾತನಾಡಿ, ಎಲ್ಲಾ ಇಲಾಖೆಗಳಲ್ಲಿ ಸಿಗುವ ಸೌಲಭ್ಯಗಳ ಬಗ್ಗೆ ಜನರಿಗೆ ಮಾಹಿತಿ ನೀಡುವ ಸ್ಟಾಲ್‌ಗಳನ್ನು ಹಾಕಲಾಗುವುದು. ಕುಡಿಯುವ ನೀರಿನ ತೊಂದರೆ ಆಗದಂತೆ ಗಮನ ಹರಿಸುತ್ತೇವೆ, ಆರೋಗ್ಯ ಇಲಾಖೆಯವರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಯೇ ಇದ್ದು, ಕೋವಿಡ್ ನಿಯಮ ಪಾಲಿಸುವಂತೆ ಜನರಿಗೆ ತಿಳಿಸಬೇಕೆಂದುರು.

ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಕಳೆದ 2 ಜಾತ್ರೆಗಳು ಯಶಸ್ವಿಯಾಗಿಲು ಜಿಲ್ಲಾಡಳಿತದ ಶ್ರಮ ಬಹಳ ಇದೆ. ಈ ವರ್ಷ ಕೋವಿಡ್ ಇರುವ ಕಾರಣ ಹೆಚ್ಚಿನ ನಿಗಾ ವಹಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಜಾತ್ರೆಯ ಉದ್ದೇಶದ ಜೊತೆಗೆ ಆರೋಗ್ಯವೂ ಬಹಳ ಮುಖ್ಯವಾಗಿದೆ. ಜಾತ್ರೆಗೆ ಸರ್ಕಾರ 2 ಕೋಟಿ ರೂ. ಅನುದಾನ ನೀಡಿದೆ, ಎಸ್ಟಿ ಮೀಸಲಾತಿ ಹೆಚ್ಚಳ ಆಗುವುದು ಖಚಿತ, ಈ ಬಗ್ಗೆ ತಾಳ್ಮೆ ಇರಲಿ ಎಂದು ಎಸ್.ವಿ. ರಾಮಚಂದ್ರ ಅವರು ಸಮಾಜಕ್ಕೆ ಮನವಿ ಮಾಡಿದರು.

ಅರಣ್ಯ ಅಭಿವೃದ್ದಿ ನಿಗಮದ ಮಾಜಿ ಅಧ್ಯಕ್ಷ ಜಿ. ಈಶ್ವರ್, ಕಾರ್ಮಿಕ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ ಅವರು ಮಾತನಾಡಿದರು. ಸಭೆಯ ಸಾನಿಧ್ಯ ವಹಿಸಿದ್ದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿದರು. ಶಾಸಕ ಎಸ್.ರಾಮಪ್ಪ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿ.ಪಂ ಮಾಜಿ ಅಧ್ಯಕ್ಷ ಡಾ.ವೈ. ರಾಮಪ್ಪ ಮಾತನಾಡಿದರು.

'ವಾಲ್ಮೀಕಿ ವಿಜಯ' ಸ್ಮರಣ ಸಂಪುಟದ ಸಂಪಾದಕ ಡಾ. ಎ.ಬಿ. ರಾಮಚಂದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಠದ ಆಡಳಿತಾಧಿಕಾರಿ ಜಿ.ಓಬಳಪ್ಪ, ಜಿ.ಪಂ. ಮಾಜಿ ಸದಸ್ಯರಾದ ಎಂ.ನಾಗೇಂದ್ರಪ್ಪ, ತ್ಯಾವಣಿಗೆ ಗೋವಿಂದ ಸ್ವಾಮಿ, ಕೆ.ಪಿ. ಪಾಲಯ್ಯ, ಮಠದ ಧರ್ಮದರ್ಶಿಗಳಾದ ಹರ್ತಿಕೋಟೆ ವೀರೇಂದ್ರ ಸಿಂಹ, ನಲವಾಗಲು ನಾಗರಾಜಪ್ಪ, ಕೆ.ಬಿ. ಮಂಜುನಾಥ್, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ಜಿ.ಪಂ. ಉಪ ಕಾರ್ಯದರ್ಶಿ ಆನಂದ್, ಡಿವೈಎಸ್ಪಿ ನರಸಿಂಹ ತಾಮ್ರಧ್ವಜ್, ಡಿಹೆಚ್ಓ ಡಾ|| ನಾಗರಾಜ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ವಿಜಯ್ ಕುಮಾರ್, ಪಿಡಬ್ಲ್ಯೂಡಿ ಇಇ ಮಲ್ಲಿಕಾರ್ಜುನ್, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಲಕ್ಷ್ಮಿ ಕಾಂತ್, ಆರ್‌ಟಿಓ ಶ್ರೀಧರ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ತಾ.ಪಂ ಇಓ ಗಂಗಾಧರಪ್ಪ, ಟಿಹೆಚ್ ಓ ಡಾ.ಚಂದ್ರಮೋಹನ್, ಸಿಪಿಐ ಸತೀಶ್, ಪಿಎಸ್‌ಐ ರವಿಕುಮಾರ್, ಕೆಪಿಟಿಸಿಎಲ್ ಎಇಇ ಜಯಪ್ಪ, ಬೆಸ್ಕಾಂ ಇಇ ವಿಜಯಲಕ್ಷ್ಮಿ, ಡಿಸಿಸಿ ಬ್ಯಾಂಕಿನ ತಾವರ್ಯನಾಯ್ಕ್, ಸಮಾಜದ ಮುಖಂಡರಾದ ಜಿಗಳಿ ಆನಂದಪ್ಪ, ಕೊಕ್ಕನೂರಿನ ಕೆ.ಹೆಚ್. ಕೊಟ್ರಪ್ಪ, ಡಿ. ಸೋಮಶೇಖರ್, ರಾಜನಹಳ್ಳಿ ಭೀಮಣ್ಣ, ಮಾರುತಿ ಬೇಡರ್, ಭಾನುವಳ್ಳಿ ಪುಟ್ಟಪ್ಪ, ಧೂಳೆಹೊಳೆ ವಾಮಣ್ಣ, ವಾಸನ ಮಹಾಂತೇಶ್, ರಾಘು ದೊಡ್ಡಮನಿ, ತಾ.ಪ್ರಾ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಬಿ. ಚಂದ್ರಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪಾರ್ವತಿ, ಜಿಲ್ಲಾ ವಾಲ್ಮೀಕಿ ಮಹಿಳಾ ಸಮಾಜದ ವಿಜಯಶ್ರೀ ಮಹೇಂದ್ರಕುಮಾರ್, ಗೌರಮ್ಮ ಮಂಜುನಾಥ್ ಸೇರಿದಂತೆ ರಾಜನಹಳ್ಳಿ ಗ್ರಾ.ಪಂ. ಸದಸ್ಯರು, ಶಾಮಿಯಾನ ಮಾಲೀಕ ಕೆಟಿಜೆ ನಗರದ ಲಕ್ಷ್ಮಣ ಮತ್ತಿತರರು ಭಾಗವಹಿಸಿದ್ದರು.

ಜಾತ್ರಾ ಸಮಿತಿ ಸಂಚಾಲಕ ಹೊದಿಗೆರೆ ರಮೇಶ್ ಸ್ವಾಗತಿಸಿದರು. ಪತ್ರಕರ್ತ ಜಿಗಳಿ ಪ್ರಕಾಶ್ ವಂದಿಸಿದರು.

**ಹಂದರಕಂಬ ಪೂಜೆ:** ಪೂರ್ವಭಾವಿ ಸಭೆಗೆ ಮುನ್ನ ಜಾತ್ರೆಯ ಮಹಾಮಂಟಪ ನಿರ್ಮಾಣಕ್ಕೆ ಹಂದರ ಕಂಬ ಪೂಜೆ ಮಾಡಲಾಯಿತು, ಮಹಾಮಂಟಪಕ್ಕೆ ಲಿಂಗೈಕ್ಯ ಜಗದ್ಗುರು ಶ್ರೀ ಪುಣ್ಯಾನಂದ ಪುರಿ ಸ್ವಾಮೀಜಿ ಹೆಸರನ್ನು ಮತ್ತು ವೇದಿಕೆಗೆ ಮಾಜಿ ಸಚಿವ ಚಳ್ಳಕೆರೆ ತಿಪ್ಪೇಸ್ವಾಮಿ ಅವರ ಹೆಸರನ್ನು ನಾಮಕರಣ ಮಾಡಲಾಗಿದೆ.

## ದಿನದ ಚುಟುಕು

ಕರುಬುವವರಿಗೆ ಚಿಂತೆ ನೂರು
ಇರದವವರಿಗೆ ಇರುವುದಿಲ್ಲ ಚೂರು
ಬದುಕಲು ಬಿಡಿ ಅವರನ್ನವರ ಪಾಡಿಗೆ
ಬಿಡಿದಿರೆ ಅಂಟುವುದು ಪಾಪ ನಿಮ್ಮ ಬೆನ್ನಿಗೇ!

- ವೀಣಾ ಕೃಷ್ಣಮೂರ್ತಿ

# ಟ್ಯಾಬ್ಲೆಟ್ ಮೂಲಕ ಬಜೆಟ್

**(1ನೇ ಪುಟದಿಂದ)** ಮೂಲಕ ಬಜೆಟ್ ಅನ್ನು ಸದನಕ್ಕೆ ತರುವ ಪದ್ಧತಿಯನ್ನು ಸೀತಾರಾಮನ್ ಮುಂದುವರೆಸಿದರು. ಈ ಬಾರಿ ಬಜೆಟ್ ಕಡತದ ಬದಲು ಟ್ಯಾಬ್‌ನಲ್ಲಿ ತಂದಿದ್ದರು.

ಆಡಳಿತಾರೂಢರ ಭಾಗದಲ್ಲಿ ಎರಡನೇ ಸಾಲಿನಲ್ಲಿ ನಿಂತಿದ್ದ ಸೀತಾರಾಮನ್, ತಮ್ಮ ಬಜೆಟ್ ಮಂಡನೆ ವೇಳೆ ಹಲವು ಬಾರಿ ನೀರು ಕುಡಿದು ಸುಧಾರಿಸಿಕೊಂಡರು. ಇದು ಸೀತಾರಾಮನ್ ಅವರ ಸಂಕ್ಷಿಪ್ತ ಬಜೆಟ್ ಆಗಿದೆ. ಜುಲೈ 2019ರಲ್ಲಿ ಅವರು ಮಂಡಿಸಿದ ಬಜೆಟ್ 137 ನಿಮಿಷಗಳದ್ದಾಗಿತ್ತು. 2020ರ ಬಜೆಟ್ 160 ನಿಮಿಷಗಳದ್ದಾಗಿತ್ತು ಹಾಗೂ ಅಸ್ವಸ್ಥರಾಗಿ ಅವರು ಬಜೆಟ್ ಸಂಕ್ಷಿಪ್ತಗೊಳಿಸಿದ್ದರು.

ಕೊರೊನಾ ಹಿನ್ನೆಲೆಯಲ್ಲಿ ಸಮರ್ಪಕ ಸಾಮಾಜಿಕ ಅಂತರ ಕಾಯ್ದುಕೊಳ್ಳಲಾಗಿತ್ತು. ಸತತ 3ನೇ ಬಾರಿ ಬಜೆಟ್ ಮಂಡಿಸಿದ ಸೀತಾರಾಮನ್, ರವೀಂದ್ರನಾಥ ಟ್ಯಾಗೋರ್ ಹೇಳಿಕೆಗಳು ಹಾಗೂ ತಮಿಳಿನ ತಿರುಕ್ಕುರಳ್ ಉಕ್ತಿಗಳನ್ನು ಪ್ರಸ್ತಾಪಿಸಿದರು. ಬಜೆಟ್ ಮಂಡನೆಗೂ ಮುಂಚೆ ಶಿರೋಮಣಿ ಅಕಾಲಿ ದಳದ ಹರ್‌ಸಿಮ್ರಾಟ್ ಕೌರ್ ಬಾದಲ್ ಹಾಗೂ ಸುಖಬೀರ್ ಸಿಂಗ್ ಬಾದಲ್, ಆರ್‌ಎಲ್‌ಪಿಯ ಹನುಮಾನ್ ಬೇನಿವಾಲ್ ಅವರು ರೈತರು ಮೂರು ಕೃಷಿ ಕಾಯ್ದೆಗಳ ವಿರೋಧಿಸುತ್ತಿರುವುದನ್ನು ಪ್ರಸ್ತಾಪಿಸಿದರು.

ಭಿತ್ತಿಪತ್ರಗಳನ್ನು ಹಿಡಿದಿದ್ದ ಅವರು, ಕೇಂದ್ರ ಸರ್ಕಾರದ ಕರಾಳ ಕಾಯ್ದೆಗಳನ್ನು ವಾಪಸ್ ಪಡೆಯಲಿ ಎಂದು ಆಗ್ರಹಿಸಿದರು.

ಹಣಕಾಸು ಸಚಿವೆ ತಮ್ಮ ಭಾಷಣ ಆರಂಭಿಸಿದ ತಕ್ಷಣ ಅವರು ಸಭಾತ್ಯಾಗ ಮಾಡಿದರು.

# ಆರು ತಿಂಗಳಲ್ಲಿ ಹಕ್ಕುಪತ್ರ

**(1ನೇ ಪುಟದಿಂದ)** ಹಕ್ಕುಪತ್ರ ವಿತರಣೆ ಮಾಡಲಾಗುವುದು ಎಂದು ಹೇಳಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 600 ಚದರ ಅಡಿ, ನಗರಸಭೆ ವ್ಯಾಪ್ತಿಯಲ್ಲಿ 600 ಚದರ ಅಡಿ, ಪುರಸಭೆ, ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ 1200 ಚದರ ಅಡಿಗೆ ಮೀರದಂತೆ ಅಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಪುರಸಭೆ ಮತ್ತು ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ 1200 ಚದರ ಅಡಿಗಳಲ್ಲಿನ ನಿವೇಶನಕ್ಕೆ ಸಾಮಾನ್ಯ ವರ್ಗದವರಿಗೆ 3000 ರೂ., ಎಸ್ಸಿ-ಎಸ್ಟಿ ವರ್ಗದವರಿಗೆ 1200 ರೂ., ನಗರಸಭೆ ವ್ಯಾಪ್ತಿಯಲ್ಲಿನ 600 ಚದರ ಅಡಿ ನಿವೇಶನಕ್ಕೆ ಸಾಮಾನ್ಯ ವರ್ಗದವರಿಗೆ 4 ಸಾವಿರ, ಎಸ್ಸಿ-ಎಸ್ಟಿ ವರ್ಗದವರಿಗೆ 2000 ರೂ. ನಿಗದಿ ಮಾಡಲಾಗಿದೆ ಎಂದೂ ಸಚಿವ ಸೋಮಣ್ಣ ಹೇಳಿದ್ದಾರೆ.


**ಸೈಟ್‌ಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಉತ್ತರ, ವಿನಾಯಕ ಬಡಾವಣೆಯಲ್ಲಿ 40x50 ಪೂರ್ವ, ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, ಬನಶಂಕರಿ ಬಡಾವಣೆಯಲ್ಲಿ 40x70 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ಸಂಕೋಳ್ ಶಿವಪ್ಪ ಬಡಾವಣೆಯಲ್ಲಿ 30x40 ಉತ್ತರ, ಶಿವ ಪಾರ್ವತಿ ಬಡಾವಣೆಯಲ್ಲಿ 40x50 ದಕ್ಷಿಣ, ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ, 30x50 ಪಶ್ಚಿಮ
ಶಾಮನೂರು ಧನ್ಯಕುಮಾರ್
ಮೊ.97415 62589
ಸ್ವಾಮಿ ಏಜೆಂಟ್ ವಿದ್ಯಾನಗರ
ಮೊ.97421 44715

**ಬೇಕಾಗಿದ್ದಾರೆ**
ITI Mechanical Pass/ Fail ಆದವರು ಕೆಲಸಕ್ಕೆ ಬೇಕಾಗಿದ್ದಾರೆ
ಸಂಪರ್ಕಿಸಿ:
88619 45934

**ಸೈಟ್‌ಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹಮಂಡಳಿ KHB 30x50 ದಕ್ಷಿಣ (120 ಅಡಿ ರಸ್ತೆ ಹತ್ತಿರ), ರಶ್ಮಿ ಹಾಸ್ಟೆಲ್ ಹತ್ತಿರ 30x40, 30x40 ಅಕ್ಕ-ಪಕ್ಕ
ಮಂಜುನಾಥ, ರಿಯಲ್ ಎಸ್ಟೇಟ್ ಏಜೆಂಟ್
98444 91792

**ಕೆಲಸಕ್ಕೆ ಬೇಕಾಗಿದ್ದಾರೆ**
ಅಂಗಡಿಯಲ್ಲಿ ಅಕೌಂಟ್ಸ್ ನೋಡಿಕೊಳ್ಳಲು ಅನುಭವವುಳ್ಳ ಯುವಕ/ಯುವತಿ ಹಾಗೂ ಅಂಗಡಿಯಲ್ಲಿ ಕೆಲಸ ಮಾಡಲು ಚುರುಕಾದ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
ದ್ವಾರಕಾ ಟ್ರೇಡರ್ಸ್
ಎಂ.ಜಿ.ರಸ್ತೆ, ದಾವಣಗೆರೆ.
ಮೊ : 88618 17876

**House For Rent**
2 BHK, 1951/15, 2nd Main Swamy Vivekananda Extn, Davanagere.
88841 33184

**ಡ್ರೈವರ್ ಬೇಕಾಗಿದ್ದಾರೆ**
ಗೂಡ್ಸ್ ಟಾಟಾ ಏಸ್ ಡ್ರೈವರ್ ಬೇಕಾಗಿದ್ದಾರೆ.
95130 33363

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**Wanted Teacher**
Qualification : B.Ed (English) 01-B.PEd 01
SJM English Medium Public School, MCC A Block
97405 84669, 80734 81049

**ಮನೆ ಬಾಡಿಗೆಗೆ ಇದೆ**
# 42 5ನೇ ಕ್ರಾಸ್ 'ಎ' ಬ್ಲಾಕ್ ದೇವರಾಜ ಅರಸ್ ಬಡಾವಣೆ, ಹೊಸ ಕೋರ್ಟ್ ಹಿಂಭಾಗ ಎರಡನೇ ಫ್ಲೋರ್‌ನಲ್ಲಿ 2 ಬೆಡ್ ರೂಂ, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇದ್ದು, ಬಾಡಿಗೆಗೆ ಇದೆ.
79751 22289
82966 71420

**ಬೇಕಾಗಿದ್ದಾರೆ**
ಪಾನಿಪುರಿ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಅಥವಾ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ.99166-67888

**ಬೇಕಾಗಿದ್ದಾರೆ**
ದಾವಣಗೆರೆ ಸಮೀಪದ ತೋಟದಲ್ಲಿ ಕೆಲಸ ಮಾಡಲು ಮತ್ತು ಆಕಳು ನೋಡಿಕೊಳ್ಳಲು ಆಳು ಬೇಕಾಗಿದ್ದಾರೆ. ಮನೆ ಬಳಿ ಇದ್ದುಕೊಂಡೇ ಕೆಲಸ ಮಾಡಲು ಹುಡುಗ ಬೇಕಾಗಿದ್ದಾನೆ. ಸಂಪರ್ಕಿಸಿ:
7018588900 9538870257

**ಗೋಡೌನ್ ಬಾಡಿಗೆಗೆ ಇದೆ**
'ಡಿ' ಬ್ಲಾಕ್, ಜರೀಕಟ್ಟೆ ಸುರೇಶ್ ಅಂಗಡಿ ಪಕ್ಕ 50'x30'
ಸಂಪರ್ಕಿಸಿ
99011 20183

**ಬಾಡಿಗೆಗೆ ವಿಚಾರಿಸಿ**
ಹಾಸ್ಟೆಲ್‌ಗೆ ಸೌಲಭ್ಯವಿರುವ ಬಿಲ್ಡಿಂಗ್ ಸರಸ್ವತಿ ನಗರ ಕೆನರಾ ಬ್ಯಾಂಕ್ ಹತ್ತಿರ ಇದೆ. ವಿಚಾರಿಸಿ
ಮೊ: 81055 42689

**KVR Constructions WANTED/REQUIRED**
Qualifiction : MBA, BBM, M. Com, B.Com Experience : 3 to 4 years Experience in Marketing field, Male only. Contact
81232 70058 / 08192-263341
kvrconstructions007@gmail.com

**ಸೈಟು ಮಾರಾಟಕ್ಕಿದೆ**
25'x40' ಅಳತೆಯ ಜಯನಗರ ಚರ್ಚ್ ಹಿಂಭಾಗ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ:
97416 66288

**ಅಂಗಡಿ ಲೀಜ್/ಬಾಡಿಗೆಗೆ**
ಹಾಸಬಾವಿ ಸರ್ಕಲ್ ಹತ್ತಿರ ಅಂಗಡಿ ಲೀಜ್/ಬಾಡಿಗೆಗೆ ಇದೆ ವಿಚಾರಿಸಿ
89041 29928

**ಮನೆ ಬಾಡಿಗೆಗೆ/ಲೀಜಿಗೆ ಇದೆ**
ದಾವಣಗೆರೆ ಕುಂದವಾಡ ಸಮೀಪದ ಕೆ.ಹೆಚ್.ಬಿ. ಕಾಲೋನಿ (ತುಂಗಭದ್ರ ಬಡಾವಣೆ) 1ನೇ ಹಂತ ನ್ಯಾಯಾಧೀಶರ ಕ್ವಾಟ್ರರ್ಸ್ ಎದುರು, ಮನೆ ನಂ. 85, 3 ಬೆಡ್‌ರೂಂ ಅಟ್ಯಾಚ್ಡ್ ಬಾತ್ ರೂಂ ಇರುವ ಮನೆ ಬಾಡಿಗೆಗೆ / ಲೀಜಿಗೆ ಇದೆ.
94483 32328, 63604 64879

**ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಹರ್ಷ ಹಾರ್ಡ್‌ವೇರ್ ಅಂಡ್ ಪೇಂಟ್ಸ್,
ಅಶೋಕ ಚಿತ್ರ ಮಂದಿರ ಎದುರು, ರೈಲ್ವೆ ಗೇಟ್ ಹತ್ತಿರ, ದಾವಣಗೆರೆ.
08192-254787

**ಕೆಲಸಕ್ಕೆ ಬೇಕಾಗಿದ್ದಾರೆ**
18-30 ವಯಸ್ಸಿನ ಅನುಭವವುಳ್ಳ ಯುವಕರು ಅಂಗಡಿ ಕೆಲಸಕ್ಕೆ ತಕ್ಷಣವೇ ಬೇಕಾಗಿದ್ದಾರೆ.
ಸಂಪರ್ಕಿಸಿ : ಧನಲಕ್ಷ್ಮಿ ಸ್ಟೋರ್
ವಸಂತ ಟಾಕೀಸ್ ರಸ್ತೆ, ದಾವಣಗೆರೆ.
ಮೊ: 94495 69627

**ಮಾರಾಟಕ್ಕೆ**
ಸಿದ್ದ ಗಂಗಾ ಸ್ಕೂಲ್ (ಹಿಂದೆ) ಸೈಟ್-30×40, ಜೆಎಚ್ ಪಟೇಲ್ ಬಡಾವಣೆ ಸೈಟ್-40×60, ಸರಸ್ವತಿ ಬಡಾವಣೆ ಸೈಟ್-30×40, ರಶ್ಮಿ ಹಾಸ್ಟೆಲ್ (ಹಿಂದೆ) ಸೈಟ್-30×53, KHB ಸೈಟ್-30×40, ಬನಶ್ರೀ ಲೇಔಟ್ ಸೈಟ್ (ಶ್ಯಾಮನೂರು)30×40,
7899636597, 9916525828

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಶ್ರೀ ನಿಧಿ ಎಜುಕೇಷನಲ್ ಟ್ರಸ್ಟ್- ದಾವಣಗೆರೆ.**
ಪ್ರಿನ್ಸ್ ದೂರ ಶಿಕ್ಷಣ ಕಾಲೇಜ್
(Distance Education) (UGC, DEB, & AICTE Approved university)
SSLC, PUC, B.A, B.Com, B.Sc, B.C.A, M.A, M.Com, M.Sc, M.S,W, MBA, MCA, Diploma, B.E, LLB, LLM, Ph.D & all Courses
97408 51555, 97405 52555

**ಮನೆಗಳು ಬಾಡಿಗೆಗೆ ಇರುತ್ತವೆ**
ದಾವಣಗೆರೆ ಎಂಸಿಸಿ ಬಿ ಬ್ಲಾಕ್‌ನ ಕುವೆಂಪು ನಗರದಲ್ಲಿರುವ ಮನೆಗಳು (Apartment, Ist Floor & IInd Floorನಲ್ಲಿ) ಪೂರ್ವ ಮತ್ತು ಉತ್ತರ ದಿಕ್ಕುಗಳಿಗಿರುವ, ನೀರಿನ ಸೌಲಭ್ಯ ಹಾಗೂ ವಾಹನ ನಿಲುಗಡೆಗೆ ವ್ಯವಸ್ಥೆ ಇರುವ ಮನೆಗಳು ಬಾಡಿಗೆಗೆ ಇರುತ್ತವೆ.
90666 37770

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ವಾಸ್ತು ಮನೆ & ಶಾಪ್ ಬಾಡಿಗೆಗೆ**
ಶಾಪ್ ಮತ್ತು ಪೂರ್ವ ಮುಂಬಾಗಿಲಿನ ಗ್ರೌಂಡ್ ಫ್ಲೋರ್ ಮನೆ 2/3 ಬೆಡ್‌ರೂಂ, ಡೈನಿಂಗ್ ಹಾಲ್, ನೀರಿನ ಸೌಕರ್ಯ, ಪಾರ್ಕಿಂಗ್, ಮನೆ ಬಾಡಿಗೆಗೆ ಸಮೃದ್ಧಿ ನಿಲಯ # 408, 8ನೇ ಮುಖ್ಯ ರಸ್ತೆ, 8ನೇ ಅಡ್ಡ ರಸ್ತೆ, ಪಿ.ಜೆ. ಬಡಾವಣೆ, ಮೋದಿ ಕಾಂಪೌಂಡ್ ಹತ್ತಿರ
95386 41980, 93807 97651

**ವಾಣಿಜ್ಯೋಪಯೋಗಿ ಮನೆ ಬಾಡಿಗೆಗಿದೆ**
ದಾವಣಗೆರೆ ಹೃದಯ ಭಾಗದಲ್ಲಿರುವ ಪಿ.ಜೆ.ಬಡಾವಣೆಯಲ್ಲಿ ಕ್ಲಿನಿಕ್, ಆಫೀಸ್ ಅಥವಾ ಏಜೆನ್ಸಿ ಮಾಡಲು ಮನೆ ಬಾಡಿಗೆಗಿದೆ. ಸಂಪರ್ಕಿಸಿ :
9606075744

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು
ದಿ. 04.02.2021ರ ಗುರುವಾರ ಮತ್ತು 05.02.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಬೇಕಾಗಿದ್ದಾರೆ**
ಕೆಲಸ ಬೇಕಾ.com
Job consultancy
Be Educated & Be Professional
Any Degree, MSW, M.Sc, Diploma, B.E, M.A, ITI, B.Ed, PUC
96869 58555, 96869 49555

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95352 69849
87220 14318

**JOBS**
MCS ACADEMY
Training & Placement Cell
98444 92888

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

## ಜಜಮು ಕಾಲೇಜಿನಲ್ಲಿ ಲಸಿಕೆ ತಾಣಗಳ ಉದ್ಘಾಟನೆ



ದಾವಣಗೆರೆ, ಫೆ. 1- ಜಜಮು ಕಾಲೇಜಿನಲ್ಲಿ ಲಸಿಕೆ ತಾಣಗಳನ್ನು ಪ್ರಾಂಶುಪಾಲ ಡಾ.ಎಸ್.ಬಿ.ಮುರುಗೇಶ್ ಮತ್ತು ಬಾಪೂಜಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಕುಮಾರ್ ಹಾಗೂ ಇತರೆ ವಿಭಾಗದ ವೈದ್ಯರು ಉದ್ಘಾಟಿಸಿದರು. ಒಟ್ಟು 5 ಸ್ಥಳಗಳಲ್ಲಿ ಲಸಿಕಾ ಕಾರ್ಯನಿರ್ವಹಿಸುತ್ತಿವೆ. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಭೇಟಿ ನೀಡಿ ಕಾರ್ಯವಿಧಾನಗಳನ್ನು ಪರಿಶೀಲಿಸಿದರು.

## ಸ್ನಾತಕೋತ್ತರ ಪರೀಕ್ಷೆ : ಎಸ್ಸೆಸ್ ವೈದ್ಯಕೀಯ ಕಾಲೇಜಿಗೆ ರ‍್ಯಾಂಕ್



ದಾವಣಗೆರೆ, ಫೆ.1- ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಜೂನ್/ಜುಲೈ 2020 ರಲ್ಲಿ ನಡೆಸಿದ ಸ್ನಾತಕೋತ್ತರ ಪರೀಕ್ಷೆಗಳಲ್ಲಿ ನಗರದ ಎಸ್.ಎಸ್.ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿಗಳು 6 ರ‍್ಯಾಂಕ್‌ಗಳನ್ನು ಪಡೆದಿರುತ್ತಾರೆ. ಈ ಎಲ್ಲಾ ವಿದ್ಯಾರ್ಥಿಗಳನ್ನು ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪ, ಎಸ್.ಎಸ್ ವೈದ್ಯಕೀಯ ಮಹಾವಿದ್ಯಾಲಯದ ಛೇರ್ಮನ್ ಎಸ್.ಎಸ್. ಮಲ್ಲಿಕಾರ್ಜುನ್, ಪ್ರಾಂಶುಪಾಲ ಡಾ.ಬಿ.ಎಸ್. ಪ್ರಸಾದ್ ಅವರುಗಳು ಅಭಿನಂದಿಸಿದ್ದಾರೆ.

## ಮದ್ಯ ಮಾರಾಟಗಾರರ ಸಂಘದಿಂದ ಇಂದು ನಗರದಲ್ಲಿ ಧರಣಿ



ಮದ್ಯ ಮಾರಾಟಗಾರರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ದಾವಣಗೆರೆ ಜಿಲ್ಲಾ ಮದ್ಯ ಮಾರಾಟಗಾರರ ಸಂಘದಿಂದ ಇಂದು ಮಧ್ಯಾಹ್ನ 12 ರಿಂದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಸಾಂಕೇತಿಕ ಧರಣಿ ಹಮ್ಮಿಕೊಳ್ಳಲಾಗಿದೆ.

ಮದ್ಯ ಮಾರಾಟಗಾರರ ಸಮಸ್ಯೆಗಳನ್ನು ಬಗೆಹರಿಸುವಂತೆ ಮುಖ್ಯಮಂತ್ರಿಗಳಿಗೆ ಈಗಾಗಲೇ ಮನವಿ ಮಾಡಿದ್ದರೂ ಅವರು ಗಮನಹರಿಸಿಲ್ಲ. ಈ ಹಿನ್ನೆಲೆಯಲ್ಲಿ ಇಂದು ರಾಜ್ಯವ್ಯಾಪಿ ಸಾಂಕೇತಿಕವಾಗಿ ಧರಣಿ ನಡೆಸಲಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಎಂ.ಟಿ. ಸುಭಾಶ್‌ಚಂದ್ರ, ಪ್ರಧಾನ ಕಾರ್ಯದರ್ಶಿ ಜೆ. ಈಶ್ವರ್‌ಸಿಂಗ್ ಕವಿತಾಳ ತಿಳಿಸಿದ್ದಾರೆ.

# ಎಲ್ಲಾ ಕಟ್ಟುಪಾಡು, ಸೂತಕಗಳನ್ನು ಮಡಿ ಮಾಡುವ ಪುಣ್ಯದ ಕೆಲಸ ಮಡಿವಾಳ ಸಮಾಜದ್ದು

### ಶ್ರೀ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ಜಿ.ಪಂ ಅಧ್ಯಕ್ಷೆ ಶಾಂತಕುಮಾರಿ



ದಾವಣಗೆರೆ, ಫೆ.1- ಜಗತ್ತು ಇಷ್ಟೊಂದು ಮುದುವರೆದರೂ ಸಹ ಸಮಾಜದಲ್ಲಿ ಈಗಲೂ ಹಲವಾರು ಕಟ್ಟುಪಾಡುಗಳು ನಡೆದುಕೊಂಡು ಬಂದಿವೆ. ಅಂತಹ ಎಲ್ಲಾ ಕಟ್ಟುಪಾಡುಗಳನ್ನು, ಸೂತಕಗಳನ್ನು ಮಡಿ ಮಾಡುವ ಪುಣ್ಯದ ಕೆಲಸ ಮಡಿವಾಳ ಸಮುದಾಯಕ್ಕೆ ದೊರಕಿದೆ ಎಂದು ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಾದ ಶ್ರೀಮತಿ ಶಾಂತಕುಮಾರಿ ಹೇಳಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಮಡಿವಾಳ ಮಾಚಿದೇವ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಆಯೋಜಿಸಲಾಗಿದ್ದ ವಚನ ರಕ್ಷಕ ಶ್ರೀ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಎಲ್ಲಾ ಸಮಾಜಗಳ ಸೂತಕಗಳನ್ನು ತೊಳೆಯುವ ಜೊತೆಗೆ ಸಮಾಜದಲ್ಲಿನ ಮಡಿ ಮಾಡುವುದು ಮಾತ್ರವಲ್ಲದೆ, ಕೊಳಕು ಮನಸ್ಸುಗಳನ್ನು ತೊಳೆದು ಮಾಲಿನ್ಯ ರಹಿತವಾದ ಸಮಾಜ ನಿರ್ಮಿಸುವಲ್ಲಿ ಮಡಿವಾಳ ಸಮಾಜದ ಕೊಡುಗೆ ಇದೆ ಎಂದು ಸ್ಮರಿಸಿದರು. ಹೆಸರಿನಲ್ಲಿ ಮಡಿ ಇರುವ ಮಡಿವಾಳ ಸಮಾಜ ಶೈಕ್ಷಣಿಕವಾಗಿ ಮುಂದೆ ಬಂದಲ್ಲಿ ಸಮುದಾಯ ಮುಂದೆ ಬರಲು ಸಾಧ್ಯ. ಕಾರಣ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ತಾವು ಸ್ವಾವಲಂಬನೆ ಸಾಧಿಸುವ ಜೊತೆಗೆ ಸಮಾಜಕ್ಕೆ ಮಕ್ಕಳನ್ನು ಉತ್ತಮ ಕೊಡುಗೆಯನ್ನಾಗಿ ನೀಡಬೇಕೆಂದು ಕರೆ ನೀಡಿದರು.

ಪ್ರಭಾರ ಅಪರ ಜಿಲ್ಲಾಧಿಕಾರಿ ಶ್ರೀಮತಿ ಜಿ.ನಜ್ಮಾ ಮಾತನಾಡಿ, ಬಸವಣ್ಣನವರ ಆದರ್ಶ, ತತ್ವಗಳನ್ನು ಮೈಗೂಡಿಸಿಕೊಂಡು ವಚನ ಮತ್ತು ಸಾಹಿತ್ಯವನ್ನು ಓದುವ ಮೂಲಕ ಪರಿಪೂರ್ಣ ವ್ಯಕ್ತಿಗಳಾಗಬೇಕು. ಸಮಾಜದಲ್ಲಿನ ಅಪನಂಬಿಕೆಗಳನ್ನು ಹೋಗಲಾಡಿಸಬೇಕಿದೆ. ಇದಕ್ಕಾಗಿ ಶಿಕ್ಷಣ ಅಗತ್ಯ. ಮಾಚಿದೇವರ ತತ್ವಗಳ ಮೇಲೆ ನಡೆಯಬೇಕೆಂದರೆ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದರು.

ಸಮುದಾಯದ ಕಾಯಕ ಮಾಡುತ್ತಾ ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು. ಮಡಿವಾಳ ಸಮುದಾಯ ಎಲ್ಲಾ ಸಮುದಾಯಗಳ ಜೊತೆಗೆ ನಿಲ್ಲಬೇಕೆಂದರೆ ಶಿಕ್ಷಣ ಬೇಕು. ಸಮಾಜವನ್ನು ಬಲಿಷ್ಠವಾಗಿ ಕಟ್ಟಿ ಎಲ್ಲರೂ ಒಗಟ್ಟಾಗಿ ನಿಂತರೆ ಎಂತಹ ಸವಾಲುಗಳನ್ನಾದರೂ ಎದುರಿಸಲು ಸಾಧ್ಯ. ಕಾರಣ ಎಲ್ಲರೂ ಒಂದಾಗಿ ಒಗ್ಗಟ್ಟಿನ ಮಂತ್ರ ಪಠಿಸಬೇಕು. ಆ ಮೂಲಕ ಸಮಾಜಕ್ಕೂ, ದೇಶಕ್ಕೂ ಕೊಡುಗೆ ನೀಡಬೇಕೆಂದು ಹೇಳಿದರು.

ಸಮಾಜದ ಜಿಲ್ಲಾ ಕಾರ್ಯಾಧ್ಯಕ್ಷ ಹೆಚ್. ಜಿ.ಉಮೇಶ್ ಮಾತನಾಡಿ, ಕಳಂಕ ರಹಿತ ಶರಣರ ಬಟ್ಟೆಗಳನ್ನು ಮಡಿ ಮಾಡುವ ಮೂಲಕ 12ನೇ ಶತಮಾನದಲ್ಲಿ ಕಲ್ಮಶ ಮನಸ್ಸುಗಳನ್ನು ದೂರ ಇಟ್ಟು ಸಮಾಜದಲ್ಲಿನ ಅನಿಷ್ಟ ಕಟ್ಟುಪಾಡುಗಳನ್ನು ವಿರೋಧಿಸಿ, ಬಸವಣ್ಣನವರ ಶರಣರ ಗುಂಪಿನಲ್ಲಿ ಮುಂಚೂಣಿಯಲ್ಲಿದ್ದ ಮಹಾನ್ ಪ್ರಕಾಶಮಾನ ಶರಣ ಮಡಿವಾಳ ಮಾಚಿದೇವರು ಎಂದು ಹೇಳಿದರು.

ಜಿ.ಪಂ. ಉಪಾಧ್ಯಕ್ಷರಾದ ಸಾಕಮ್ಮ ಗಂಗಾಧರ ನಾಯ್ಕ, ಮಡಿವಾಳ ಮಾಚಿದೇವ ಜಿಲ್ಲಾ ಸಂಘದ ಜಿಲ್ಲಾಧ್ಯಕ್ಷ ಎಂ.ನಾಗೇಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಓಂಕಾರಪ್ಪ, ಉಪಾಧ್ಯಕ್ಷ ಡೈಮಂಡ್ ಮಂಜುನಾಥ್, ಪಿ.ಮಂಜುನಾಥ್, ವಿಜಯ ಕುಮಾರ್, ಖಜಾಂಚಿ ಸುರೇಶ್ ಕೋಗುಂಡೆ, ತಾಂತ್ರಿಕ ಸಲಹೆಗಾರರಾದ ಎಂ.ಎನ್.ನಾಗರಾಜ್, ಸಹ ಕಾರ್ಯದರ್ಶಿ ಆರ್.ಎನ್.ಧನಂಜಯ್, ನಿರ್ದೇಶಕರಾದ ಎಂ.ವೈ.ಸತೀಶ್, ರುದ್ರೇಶ್, ಗುಡ್ಡಪ್ಪ, ಹೆಚ್. ದುಗ್ಗಪ್ಪ, ರವಿಚಿಕ್ಕಣ್ಣ, ಅಜಯ್, ಪರಶುರಾಮ, ಕಿಶೋರ್ ಕುಮಾರ್, ರೇವಣಪ್ಪ, ನಾಗಪ್ಪ, ನಾಗಮ್ಮ, ಚಂದ್ರ ಕಲಾ, ಎಂ.ಕೆ.ಲಕ್ಷ್ಮಿ, ಸುಮಿತ್ರಾ, ರತ್ನಕ್ಕ, ಗಣೇಶ್ ಪೂಜಾರ್, ಶ್ರೀನಿವಾಸ್ ಪೂಜಾರ್, ಯಲ್ಲಪ್ಪ ಪೂಜಾರ್, ಅಶೋಕ್ ಪೂಜಾರ್, ಮಡಿಕಟ್ಟೆಯ ರವಿ, ಮಲ್ಲೇಶಪ್ಪ, ಫಕ್ಕೀರಪ್ಪ, ಲಕ್ಷ್ಮಣ್, ಹುಚ್ಚಪ್ಪ, ಕೋಟೆಪ್ಪ, ಮಡಿವಾಳಪ್ಪ, ಬಸವರಾಜ್ ಸೇರಿದಂತೆ ಹಲವಾರು ಮುಖಂಡರು ಕಾರ್ಯಕ್ರಮದಲ್ಲಿ ಇದ್ದರು.

ಇದೇ ಸಂದರ್ಭದಲ್ಲಿ ಬೆಳಗಾವಿಯ ವಿಶ್ವೇಶ್ವರಯ್ಯ ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ. ಪದವಿ ಪಡೆದ ಡಾ.ಗಣೇಶ್ ಪೂಜಾರ್ ಇವರನ್ನು ಸನ್ಮಾನಿಸಲಾಯಿತು.

# ಆತ್ಮ ನಿರ್ಭರವಲ್ಲ, ಆತ್ಮ ಬರ್ಬರ; ಆಯ-ವ್ಯಯವಲ್ಲ, ತೆರಿಗೆ ಏರಿಕೆ ಬಜೆಟ್

### ಜಿಲ್ಲಾ ಕಾಂಗ್ರೆಸ್ ಟೀಕೆ

ದಾವಣಗೆರೆ, ಫೆ.1- ಕೇಂದ್ರ ಸರ್ಕಾರದ 2021ನೇ ಸಾಲಿನ ಕೇಂದ್ರ ಬಜೆಟ್ ಅಲ್ಲ, ತೆರಿಗೆ ಹೆಚ್ಚಳಕ್ಕೆ ಸೀಮಿತವಾಗಿ ಜನರ ಯಾವುದೇ ನಿರೀಕ್ಷೆ ಇಲ್ಲದ ಆತ್ಮಬರ್ಬರ ಬಜೆಟ್ ಎಂದು ಜಿಲ್ಲಾ ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರುಗಳು, ಕೇಂದ್ರ ಸರ್ಕಾರ ದಿವಾಳಿ ಬಜೆಟ್ ಮಂಡಿಸಿದೆ. ಕೋವಿಡ್ ವೇಳೆ ಹಲವು ಕೈಗಾರಿಕೆಗಳು ಮುಚ್ಚಿಹೋಗಿದ್ದವು. ಈ ಕೈಗಾರಿಕೆಗಳನ್ನು ಪುನಾರಂಭಿಸಲು ಒತ್ತು ನೀಡದೇ ಯಂತ್ರೋಪಕರಣಗಳ ಮೇಲೆ ಕೃಷಿ ಸೆಸ್ ಹಾಕಲಾಗಿದೆ. ರೈತರ ಅಭಿವೃದ್ದಿಗೆ ಹೊಸ ಯೋಜನೆ ಪ್ರಕಟಿಸಿಲ್ಲ ಎಂದು ಟೀಕಿಸಿದ್ದಾರೆ.


ದೇಶದ ಇತಿಹಾಸದಲ್ಲಿ ಇಂತಹ ನಿರುತ್ಸಾಹದ ಬಜೆಟ್ ನೋಡಿಲ್ಲ. ಯಾವ ವರ್ಗಕ್ಕೂ ಸಹಾಯ ಮಾಡಿಲ್ಲ. ಕೊರೊನಾ ಲಸಿಕೆಗೆ 36 ಸಾವಿರ ಕೋಟಿ ರೂ. ಮೀಸಲಿಟ್ಟಿರುವುದಾಗಿ ಹೇಳಿದ್ದಾರೆ. ಮೊದಲು ಪ್ರಧಾನಿ, ಸಂಸದರು ವ್ಯಾಕ್ಸಿನ್ ಪಡೆಯಬೇಕಿತ್ತು. ಆದರೆ ಅವರು ವ್ಯಾಕ್ಸಿನ್ ಪಡೆಯದೆ ಕೆಳಹಂತದವರನ್ನು ಅದಕ್ಕೆ ನೂಕಿದ್ದಾರೆ. ಜನರ ವಿರುದ್ಧವಾದ ಬಜೆಟ್ ಇದಾಗಿದೆ. ಯುವಕರಿಗೆ ಉದ್ಯೋಗದ ಬಗ್ಗೆ ಏನೂ ಯೋಜನೆ ಇಲ್ಲ. ರೈತರ ರಕ್ಷಣೆಯ ಬಗ್ಗೆಯೂ ಏನೂ ಇಲ್ಲ, ಬೆಲೆ ನಿಯಂತ್ರಣ, ರಕ್ಷಣೆ ಬಗ್ಗೆ ತಿಳಿಸಿಲ್ಲ. ಸಣ್ಣಪುಟ್ಟ ರಸ್ತೆ ಬಗ್ಗೆ ಹೇಳಿದ್ದಾರಷ್ಟೆ. ರೈಲುಗಳನ್ನು ಮಾರಾಟಕ್ಕಿಟ್ಟಿದ್ದಾರೆ. ಪಬ್ಲಿಕ್ ಸೆಕ್ಟರ್ ಸಂಸ್ಥೆ ಮಾರಾಟಕ್ಕಿಟ್ಟಿದ್ದಾರೆ. ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗುತ್ತಿದೆ ಎಂದು ಅವರು ಟೀಕಿಸಿದರು.

ಹೆಚ್ಚು ತೆರಿಗೆಯನ್ನು ಕೇಂದ್ರ ಸಂಗ್ರಹ ಮಾಡುತ್ತಿದೆ. ಕೇಂದ್ರ ಘೋಷಿಸಿದ 20 ಲಕ್ಷ ಕೋಟಿ ಯಾರ‍್ಯಾರಿಗೆ ಸಿಕ್ಕಿದೆಯೋ ಎಂಬುದರ ಬಗ್ಗೆ ಮಾಹಿತಿಯಿಲ್ಲ. ಸಾಮಾನ್ಯ ಜನರ ಮೇಲೆ ದೊಡ್ಡ ಭಾರ ಹಾಕಿದ್ದಾರೆ. ಈ ಬಜೆಟ್‌ನಿಂದ ಯಾವ ಉತ್ಸಾಹವೂ ಇಲ್ಲ. ನಿರುದ್ಯೋಗ, ಕಳ್ಳ-ಕಾಕರಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮತ್ತೊಂದೆಡೆ ಕೇಂದ್ರ ಬಜೆಟ್ ಸಂಪೂರ್ಣ ನಿರಾಶಾದಾಯಕ ಬಜೆಟ್. ಯಾರ ಸಲಹೆಗಳನ್ನೂ ಪಡೆಯದ ವಿತ್ತಸಚಿವರಿಂದ ಏನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಯಾರಿಂದಲೂ ಸಲಹೆ ಪಡೆಯಲಿಲ್ಲ. ಇವತ್ತು ಕೇಂದ್ರ ಬಜೆಟ್ ಮಂಡನೆಯಾಗಿದೆ. ಆದರೆ ರಾಜ್ಯಕ್ಕೆ ಅವರ ಕೊಡುಗೆ ಏನೇನೂ ಇಲ್ಲ ಎಂದಿದ್ದಾರೆ.

ಮೆಟ್ರೋಗೆ 14 ಸಾವಿರ ಕೋಟಿ ರೂ. ಕೊಟ್ಟಿದ್ದಾರೆ. ಡೀಸೆಲ್, ಪೆಟ್ರೋಲ್ ಬೆಲೆ ಏರಿಕೆಯಾಗುತ್ತಲೇ ಇದೆ. ಇದು ಸಂಪೂರ್ಣ ನಿರಾಶಾದಾಯಕ ಬಜೆಟ್ ಆಗಿದೆ ಎಂದು ಕೇಂದ್ರ ಸರ್ಕಾರದ ಬಜೆಟ್ಟನ್ನು ಸಂಪೂರ್ಣವಾಗಿ ಟೀಕಿಸಿದ್ದಾರೆ.

# ಹರಪನಹಳ್ಳಿ, ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷರುಗಳಾಗಿ ಮತ್ತೂರು ಬಸವರಾಜ್, ಶಿವರಾಜ್



### ಎಂ.ಪಿ.ಲತಾ ಮಲ್ಲಿಕಾರ್ಜುನ್ ಬಣ ಮೇಲುಗೈ

ಹರಪನಹಳ್ಳಿ, ಫೆ.1 - ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ತೀವ್ರ ಕುತೂಹಲ ಮೂಡಿಸಿದ್ದ ಯುವ ಕಾಂಗ್ರೆಸ್ ಚುನಾವಣೆಯಲ್ಲಿ ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಅವರ ಬಣ ಮೇಲುಗೈ ಸಾಧಿಸಿದ್ದು, 460 ಮತಗಳನ್ನು ಪಡೆದುಕೊಂಡ ಯುವ ನಾಯಕ ಮತ್ತೂರು ಬಸವರಾಜ್ ಅವರು ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಜನವರಿ 31ರಂದು ಫಲಿತಾಂಶ ಪ್ರಕಟಗೊಂಡಿದೆ. ಮತ್ತೂರು ಬಸವರಾಜ್-460 ಮತ ಪಡೆದು ತಾಲ್ಲೂಕು ಅಧ್ಯಕ್ಷರಾಗಿ, ಮಕರಬ್ಬಿ ದಾದಪೀರ್-403 ಮತಗಳನ್ನು ಪಡೆದು ಉಪಾಧ್ಯಕ್ಷರಾಗಿ, ಪ್ರವೀಣಕುಮಾರ್-197 ಮತ ಪಡೆದು ಎಸ್ಸಿ-ಎಸ್ಟಿ ಮೀಸಲಾತಿಯಲ್ಲಿ ಉಪಾಧ್ಯಕ್ಷ ಸ್ಥಾನ, ಸಾಧಿಕ್-297 ಮತ, ಕೆ.ಮಂಜುನಾಥ-199, ತರುಣ್‌ಕುಮಾರ್-48 ಮತ, ಕರಿಬಸಪ್ಪ-19 ಮತ, ತಿಮ್ಮಲಾಪುರದ ಡಿ.ದೇವರಾಜ್-10 ಮತ, ಸಿ.ಮಂಜುನಾಥ-7 ಮತ ಪಡೆದುಕೊಂಡು 6 ಜನರು ಪ್ರಧಾನ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದಾರೆ. ಎಂ.ಪಿ. ವೀಣಾ ಬಣದಿಂದ ಹೆಚ್.ಶಿವರಾಜ್-135 ಮತ ಪಡೆದು ಚಿಗಟೇರಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ, ಸಾಸ್ವಿಹಳ್ಳಿ ನಾಗರಾಜ್-39 ಮತ ಪಡೆದು ಉಪಾಧ್ಯಕ್ಷರಾಗಿ, ಓ.ಪ್ರವೀಣ್-7 ಮತ ಪಡೆದು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಹರಪನಹಳ್ಳಿ-ಚಿಗಟೇರಿ ಬ್ಲಾಕ್ ಯುವ ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಯ ಹಿಂದೆ ತಾಲ್ಲೂಕಿನ ಕಾಂಗ್ರೆಸ್ ಪಕ್ಷದ ಬಣ ರಾಜಕಾರಣ ಎದ್ದು ಕಾಣುತ್ತಿತ್ತು. ತಮ್ಮ ತಮ್ಮ ಬೆಂಬಲಿಗ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ನಾಯಕರು ಇನ್ನಿಲ್ಲದ ಕಸರತ್ತು ನಡೆಸಿದ್ದರು.

## ತ್ಯಾಜ್ಯ ಭರಿತ ಖಾಲಿ ನಿವೇಶನಗಳ ಸ್ವಚ್ಚತೆ ಆರಂಭ





ದಾವಣಗೆರೆ, ಫೆ.1- ನಗರ ಪಾಲಿಕೆ ವತಿಯಿಂದ ಆಯುಕ್ತ ವಿಶ್ವನಾಥ ಮುದಜ್ಜಿ ಮಾರ್ಗದರ್ಶನದಲ್ಲಿ ನಗರದ ಪ್ರಮುಖ ಸಾರ್ವಜನಿಕ ಪ್ರದೇಶಗಳು ಮತ್ತು ಮುಖ್ಯ ರಸ್ತೆಗಳ ಇಕ್ಕೆಲಗಳಲ್ಲಿರುವ ತ್ಯಾಜ್ಯ ಭರಿತ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸುವ ಪ್ರಕ್ರಿಯೆ ಇಂದಿನಿಂದ ಆರಂಭಿಸಲಾಗಿದೆ.

ನಗರದ ಸ್ವಾಸ್ಥ್ಯ, ಸಾರ್ವಜನಿಕ ಸುರಕ್ಷತೆ ಮತ್ತು ಸೌಂದರ್ಯದ ಹಿತದೃಷ್ಟಿಯಿಂದ ಆರಂಭಿಸಲಾಗಿರುವ ಈ ಕಾರ್ಯಕ್ಕೆ ತಗುಲುವ ವೆಚ್ಚವನ್ನು ನಿವೇಶನದ ಮಾಲೀಕರಿಂದ ಆಸ್ತಿ ತೆರಿಗೆಯೊಂದಿಗೆ ದಂಡದ ರೂಪದಲ್ಲಿ ಶುಲ್ಕ ವಿಧಿಸಿ ವಸೂಲಿ ಮಾಡಲಾಗುತ್ತಿದೆ.

### ಮಾಲೀಕರಿಗೆ ದಂಡದ ರೂಪದಲ್ಲಿ ಶುಲ್ಕ ವಸೂಲಿ

ಪಾಲಿಕೆಯ ಆರೋಗ್ಯ ಮತ್ತು ಕಂದಾಯ ಶಾಖೆಯ ಅಧಿಕಾರಿಗಳು ಜಂಟಿಯಾಗಿ ಈ ದಿನ ಶಾಮನೂರು ರಸ್ತೆಯಲ್ಲಿ ಕಾರ್ಯಾಚರಣೆ ನಡೆಸಿದರು.

## ಪೋಲಿಯೋ

ಮಕ್ಕಳಿಗೆ ಪೋಲಿಯೋ ಹಾಕಿಸಿರಿ.
0-5 ವರ್ಷದ ಮಕ್ಕಳಿಗೆ ಮಾತ್ರರಿ
ಸಕಾಲಕ್ಕೆ ಚುಚ್ಚುಮದ್ದು
ಕೊಡಿಸಿರಿ, ರೋಗದಿಂದ
ಮಕ್ಕಳನ್ನು ದೂರವಿಡಿ
ಪೌಷ್ಠಿಕಾಂಶದ ಊಟ ಉಣಬಡಿಸಿ
ಮಕ್ಕಳಿಗೆ ಆರೋಗ್ಯವಂತ ಮಗು
ಎಂದು ಬಿರುದು ಪಡೆದುಕೊಳ್ಳಿ.
ಇಂದಿನ ಮಗುವೇ-ನಾಳಿನ ಪ್ರಜೆ
ಹೆಣ್ಣು ಮಗು ಎಂದು
ಭ್ರೂಣಹತ್ಯೆ ಮಾಡಬೇಡಿ
ಭಾಗ್ಯಲಕ್ಷ್ಮಿ ಸ್ಕೀಮ್ ಇದೆ
ಮಾಡಿಸಿ ಬಿಡಿ. ಸರ್ಕಾರದ
ಸವಲತ್ತು ಪಡೆದುಕೊಳ್ಳಿ
ಹೆಣ್ಣೊಂದು ಕಲಿತರೆ
ಶಾಲೆಯೊಂದು ತೆರೆದಂತೆ
ಎಂದು ಮನದಟ್ಟು ಮಾಡಿಕೊಳ್ಳಿ.

**- ಮಂಜುಳ ಎ.ಎಂ.**
ಅಂಗನವಾಡಿ. 99011 54405

## ಮಲಬಾರ್‌ನಿಂದ ಜೆಮ್‌ಸ್ಟೋನ್ ಜ್ಯೂವೆಲ್ಲರಿ ಉತ್ಸವ್



ದಾವಣಗೆರೆ, ಫೆ.1- ನಗರದ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಮಂಡಿಪೇಟೆ ಶೋ ರೂಂನಲ್ಲಿ ಜೆಮ್ ಸ್ಟೋನ್ ಜ್ಯುವೆಲ್ಲರಿ ಉತ್ಸವ ಆರಂಭವಾಗಿದ್ದು, ಇದೇ ದಿನಾಂಕ 18 ರವರೆಗೆ ನಡೆಯಲಿದೆ ಎಂದು ಸ್ಟೋರ್‌ಹೆಡ್ ಸರ್ಫರಾಜ್ ತಿಳಿಸಿದ್ದಾರೆ.

ಉತ್ಸವಕ್ಕೆ ಗ್ರಾಹಕರಾದ ರಾಜಶ್ರೀ ಪಾಟೀಲ್, ಲೀಲ, ರಾಜೇಶ್ವರಿ ಮತ್ತು ಕವಿತಾ ಚಾಲನೆ ನೀಡಿದರು. ಬೆಲೆ ಬಾಳುವ ಜೆಮ್‌ಸ್ಟೋನ್‌ಗಳು ಮತ್ತು ಅನ್‌ಕಟ್ ವಜ್ರಗಳೊಂದಿಗೆ ಸಬ್ ಬ್ರಾಂಡ್ ಸಂಗ್ರಹಗಳನ್ನು ಪ್ರದರ್ಶಿಸಲಾಗುತ್ತಿದೆ. ಪ್ರೀಶಿಯಾ, ಜೆಮ್ ಆಭರಣ ಮತ್ತು ಅನ್‌ಕಟ್ ವಜ್ರಾಭರಣಗಳನ್ನು ಉತ್ತಮ ಚಿನ್ನದಲ್ಲಿ ಹೆಣೆದ ಮತ್ತು ಅಮೂಲ್ಯವಾದ ಸ್ಟೋನ್ಸ್‌ಗಳೊಂದಿಗೆ ಕೂಡಿದೆ.

ಎಮರಾಲ್ಡ್, ರೂಬಿ, ಸಫೈರ್ ಮತ್ತು ಅತ್ಯಾಕರ್ಷಕ ಅನ್‌ಕಟ್ ಡೈಮಂಡ್‌ಗಳಂತಹ ಸ್ಟೋನ್‌ಗಳಿಂದ ತಯಾರಿಸಲಾದ ಅಭರಣಗಳು ಪ್ರದರ್ಶನದ ಭಾಗವಾಗಿವೆ ಎಂದು ತಿಳಿಸಿದ್ದಾರೆ.

## ಮಾಳನಾಯಕನಹಳ್ಳಿಯಲ್ಲಿ ಇಂದು ಜಾತ್ರೆ

ರಾಣೇಬೆನ್ನೂರು ತಾಲ್ಲೂಕಿನ ಮಾಳನಾಯಕನಹಳ್ಳಿ ಗ್ರಾಮದ ಗ್ರಾಮದೇವತೆ ಶ್ರೀ ದುರ್ಗಾಂಬಿಕಾದೇವಿ ಜಾತ್ರೆಯು ಇಂದು ನಡೆಯಲಿದೆ. ಇಂದು ಬೆಳಿಗ್ಗೆ 6 ಗಂಟೆಗೆ ದೇವಿಯು ಮಂದಿರಕ್ಕೆ ಪ್ರವೇಶ ಮಾಡುವಳು. 7 ಗಂಟೆಗೆ ದೇವಿಗೆ ಅಭಿಷೇಕಾಚರಣೆ ನಡೆಯುವವು. ಅಂದು ಮಧ್ಯಾಹ್ನ 3 ಗಂಟೆಗೆ ಗಂಡಾರತಿಯೊಂದಿಗೆ ದೇವಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗುವುದು.

## ಶಿರಮನಹಳ್ಳಿಯಲ್ಲಿ ಚೌಡೇಶ್ವರಿ ಜಾತ್ರೆ

ದೀಪಾರಾಧನೆ ಮತ್ತು ಶ್ರೀ ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವ ನಡೆಯಲಿದೆ. ಇಂದು ಪ್ರಾತಃಕಾಲ 5.30 ಕ್ಕೆ ದೇವರ ಸಮ್ಮುಖದಲ್ಲಿ ಗಂಗಾ ಪೂಜೆ, ಅಭಿಷೇಕ, ಪ್ರವಚನ ಮುಕ್ತಾಯ, ಮಂಗಳಾರತಿ ನಡೆಯಲಿದೆ. ಕಾರ್ಯಕ್ರಮದ ಅಂಗವಾಗಿ ಇಂದು ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ನಡೆಯಲಿದೆ.

# ಕುಂದುವಾಡ ಕೆರೆಯ ಅಭಿವೃದ್ಧಿಯಲ್ಲಿ ಯಾವುದು ಬೇಕು ? ಯಾವುದು ಬೇಡ ?

### ಓದುಗರ ಪತ್ರ

ಕೆರೆ ಅಭಿವೃದ್ಧಿಗೇನು ಬೇಕು? ದಾವಣಗೆರೆ ನಗರದ ಕುಂದುವಾಡ ಕೆರೆಯನ್ನು ಅಭಿವೃದ್ಧಿ ನೆಪದಲ್ಲಿ ಹಾಳುಗೆಡವಲಾಗುತ್ತಿದೆ.

✧ ಪಾದಚಾರಿ ದಾರಿ ಅಗಲೀಕರಣ ಬೇಡವೇ ಬೇಡ. ಅದು ಮೈಸೂರಿನ ಕುಕ್ಕರಳ್ಳಿ ಕೆರೆಯ ಏರಿಗಿಂತ ಎರಡು ಪಟ್ಟು ಹಗಲವಿದೆ.

✧ ಪ್ರಕೃತಿದತ್ತವಾದ ತಾಣವನ್ನು ಮೋಜಿನ ತಾಣವಾಗಿ ಮಾರ್ಪಡಿಸುವುದು ಬೇಡ.

✧ ಕೆರೆ ಏರಿಯನ್ನು ಹೊರಗಡೆಯಿಂದ ಗಟ್ಟಿ ಮಾಡಲಿ.

✧ ಕೆರೆಗೆ ಸೇರುತ್ತಿರುವ ಕೊಳಚೆ ನೀರಿನ ಗಟಾರವನ್ನು ಒಳಚರಂಡಿ ಯೋಜನೆಯಂತೆ ಮಾಡಿ ಗಲೀಜು ನೀರು ಹರಿಯುವುದನ್ನು ನಿಲ್ಲಿಸಲಿ.

✧ ಕುಡಿಯುವ ನೀರನ್ನು ಬಳಸಿ ಹುಲ್ಲು ಹಾಸು ನಿರ್ವಹಣೆ ಖಂಡಿತ ಬೇಕಿಲ್ಲ. ಅಮೇರಿಕಾದಂತಹ ಮುಂದುವರೆದ ದೇಶಗಳಲೆಲ್ಲ ಲಾನ್ ನಿರ್ವಹಣೆ ಅತ್ಯಂತ ದುಬಾರಿ ಹಾಗೂ ಪರಿಸರ ಮಾಲಿನ್ಯ ಎಂದು ನಿಷೇಧಿಸಲಾಗಿದೆ.

✧ ಈಗಾಗಲೇ ಬೆಳೆದಿರುವ ಮರ-ಗಿಡಗಳನ್ನು ಉಳಿಸಿಕೊಂಡು ಇನ್ನೂ ಹೆಚ್ಚಿನ ಮರಗಳಲ್ಲಿ ಒಂದನ್ನೂ ಕಡಿಯದೆ ಎಲ್ಲವನ್ನು ಉಳಿಸಿ, ಬೆಳೆಸಲು ಕ್ರಮ ಕೈಗೊಳ್ಳಲಿ.

✧ ವಾಯುವಿಹಾರದ ಜಾಗದಲ್ಲಿ ಸೈಕಲ್‌ಟ್ರ್ಯಾಕ್ ಬೇಡವೇ ಬೇಡ.

✧ ಕುಂದುವಾಡ ಕೆರೆಯ ಜಾಗವನ್ನು ಪ್ಲಾಸ್ಟಿಕ್ ಮುಕ್ತ ಪ್ರದೇಶವೆಂದು ಘೋಷಿಸಬೇಕು.

✧ ಇಲ್ಲಿ ಯಾವುದೇ ರೀತಿಯ ವಿದ್ಯುದೀಕರಣಕ್ಕೆ ಅವಕಾಶ ಕೊಡದೇ ಈಗಿರುವ ಪರಿಸರವನ್ನು ನಿರ್ವಹಣೆ ಮಾಡಬೇಕು.

✧ ಕುಂದುವಾಡ ಕೆರೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸೂಕ್ತ ತಜ್ಞರ ಸಮಿತಿ ರಚಿಸಬೇಕು.

ದಿನಾಂಕ 1-02-2021ರ ಪ್ರಜಾವಾಣಿ ಪತ್ರಿಕೆಯಲ್ಲಿನ ಕಾಂಗ್ರೆಸ್ ಹೇಳಿಕೆಯಂತೆ ಕೆರೆಯ ಎಲ್ಲಾ ಕಾಮಗಾರಿಗಳನ್ನು 3 ಕೋಟಿಯಲ್ಲಿಯೇ ಮುಗಿಸಬಹುದು. ಇದಕ್ಕಾಗಿ ವೃಥಾ ಹಣ ಖರ್ಚು ಸಲ್ಲದು. ಉಳಿದ 10 ಕೋಟಿ ಹಣವನ್ನು ಮುಂದಿನ ಮೇ, ಜೂನ್, ಜುಲೈ ತಿಂಗಳಲ್ಲಿ ಮನೆಗೆರಡು ಮರ ನೆಡುವ ಕಾನೂನನ್ನು ಜಾರಿಗೊಳಿಸುವಲ್ಲಿ ಮುಂದಾಗಬೇಕೆಂದು ಸವಿನಯ ವಿನಂತಿ.

**- ಗೋಪಾಲಗೌಡ, ಎಂ. ಸಿದ್ದಯ್ಯ, ವಕೀಲರು,**
**- ಶಿವನಕೆರೆ ಬಸವಲಿಂಗಪ್ಪ.**


## ಹೃತ್ಪೂರ್ವಕ ಅಭಿನಂದನೆಗಳು



ದಿ ದಾವಣಗೆರೆ ಕ್ಲಬ್‌ಗೆ ನೂತನವಾಗಿ ಆಯ್ಕೆಯಾದ

**ಶ್ರೀ ಮತ್ತಿಹಳ್ಳಿ ವೀರಣ್ಣ**
(ಅಧ್ಯಕ್ಷರು)

**ಶ್ರೀ ಎ.ಬಿ. ಚಂದ್ರಶೇಖರ್**
(ಉಪಾಧ್ಯಕ್ಷರು)

**ಶ್ರೀ ಎಸ್.ಜಿ ಉಳವಯ್ಯ**
(ಗೌರವ ಸಹ ಕಾರ್ಯದರ್ಶಿ)

ಇವರುಗಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.



**ಶ್ರೀ ಎನ್.ವಿಠ್ಠಲ್**
ರಿಯಲ್ ಎಸ್ಟೇಟ್ ಉದ್ಯಮಿ,
ದಾವಣಗೆರೆ.

## ಹೃತ್ಪೂರ್ವಕ ಕೃತಜ್ಞತೆಗಳು

ದಿನಾಂಕ 31.01.2021 ರಂದು ಭಾನುವಾರ ನಡೆದ ದಿ ದಾವಣಗೆರೆ ಕ್ಲಬ್ ಆಡಳಿತ ಮಂಡಳಿಯ ಚುನಾವಣೆಯಲ್ಲಿ ತಮ್ಮ ಅಮೂಲ್ಯವಾದ ಮತವನ್ನು ನಮ್ಮ ಗುಂಪಿನ ಅಭ್ಯರ್ಥಿಗಳಿಗೆ ನೀಡಿದ ಕ್ಲಬ್‌ನ ಸರ್ವ ಸದಸ್ಯರಿಗೂ, ಹಿರಿಯರಿಗೂ, ಸ್ನೇಹಿತರಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

- ◆ ಶಿವಕುಮಾರ ಯು.ಜಿ.
- ◆ ವೀರಣ್ಣ ಐ.ವಿ. (ಐನಳ್ಳಿ)
- ◆ ರವಿಶಂಕರ್ ಪಲ್ಲಾಗಟ್ಟೆ
- ◆ ನಾಗರಾಜ್ ಕೆ.ಬಿ.
- ◆ ಪುಟ್ಟಪ್ಪ ಕಾಶಿಪುರ
- ◆ ಅಭಿಷೇಕ್ ಬಿ.ಜೆ. (ಬೇತೂರು)
- ◆ ತಿಮ್ಮರಾಜ ಗುಪ್ತಾ ಎಸ್.ಕೆ.
- ◆ ನಾಗರಾಜ ಬಿ.ಜಿ. (ಬಸವಾಪಟ್ಟಣ)
- ◆ ಪಟೇಲ್ ಬಿ.ಪಿ. (ಕಾರಿಗನೂರು ಬಸವೇಶ)
- ◆ ಬೆಳ್ಳೂಡಿ ಸದಾನಂದ
- ◆ ಮಲ್ಲಿಕಾರ್ಜುನ ಬಾದಾಮಿ



## ಶಾಲೆಗಳಿಗೆ ಭೇಟಿ ನೀಡಿದ ತರಳಬಾಳು ಜಗದ್ಗುರುಗಳು

ಸಿರಿಗೆರೆ, ಫೆ.1- ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸೋಮವಾರ ತರಳಬಾಳು ವಿದ್ಯಾ ಸಂಸ್ಥೆಯ ಶಾಲೆಗಳಿಗೆ ಭೇಟಿ ನೀಡಿ ಶಾಲಾ ನಿರ್ವಹಣೆಯ ಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಿದರು.

ಮಕ್ಕಳಿಗೆ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಕೊರೊನಾ ಕಾರಣದಿಂದ ಕೈಗೊಂಡಿರುವ ಮಾರ್ಗಸೂಚಿಯ ನಿಯಮಗಳನ್ನು ಮನವರಿಕೆ ಮಾಡಿಕೊಡುವಂತೆ ಹೇಳಿದರು.

ಕೊರೊನಾ ಹಿನ್ನೆಲೆಯಲ್ಲಿ ಕಳೆದ ಒಂಭತ್ತು ತಿಂಗಳಿನಿಂದ ಸ್ಥಗಿತಗೊಂಡಿದ್ದ ಶಾಲಾ-ಕಾಲೇಜುಗಳು ಹೊಸ ವರ್ಷದ ದಿನವೇ ಆರಂಭವಾಗಿದ್ದು, ಮಕ್ಕಳು ಲವಲವಿಕೆಯಿಂದಲೇ ಶಾಲಾ-ಕಾಲೇಜುಗಳಿಗೆ ಆಗಮಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಶ್ರೀಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

# ಶೋಷಿತರಿಗೆ ಅಷ್ಟು ಸುಲಭವಾಗಿ ನ್ಯಾಯ ಸಿಗುವುದಿಲ್ಲ

## ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿನ ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ

ಮಲೇಬೆನ್ನೂರು, ಫೆ.1- ಯಾವುದೇ ಸರ್ಕಾರ ಇದ್ದರೂ ಶೋಷಿತರಿಗೆ ಅಷ್ಟು ಸುಲಭವಾಗಿ ನ್ಯಾಯ ಸಿಗುವುದಿಲ್ಲ. ಹಾಗಾಗಿ ಹೋರಾಟ ಅನಿವಾರ್ಯ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಹೇಳಿದರು.

ಅವರು ಸೋಮವಾರ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠಕ್ಕೆ ಭೇಟಿ ನೀಡಿ, 3ನೇ ವರ್ಷದ ವಾಲ್ಮೀಕಿ ಜಾತ್ರೆಯ ಸಿದ್ದತೆಗಳನ್ನು ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಸಂವಿಧಾನ ಬದ್ಧವಾಗಿ ಎಸ್ಟಿ ಮೀಸಲಾತಿ ಹೆಚ್ಚಳ ಆಗಲೇಬೇಕು. ಅದಕ್ಕೆ ಬೇಕಾದ ಸಮಯವನ್ನೂ ಕೊಟ್ಟಿದ್ದೇವೆ. ಈಗಿರುವ ಬಿಜೆಪಿ ಸರ್ಕಾರ ಮೀಸಲಾತಿ ಹೆಚ್ಚಳ ಮಾಡುವ ನಿರೀಕ್ಷೆ ಹೊಂದಿದ್ದೇವೆ. ಒಂದು ವೇಳೆ ಹೆಚ್ಚಳ ಮಾಡದಿದ್ದರೆ, ಶ್ರೀಗಳ ತೀರ್ಮಾನಕ್ಕೆ ಬದ್ಧರಾಗಿದ್ದೇವೆ ಎಂದರು.

ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಗೆ ಕಾಂಗ್ರೆಸ್ ಪಕ್ಷದಿಂದ ಅಭ್ಯರ್ಥಿ ತೀರ್ಮಾನ ಇನ್ನೂ ಆಗಿಲ್ಲ. ಪಕ್ಷ ಬಯಸಿದರೆ, ತಾವು ಸ್ಪರ್ಧಿಸುವುದಾಗಿ ಸತೀಶ್ ಜಾರಕಿಹೊಳಿ ಹೇಳಿದರು.



ಕೇಂದ್ರ ಹಾಗೂ ರಾಜ್ಯದಲ್ಲಿ ಒಂದೇ ಸರ್ಕಾರ ಇದ್ದರೂ ಸಹ ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ಈ ಕೇಂದ್ರ ಸರ್ಕಾರದಿಂದ ಜನ ಸಾಮಾನ್ಯರು ಏನನ್ನೂ ನಿರೀಕ್ಷೆ ಮಾಡಲು ಸಾಧ್ಯವಿಲ್ಲ.

ಕೋವಿಡ್ ಸಂದರ್ಭದಲ್ಲಿ ಘೋಷಣೆ ಮಾಡಿದ್ದ 20 ಲಕ್ಷ ಕೋಟಿ ರೂ. ಪ್ಯಾಕೇಜ್ ಎಲ್ಲಿದೆ ? ಎಂದು ಪ್ರಶ್ನಿಸಿದ ಜಾರಕಿಹೊಳಿ ಅವರು, ಜನರಿಗೆ ಗೊತ್ತಾಗದಂತೆ ನಿಧಾನವಾಗಿ ಪೆಟ್ರೋಲ್, ಡೀಸೆಲ್ ದರಗಳನ್ನು ಏರಿಕೆ ಮಾಡುತ್ತಲೇ ಬಂದಿದ್ದಾರೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಆಗುವ ಬಗ್ಗೆ ಕೇಳಿದ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಸಿಎಂ ಬದಲಾವಣೆ ಬಿಜೆಪಿ ಪಕ್ಷದ ಆಂತರಿಕ ವಿಚಾರ. ಈ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ.

ಇದಕ್ಕೂ ಮುನ್ನ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ ಅವರೊಂದಿಗೆ ಜಾತ್ರೆಯ ಸಿದ್ದತೆ ಹಾಗೂ ಸೌಲಭ್ಯಗಳ ಬಗ್ಗೆ ಚರ್ಚಿಸಿದರು.

ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ, ಜಾತ್ರಾ ಸಮಿತಿ ಸಂಚಾಲಕ ಹೊದಿಗೆರೆ ರಮೇಶ್, ಟಿ.ಈಶ್ವರ್, ಹರ್ತಿಕೋಟೆ ವೀರೇಂದ್ರ ಸಿಂಹ, ಜಿ.ಪಂ. ಮಾಜಿ ಅಧ್ಯಕ್ಷ ಡಾ. ವೈ.ರಾಮಪ್ಪ, ಜಿ.ಪಂ.ಮಾಜಿ ಸದಸ್ಯರಾದ ಕೆ.ಪಿ. ಪಾಲಯ್ಯ, ಎಂ.ನಾಗೇಂದ್ರಪ್ಪ, ತ್ಯಾವಣಿಗೆ ಗೋವಿಂದ ಸ್ವಾಮಿ, ಸಣ್ಣ ತಮ್ಮಪ್ಪ ಬಾರ್ಕಿ, ಜಿಗಳಿ ಆನಂದಪ್ಪ, ರಾಘು ದೊಡ್ಡಮನಿ, ವಿಜಯಶ್ರೀ ಮಹೇಂದ್ರಕುಮಾರ್, ಪಾರ್ವತಿ, ಕೊಕ್ಕನೂರು ಸೋಮಶೇಖರ್ ಮತ್ತಿತರರು ಈ ವೇಳೆ ಹಾಜರಿದ್ದರು.

## ಮೊಬೈಲ್ ಉಪಕರಣ, ಚಾರ್ಜರ್ ಬಿಡಿ ಭಾಗಗಳ ಮೇಲೆ ತೆರಿಗೆ

ನವದೆಹಲಿ, ಫೆ. 1 - ಮೊಬೈಲ್ ಉಪಕರಣಗಳು ಹಾಗೂ ಚಾರ್ಜರ್‌ಗಳ ಆಮದಿನ ಮೇಲೆ ತೆರಿಗೆ ಹೇರುವುದಾಗಿ ಕೇಂದ್ರ ಸರ್ಕಾರ ಪ್ರಕಟಿಸಿದೆ.

ಬಜೆಟ್ ಮಂಡನೆ ವೇಳೆ ಈ ವಿಷಯ ಪ್ರಕಟಿಸಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಮೊಬೈಲ್ ಉಪಕರಣಗಳೂ ಸೇರಿದಂತೆ 400 ಉಪಕರಣಗಳ ಆಮದಿಗೆ ಇರುವ ಸುಂಕ ವಿನಾಯಿತಿಯನ್ನು ಮರು ಪರಿಶೀಲಿಸುವುದಾಗಿ ಹೇಳಿದ್ದಾರೆ.

ದೇಶೀಯವಾಗಿ ಮೌಲ್ಯವರ್ಧನೆ ಆಗಬೇಕಿದೆ. ಹೀಗಾಗಿ ಚಾರ್ಜರ್ ಹಾಗೂ ಮೊಬೈಲ್‌ಗಳ ಬಿಡಿ ಭಾಗಗಳಿಗೆ ನೀಡಲಾಗಿರುವ ಆಮದು ವಿನಾಯಿತಿ ವಾಪಸ್ ಪಡೆಯಲಾಗುವುದು ಎಂದು ಸೀತಾರಾಮನ್ ತಿಳಿಸಿದ್ದಾರೆ.

ಸರ್ಕಾರದ ಕ್ರಮದಿಂದಾಗಿ ದೇಶೀಯವಾಗಿ ಉತ್ಪಾದನೆಗೆ ಉತ್ತೇಜನ ಸಿಗಲಿದೆ. ಇದರಿಂದಾಗಿ ಭಾರತ ಜಾಗತಿಕ ಮೌಲ್ಯ ಸರಣಿ ಹಾಗೂ ರಫ್ತಿನಲ್ಲಿ ಉತ್ತಮ ಪಾಲು ಪಡೆಯಲಿದೆ ಎಂದವರು ಹೇಳಿದ್ದಾರೆ.

## ಹಿಂದಿನ ಬಜೆಟ್‌ಗಿಂತ ರೈತರಿಗೆ ಶೇ. 1.5 ರಷ್ಟು ಅನುಕೂಲಕರ

ದಾವಣಗೆರೆ,ಫೆ.1- ನಗರದ ಬಾಪೂಜಿ ಎಂಬಿಎ ಕಾಲೇಜಿನಲ್ಲಿ ಇಂದು ನಡೆದ ಕೇಂದ್ರ ಸರ್ಕಾರದ ಬಜೆಟ್ 2021-22 ರ ನೇರ ಪ್ರಸಾರವನ್ನು ಎಂಬಿಎ, ಬಿ.ಕಾಂ. ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿತ್ತು.

ನಡೆದ ಅಧಿವೇಶನವನ್ನು ವಿದ್ಯಾರ್ಥಿಗಳು ಉತ್ಸುಕರಾಗಿ ವೀಕ್ಷಿಸಿದರು. ಬಜೆಟ್ ಬಗೆಗಿನ ವಿಚಾರಗಳನ್ನು ಫಲಕ ಚರ್ಚೆಯ ಮೂಲಕ



ಬಾಪೂಜಿ ಎಂಬಿಎ ಕಾಲೇಜು ಅಧ್ಯಕ್ಷ ಅಥಣಿ ಎಸ್. ವೀರಣ್ಣ, ತರಳಬಾಳು ಕೃಷಿ ವಿಜ್ಞಾನಿ ಬಸವನಗೌಡ, ಚಾರ್ಟರ್ಡ್ ಅಕೌಂಟೆಂಟ್ ಮುಂಡಾಸ್ ವೀರೇಂದ್ರ, ಬಾಪೂಜಿ ಎಂಬಿಎ ಕಾಲೇಜು ನಿರ್ದೇಶಕ ಸ್ವಾಮಿ ತ್ರಿಭುವಾನಂದ ಉಪಸ್ಥಿತಿಯಲ್ಲಿ ನಡೆಯಿತು.

ಬಜೆಟ್ ವಿಶ್ಲೇಷಿಸಿದ ಹಿರಿಯ ಕೈಗಾರಿಕೋದ್ಯಮಿ ಅಥಣಿ ವೀರಣ್ಣ, ಹಿಂದಿನ ಬಜೆಟ್‌ಗಿಂತ ರೈತರಿಗೆ ಶೇ. 1.5 ರಷ್ಟು ಅನುಕೂಲಕರವಾಗಿದೆ ಎಂದು ತಿಳಿಸಿದರು. ಪೆಟ್ರೋಲ್, ಡೀಸೆಲ್ ದರ ಮಾತ್ರ 100ರ ಸನ್ನಿಹಿತವಾಗಿರುವುದು ವಿಷಾದನೀಯ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳು ಕೂಡ ಬಜೆಟ್ ಬಗೆಗಿನ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಬಿ.ಐ.ಹೆಚ್.ಇ ಕಾಲೇಜಿನ ಪ್ರಾಂಶುಪಾಲ ಡಾ. ಬಿ. ವೀರಪ್ಪ ಪಾಲ್ಗೊಂಡಿದ್ದರು.

## ಜಂಗಮ ಸಹಕಾರಿಗೆ ವೀರಯ್ಯ ಅಧ್ಯಕ್ಷ

### ಉಪಾಧ್ಯಕ್ಷರಾಗಿ ಇಂದೂಧರ ನಿಶಾನಿಮಠ



ದಾವಣಗೆರೆ,ಫೆ.1- ನಗರದ ಕ್ರೆಡಿಟ್ ಕೋ-ಆಪರೇಟಿವ್ ಬ್ಯಾಂಕುಗಳಲ್ಲೊಂದಾದ ಜಂಗಮ ಸೌಹಾರ್ದ ಸಹಕಾರಿ ಆಡಳಿತ ಮಂಡಳಿ ಅಧ್ಯಕ್ಷರಾಗಿ ಸಂಘದ ಹಾಲಿ ಅಧ್ಯಕ್ಷ ಪ್ರೊ. ಎಸ್.ಎಂ. ವೀರಯ್ಯ ಅವರು ಮತ್ತೊಂದು ಅವಧಿಗೆ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಇಂದೂಧರ ನಿಶಾನಿಮಠ ಆಯ್ಕೆಯಾಗಿದ್ದಾರೆ. ಸಂಘದ ಕಚೇರಿ ಸಭಾಂಗಣದಲ್ಲಿ ನಡೆದ ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು. ಸಿ.ಎಂ. ಜಯದೇವಯ್ಯ, ಡಾ. ಎಲ್. ಎಂ. ಜ್ಞಾನೇಶ್ವರ, ಕೆ.ಎಂ. ಬಕ್ಕೇಶ್ವರ ಸ್ವಾಮಿ, ಬಿ.ಎಂ. ಚಂದ್ರಶೇಖರಯ್ಯ, ಎನ್.ಎಂ. ಬಸವರಾಜ ಯ್ಯ, ವೀರಯ್ಯ ಬಸಯ್ಯ ಮಳೇಮಠ, ಜೆ. ಕಿರಣ್ ಕುಮಾರ್, ಶ್ರೀಮತಿ ಕೆ.ಎಸ್. ನಳಿನ, ಶ್ರೀಮತಿ ಜಿ.ಎಂ. ಪ್ರೇಮಾ ಅವರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಆಡಳಿತ ಮಂಡಳಿಗೆ ಇದೇ ದಿನಾಂಕ 16ರಂದು ಚುನಾವಣೆ ನಡೆದಿದ್ದನ್ನು ಇಲ್ಲಿ ಸ್ಮರಿಸಬಹುದು. ಚುನಾವಣೆ ನಂತರ ನಡೆದ ಈ ಸಭೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡಲಾಯಿತು.

## ಕುಂದುವಾಡ ಕೆರೆ ಹೂಳನ್ನು ರೈತರು ಪಡೆಯಬಹುದು

ದಾವಣಗೆರೆ, ಫೆ.1- ನಗರದ ಕುಂದುವಾಡ ಕೆರೆಯಲ್ಲಿ ಸ್ಮಾರ್ಟ್‌ಸಿಟಿ ಲಿ. ವತಿಯಿಂದ ಕೆರೆ ಅಭಿವೃದ್ಧಿ ಕಾರ್ಯ ನಡೆಯುತ್ತಿದ್ದು, ಕೆರೆಯಲ್ಲಿನ ಹೂಳನ್ನು ತೆಗೆಯಲಾಗುತ್ತಿದೆ. ಆಸಕ್ತ ರೈತರು ತಮ್ಮ ಜಮೀನಿಗೆ ಅಗತ್ಯವಾದ ಹೂಳನ್ನು ತೆಗೆದುಕೊಂಡು ಹೋಗಬಹುದು ಎಂದು ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ತಿಳಿಸಿದ್ದಾರೆ.


















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte